ಆ	ಬಂದಿದ್ದಲ್ಲಿ, ಯಾವಾಗ ಕಾಮಗಾರಿಯನ್ನು ಕೈಗೊಳ್ಳಲಾಗುತ್ತದೆ (ವಿವರ ನೀಡುವುದು)?	ಕಾಮಗಾರಿಯನ್ನು ನಿರ್ವಹಿಸುವ ಸಂದರ್ಭದಲ್ಲಿ ಸ್ಥಳಕ್ಕನುಗುಣವಾಗಿ, ಸ್ಥಳೀಯ ಶಾಸಕರು, ಜನಪ್ರತಿನಿಧಿಗಳು ಸ್ಥಳ ಪರಿಶೀಲನಾ ಸಂದರ್ಭದಲ್ಲಿ ಸೂಚಿಸಿದಂತೆ ಮತ್ತು ಬೆಸ್ಕಾಂ, ಬೆಂಗಳೂರು ಜಲಮಂಡಳಿಯ ಕೋರಿಕೆಯಂತೆ ಹೆಚ್ಚುವರಿ ಡಕ್ಟ್‌ಗಳು, ಕೊಳವೆ ಮಾರ್ಗಗಳನ್ನು ಅಳವಡಿಸಿರುವುದರಿಂದ, ಕೊಳವೆ ಮಾರ್ಗಗಳನ್ನು ಅಳವಡಿಸುವ ಸಂದರ್ಭದಲ್ಲಿ ಅನೇಕ ಮರಗಳು ಅಡ್ಡ ಬಂದಿದ್ದು, ಅವುಗಳನ್ನು ಕಾಪಾಡುವ ಹಿತದೃಷ್ಟಿಯಿಂದ, ಚೇಂಬರ್‌ಗಳ ವಿನ್ಯಾಸದಲ್ಲಿ ಬದಲಾವಣೆ ಮಾಡಿರುವುದರಿಂದ ಹಾಗೂ ನೃಪತುಂಗ ರಸ್ತೆಯಲ್ಲಿ ವೈಟ್ ಟಾಪಿಂಗ್ ಅಳವಡಿಸಿ ಅಭಿವೃದ್ಧಿ ಪಡಿಸಿರುವುದರಿಂದ ಟೆಂಡರ್‌ನಲ್ಲಿ ಮಂಜೂರಾದ ಪರಿಮಾಣಗಳಲ್ಲಿ ಹೆಚ್ಚುವರಿಯಾಗಿರುತ್ತದೆ. ಆದ್ದರಿಂದ, ಡಾ॥ ಸಿದ್ದಯ್ಯ ಪುರಾಣಿಕ ರಸ್ತೆ ಹಾಗೂ ಜಯನಗರ 11ನೇ ಮುಖ್ಯರಸ್ತೆ ಕೂಲ್ ಜಾಯಿಂಟ್‌ನಿಂದ ಪುಟ್ಟೇನಹಳ್ಳಿ ಅಂಡರ್ ಪಾಸ್‌ವರೆಗೆ ಕಾಮಗಾರಿಗಳನ್ನು ಟೆಂಡರ್ ಶ್ಯೂರ್ ಮಾದರಿಯಲ್ಲಿ ಪೂರ್ಣಗೊಳಿಸಲು ರೂ.34.40 ಕೋಟಿಗಳ ಹೆಚ್ಚುವರಿ ಅನುದಾನದ ಅವಶ್ಯಕತೆ ಇದ್ದು, ಆರ್ಥಿಕ ಪರಿಸ್ಥಿತಿಗನುಗುಣವಾಗಿ ಅನುದಾನ ಒದಗಿಸುವ ಬಗ್ಗೆ ಪರಿಶೀಲಿಸಲಾಗುವುದು.

ಸಂಖ್ಯೆ: ನಅಇ 33 ಎಂಎನ್‌ವೈ 2021 (ಇ)

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 32 ಎಂಎನ್‌ವೈ 2021

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 05-02-2021

ಇವರಿಂದ,

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ,
ವಿಕಾಸಸೌಧ, ಬೆಂಗಳೂರು.

ಇವರಿಗೆ,

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ಬೆಂಗಳೂರು.

ಮಾನ್ಯರೇ,

ವಿಷಯ: ವಿಧಾನ ಸಭೆಯ ಸದಸ್ಯರಾದ ಶ್ರೀ/ಶ್ರೀಮತಿ ಶ್ರೀ ಮುನಿರತ್ನ ಇವರು ಮಂಡಿಸಿರುವ ~~ನಿಯಮ 351/69/73 ಮತ್ತು ಶೂನ್ಯವೇಳೆಗೆ ಸಂಬಂಧಿಸಿದ~~ ಚು/ಗು ಪ್ರ.ಸಂ. 1061 ಉತ್ತರ ಕಳುಹಿಸಿಕೊಡುವ ಬಗ್ಗೆ

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಧಾನಸಭೆಯ ಮಾನ್ಯ ಸದಸ್ಯರಾದ ಶ್ರೀ/ಶ್ರೀಮತಿ ಶ್ರೀ ಮುನಿರತ್ನ ಇವರು ಮಂಡಿಸಿರುವ ~~ನಿಯಮ 351/69/73 ಮತ್ತು ಶೂನ್ಯವೇಳೆಗೆ~~ ಚು/ಗು ಪ್ರ. ಸಂಬಂಧಿಸಿದ ಉತ್ತರದ ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ತಮಗೆ ಕಳುಹಿಸಲು ನಾನು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ಲಕ್ಷ್ಮಿ (ಸಾಗರ್.ಎನ್.ಕೆ.)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ (ಬಿ.ಬಿ.ಎಂ.ಪಿ.)

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1061
2. ಸದಸ್ಯರ ಹೆಸರು : ಶ್ರೀಮತಿ ಸೌಮ್ಯ ರೆಡ್ಡಿ (ಜಯನಗರ)
3. ಉತ್ತರಿಸುವ ದಿನಾಂಕ : 05-02-2021
4. ಉತ್ತರಿಸುವವರು : ಮುಖ್ಯಮಂತ್ರಿಗಳು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಜಯನಗರ ಕ್ಷೇತ್ರದಲ್ಲಿ ಮೂರು ಒಣತ್ಯಾಜ್ಯ ನಿರ್ವಹಣೆ ಘಟಕಗಳಿದ್ದು, ಜೆ.ಪಿ.ನಗರ ವಾರ್ಡ್‌ನ ಒಣತ್ಯಾಜ್ಯ ನಿರ್ವಹಣೆ ಘಟಕದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಮೇಲ್ವಿಚಾರಕಿಗೆ ಕಳೆದ 13 ತಿಂಗಳಿಂದ ಸಂಬಳವನ್ನು ವಿತರಣೆ ಮಾಡದಿರುವುದು ಹಾಗೂ ಎರಡು ಗಾಡಿಯ ವಾಹನ ಚಾಲಕರು. ಕ್ಲೀನರ್‌ಗಳಿಗೂ ಸಹ ವೇತನವನ್ನು ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಯಾವಾಗ ವೇತನವನ್ನು ಬಿಡುಗಡೆ ಮಾಡಲಾಗುತ್ತದೆ (ವಿವರ ನೀಡವುದು)?	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ನಂ.177 ಜೆ.ಪಿ.ನಗರ ವಾರ್ಡ್‌ನಲ್ಲಿ ಒಣತ್ಯಾಜ್ಯ ಸಂಗ್ರಹಣೆ ಕೇಂದ್ರವನ್ನು ನಡೆಸಲು ಚಿಂದಿ ಆಯುವವರಾದ ಶ್ರೀಮತಿ ಹಂಸ ತಿರುಮಲ ರವರಿಗೆ ಕಾರ್ಯಾದೇಶವನ್ನು ನೀಡಲಾಗಿದ್ದು, ಇವರಿಗೆ ಒಣತ್ಯಾಜ್ಯ ಸಂಗ್ರಹಿಸಲು ಎರಡು ಆಟೋಗಳಿಗೆ ಹಣ ಪಾವತಿ ಮಾಡಲಾಗುತ್ತಿದೆ. ವಾಹನ ಚಾಲಕರು ಮತ್ತು ಸಹಾಯಕರಿಗೆ ಅವರೇ ವೇತನವನ್ನು ನೀಡಬೇಕಾಗುತ್ತದೆ. ಇವರು 2019 ರಿಂದ ಏಪ್ರಿಲ್ 2020 ರವರೆಗಿನ ಬಿಲ್ಲುಗಳನ್ನು ಪಾವತಿಗಾಗಿ ಆಗಸ್ಟ್ 2020 ರಲ್ಲಿ ಸಲ್ಲಿಸಿದ್ದು, ಮೇ 2020 ರಿಂದ ಡಿಸೆಂಬರ್ 2020 ರವರೆಗಿನ ಬಿಲ್‌ಗಳನ್ನು ಸಲ್ಲಿಸಿದ ನಂತರ ಹಣ ಪಾವತಿ ಮಾಡಲು ಅಗತ್ಯ ಕ್ರಮವಹಿಸಲಾಗುತ್ತದೆ.

ಸಂಖ್ಯೆ: ನಅಇ 32 ಎಂಎನ್‌ವೈ 2021 (ಇ)

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 31 ಎಂಎನ್‌ವೈ 2021

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 01-02-2021

ಇವರಿಂದ,

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ,
ವಿಕಾಸಸೌಧ, ಬೆಂಗಳೂರು.

ಇವರಿಗೆ,

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ಬೆಂಗಳೂರು.

THS
05/2/21

ಮಾನ್ಯರೇ,

ವಿಷಯ: ವಿಧಾನ ಸಭೆಯ ಸದಸ್ಯರಾದ ಶ್ರೀ/ಶ್ರೀಮತಿ [illegible] ಇವರು ಮಂಡಿಸಿರುವ ~~ನಿಯಮ 351/69/73 ಮತ್ತು ಶೂನ್ಯವೇಳೆಗೆ~~ [illegible] 1063ಕ್ಕೆ ಸಂಬಂಧಿಸಿದ ಉತ್ತರ ಕಳುಹಿಸಿಕೊಡುವ ಬಗ್ಗೆ

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಧಾನಸಭೆಯ ಮಾನ್ಯ ಸದಸ್ಯರಾದ ಶ್ರೀ/ಶ್ರೀಮತಿ [illegible] ಇವರು ಮಂಡಿಸಿರುವ ~~ನಿಯಮ 351/69/73 ಮತ್ತು ಶೂನ್ಯವೇಳೆಗೆ~~ [illegible] 1063ಕ್ಕೆ ಸಂಬಂಧಿಸಿದ ಉತ್ತರದ 30 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ತಮಗೆ ಕಳುಹಿಸಲು ನಾನು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ಸಾಗರ್ ಎನ್.ಕೆ.)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ (ಬಿ.ಬಿ.ಎಂ.ಪಿ.)

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1063
2. ಸದಸ್ಯರ ಹೆಸರು : ಶ್ರೀಮತಿ ಸೌಮ್ಯ ರೆಡ್ಡಿ (ಜಯನಗರ)
3. ಉತ್ತರಿಸುವ ದಿನಾಂಕ : 05-02-2021
4. ಉತ್ತರಿಸುವವರು : ಮುಖ್ಯಮಂತ್ರಿಗಳು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಹಸಿ ಕಸ ಮತ್ತು ಒಣಕಸವನ್ನು ಬೇರ್ಪಡಿಸುವಲ್ಲಿ ಹಲವು ಯೋಜನೆಗಳನ್ನು ರೂಪಿಸಿದ್ದರೂ ಸಹ ಹಸಿ ಕಸ ಹಾಗೂ ಒಣ ಕಸವನ್ನು ಬೇರ್ಪಡಿಸಲು ಹಿಂದೇಟು ಹಾಕಲು ಕಾರಣವೇನು;	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಸುಮಾರು 709 ಚ.ಕಿ.ಮೀ. ವ್ಯಾಪ್ತಿ ಹೊಂದಿದ್ದು, ಪ್ರಸ್ತುತ ಜನಸಂಖ್ಯೆಯು 130 ಲಕ್ಷ ಮೀರಿರುತ್ತದೆ. ಪಾಲಿಕೆಯ 198 ವಾರ್ಡ್ ಸೇರಿ ಒಟ್ಟು ಪ್ರತಿದಿನ ಗೃಹ ತ್ಯಾಜ್ಯ (ಮನೆ ಮನೆಗಳಿಂದ ಸಂಗ್ರಹಿಸುವ ಕಸ) ಸುಮಾರು 4000 ಮೆಟ್ರಿಕ್ ಟನ್ ಇರುತ್ತದೆ. ಸದರಿ ಘನತ್ಯಾಜ್ಯವನ್ನು ಮನೆ ಮನೆಗಳಿಂದ ಹಸಿಕಸ, ಒಣಕಸ ಮತ್ತು ಗೃಹ ಹಾನಿಕಾರಕ ತ್ಯಾಜ್ಯವನ್ನಾಗಿ ಬೇರ್ಪಡಿಸಿ ಸಂಗ್ರಹಣೆ ಮಾಡಿ, ಹಸಿ ಕಸವನ್ನು ಸಂಸ್ಕರಣಾ ಘಟಕಕ್ಕೆ ಸಾಗಣೆ ಮಾಡಲು, ಒಣತ್ಯಾಜ್ಯವನ್ನು ಒಣತ್ಯಾಜ್ಯ ಸಂಗ್ರಹಣೆ ಘಟಕಗಳ ಮೂಲಕ ನಿರ್ವಹಿಸಲು ಕ್ರಮ ಕೈಗೊಳ್ಳಲಾಗಿದೆ. ಗೃಹ ಹಾನಿಕಾರಕ ತ್ಯಾಜ್ಯವನ್ನು ಪ್ರತ್ಯೇಕವಾಗಿ ಸಂಗ್ರಹಿಸಿ ನಿರ್ವಹಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಪ್ರಸ್ತುತ ಪ್ರತಿದಿನ ಸುಮಾರು 1200 ಮೆಟ್ರಿಕ್ ಟನ್‌ರಷ್ಟು ಹಸಿ ಕಸವನ್ನು ಸಂಸ್ಕರಣಾ ಘಟಕಗಳಲ್ಲಿ ಸಂಸ್ಕರಣೆ ಮಾಡಲಾಗುತ್ತಿದೆ. ಒಣಕಸವನ್ನು ಪ್ರತ್ಯೇಕವಾಗಿ ಪ್ರತಿ ವಾರ್ಡ್‌ನಲ್ಲಿ ವಾರಕ್ಕೆ 2 ಬಾರಿ ಮಾತ್ರ ಸಂಗ್ರಹಿಸಿ ಒಣತ್ಯಾಜ್ಯ ಸಂಗ್ರಹಣಾ ಕೇಂದ್ರಗಳಿಗೆ ಘನತ್ಯಾಜ್ಯ ನಿಯಮಾವಳಿ-2016 ರಂತೆ ಚಿಂದಿ ಆಯುವವರು ಮತ್ತು ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳನ್ನು ನಿಯೋಜಿಸಿ ಸುಮಾರು 119 ಒಣತ್ಯಾಜ್ಯ ಸಂಗ್ರಹಣಾ ಘಟಕಗಳಲ್ಲಿ ಹಾಗೂ ಅಸಂಘಟಿತ ಸಂಗ್ರಹಣೆ ಮೂಲಕ ಪ್ರತಿದಿನ ಸುಮಾರು 400 ಮೆಟ್ರಿಕ್ ಟನ್ ನಿರ್ವಹಣೆಯನ್ನು ಮಾಡಲಾಗುತ್ತಿರುತ್ತದೆ. ಹಸಿ ಮತ್ತು ಮಿಶ್ರ ತ್ಯಾಜ್ಯವನ್ನು ನಿರ್ವಹಣೆ ಮಾಡಲು ಪಾಲಿಕೆಯು ಪ್ರತಿದಿನ ಸುಮಾರು 4213 ಆಟೋ ಟಿಪ್ಪರ್‌ಗಳು ಹಾಗೂ 565 ಕಾಂಪ್ಯಾಕ್ಟರ್‌ಗಳನ್ನು ನಿಯೋಜಿಸಿಕೊಂಡು ನಿರ್ವಹಿಸಲಾಗುತ್ತಿದೆ. ಮುಂದುವರೆದು, ತ್ಯಾಜ್ಯ ವಿಂಗಡಣೆ ಕುರಿತು ಮನೆ ಮನೆಗೆ ತೆರಳಿ ನಿವಾಸಿಗಳಿಗೆ ಸಂಪರ್ಕ ಕಾರ್ಯಕರ್ತರ ಮೂಲಕ ಅರಿವು ಮೂಡಿಸುವುದು, ವಾರ್ಡ್ ಮಟ್ಟದಲ್ಲಿ ಎನ್.ಜಿ.ಓ., ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ ಮತ್ತು ಚುನಾಯಿತ ಪ್ರತಿನಿಧಿಗಳನ್ನು

		ಸಹ ಸೇರಿಸಿಕೊಂಡು ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ. ಈ ಎಲ್ಲಾ ಕ್ರಮಗಳ ಮಧ್ಯೆ ಕಸವನ್ನು ವಿಂಗಡಿಸಿ ಪಾಲಿಕೆಯ ವಾಹನಗಳಿಗೆ ಮನೆಮನೆಯಿಂದ ನೀಡಲು ಹಲವಾರು ನಿವಾಸಿಗಳು ಬೆಂಗಳೂರು ನಗರದ ನಿವಾಸಿಗಳ ಜೀವನಶೈಲಿ ಮತ್ತು ಕೆಲಸದ ಅವಧಿಯಲ್ಲಿ ವ್ಯತ್ಯಾಸಗಳಿದ್ದು, ಅರಿವಿನ ಕೊರತೆ, ಇಚ್ಛಾಶಕ್ತಿಯ ಕೊರತೆ, ಸಾಮಾಜಿಕ ಜವಾಬ್ದಾರಿಯ ಕೊರತೆ ಮತ್ತು ಪಾಲಿಕೆಯ ಹಲವು ಗುತ್ತಿಗೆದಾರರು ಮತ್ತು ಅವರ ಸಿಬ್ಬಂದಿಗಳ ನಿರ್ಲಕ್ಷತೆಯಿಂದ ವಿಂಗಡಿಸಿದ ಕಸವನ್ನು ಮಿಶ್ರ ಮಾಡಿ ಸಾಗಿಸುವುದು ಈ ತರಹದ ಮಿಶ್ರ ತ್ಯಾಜ್ಯ ಹೆಚ್ಚಾಗಿ ಭೂಭರ್ತಿ ಘಟಕಕ್ಕೆ ಸಾಗಿಸಲು ಕಾರಣವಾಗಿರುತ್ತದೆ. ಪಾಲಿಕೆ ವತಿಯಿಂದ ಕಸವನ್ನು ವಿಂಗಡಿಸಿ ಹಸಿತ್ಯಾಜ್ಯ ಮತ್ತು ಒಣತ್ಯಾಜ್ಯವನ್ನು ಪ್ರತ್ಯೇಕವಾಗಿ ಸಂಸ್ಕರಿಸಲು ಮುಂಬರುವ ದಿನಗಳಲ್ಲಿ ಹೆಚ್ಚುವರಿಯಾಗಿ ಒತ್ತು ಕೊಟ್ಟು ಜಾರಿಗೆ ತಂದು ಸೂಕ್ತ ರೀತಿಯಲ್ಲಿ ಮಾನಿಟರಿಂಗ್ ಸಿಸ್ಟಮ್ ಅಳವಡಿಸಿಕೊಂಡು ಶೇಕಡವಾರು ವಿಂಗಡಿಸಿದ ಕಸವನ್ನು ಹೆಚ್ಚು ವ್ಯವಸ್ಥಿತ ರೀತಿಯಲ್ಲಿ ನಿರ್ವಹಣೆ ಮಾಡಲು ಕ್ರಮ ಕೈಗೊಳ್ಳಲಾಗುವುದು.
ಆ	ಹಸಿ ಕಸ ಮತ್ತು ಒಣ ಕಸವನ್ನು ಬೇರ್ಪಡಿಸುವುದರ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು (ಮಾಹಿತಿ ನೀಡುವುದು)?	ಪಾಲಿಕೆಯು ಘನತ್ಯಾಜ್ಯ ನಿಯಮಾವಳಿ-2016 ಜಾರಿಯಾದ ನಂತರ ಘನತ್ಯಾಜ್ಯ ನಿರ್ವಹಣೆ ಉಪ ನಿಯಮಗಳು (ಮಾರ್ಚ್ 2020) ಗಳನ್ನು ರೂಪಿಸಲಾಗಿದ್ದು, ಇದರನ್ವಯ ತ್ಯಾಜ್ಯ ವಿಂಗಡಣೆಯನ್ನು ಕಡ್ಡಾಯಗೊಳಿಸಲಾಗಿರುತ್ತದೆ. ಪಾಲಿಕೆಯಿಂದ ನೂತನವಾಗಿ ಟೆಂಡರ್ ಕರೆದು ಪ್ರಸ್ತುತ ವಾರ್ಡ್‌ವಾರು ತ್ಯಾಜ್ಯವನ್ನು ಪ್ರತ್ಯೇಕವಾಗಿ ವಿಂಗಡಣೆ ಮಾಡಿ ಮನೆಮನೆಗಳಿಂದ ಕೇವಲ ಹಸಿ ತ್ಯಾಜ್ಯ, ಸ್ಯಾನಿಟರಿ ತ್ಯಾಜ್ಯ ಹಾಗೂ ಬೀದಿ ಕಸ ತ್ಯಾಜ್ಯವನ್ನು ಪ್ರಾಥಮಿಕ ಹಂತದಲ್ಲಿ ಸಂಗ್ರಹಣೆ ಮಾಡಲು ಕ್ರಮ ಕೈಗೊಳ್ಳಲಾಗಿರುತ್ತದೆ. ಅದೇ ರೀತಿ ಮುಂಬರುವ ದಿನಗಳಲ್ಲಿ ಸದರಿ ಕ್ರಮವನ್ನು ಎಲ್ಲಾ ವಾರ್ಡ್‌ಗಳಲ್ಲಿಯೂ ವಿಸ್ತರಿಸಲಾಗುವುದು. ಪ್ರತಿ ವಾರ್ಡ್‌ಗಳಲ್ಲಿ ಮಾರ್ಷಲ್‌ಗಳನ್ನು ನಿಯೋಜಿಸಿಕೊಂಡಿದ್ದು, ಪ್ರಾಥಮಿಕ ವಿಂಗಡಣೆ ಹಾಗೂ ಸಂಗ್ರಹಣೆ ಮತ್ತು ಸಾಗಣೆಯನ್ನು ಮಾಡುವ ಕಾಮಗಾರಿಯ

೩೭

		ಮೇಲುಸ್ತುವಾರಿಯನ್ನು ಪ್ರತಿ ವಾರ್ಡ್‌ನ ಕಿರಿಯ ಆರೋಗ್ಯ ಪರಿವೀಕ್ಷಕರು, ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ) ರವರೊಂದಿಗೆ ಸ್ಥಳೀಯ ಲಿಂಕ್ ವರ್ಕರ್ಸ್, ಎನ್.ಜಿ.ಓ., ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ ಹಾಗೂ ಸ್ಥಳೀಯ ಜನಪ್ರತಿನಿಧಿಗಳ ಸಹಕಾರದೊಂದಿಗೆ ತ್ಯಾಜ್ಯ ವಿಂಗಡಣೆಯನ್ನು ಹೆಚ್ಚು ಸಮರ್ಪಕವಾಗಿ ನಿರ್ವಹಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ. ಮುಂಬರುವ ದಿನಗಳಲ್ಲಿ ಇನ್ನೂ ಹೆಚ್ಚುವರಿಯಾಗಿ ತ್ಯಾಜ್ಯ ವಿಂಗಡಣೆಗೆ ಒತ್ತುಕೊಟ್ಟು ತ್ಯಾಜ್ಯ ನಿರ್ವಹಣೆಯನ್ನು ಪರಿಣಾಮಕಾರಿಯಾಗಿ ಮಾಡಲು ಕ್ರಮ ಕೈಗೊಳ್ಳಲಾಗುತ್ತದೆ.

ಸಂಖ್ಯೆ: ನಅಇ 31 ಎಂಎನ್‌ವೈ 2021 (ಇ)

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 30 ಎಂಎನ್ ಎ 2021

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 05-02-2021

ಇವರಿಂದ,

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ,
ವಿಕಾಸಸೌಧ, ಬೆಂಗಳೂರು.

146
05/2/21

ಇವರಿಗೆ,

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ಬೆಂಗಳೂರು.

ಮಾನ್ಯರೇ,

ವಿಷಯ: ವಿಧಾನ ಸಭೆಯ ಸದಸ್ಯರಾದ ಶ್ರೀ/ಶ್ರೀಮತಿ [handwritten name] ಇವರು ಮಂಡಿಸಿರುವ ~~ನಿಯಮ 351/69/73 ಮತ್ತು ಶೂನ್ಯವೇಳೆಗೆ~~ ಸಂಬಂಧಿಸಿದ ಚುಗುಪ್ರ 1064 ಉತ್ತರ ಕಳುಹಿಸಿಕೊಡುವ ಬಗ್ಗೆ

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಧಾನಸಭೆಯ ಮಾನ್ಯ ಸದಸ್ಯರಾದ ಶ್ರೀ/ಶ್ರೀಮತಿ [handwritten name] ಇವರು ಮಂಡಿಸಿರುವ ~~ನಿಯಮ 351/69/73 ಮತ್ತು ಶೂನ್ಯವೇಳೆಗೆ~~ ಚುಗುಪ್ರ 1064 ಸಂಬಂಧಿಸಿದ ಉತ್ತರದ 25 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ತಮಗೆ ಕಳುಹಿಸಲು ನಾನು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ಲಕ್ಷ್ಮಿ ಸಾಗರ್.ಎನ್.ಕೆ.)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ (ಬಿ.ಬಿ.ಎಂ.ಪಿ.)

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1064
2. ಸದಸ್ಯರ ಹೆಸರು : ಶ್ರೀಮತಿ ಸೌಮ್ಯ ರೆಡ್ಡಿ (ಜಯನಗರ)
3. ಉತ್ತರಿಸುವ ದಿನಾಂಕ : 05-02-2021
4. ಉತ್ತರಿಸುವವರು : ಮುಖ್ಯಮಂತ್ರಿಗಳು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಜಯನಗರ ಕ್ಷೇತ್ರದ ಅನುದಾನ ಕಡಿತದಿಂದಾಗಿ ಹಲವು ರಸ್ತೆಗಳ ಪಾದಚಾರಿ ಮಾರ್ಗಗಳ ಕಾಮಗಾರಿಗಳನ್ನು ಕೈಗೊಳ್ಳಲು ಸಾಧ್ಯವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಜಯನಗರ ವಿಧಾನಸಭಾ ಕ್ಷೇತ್ರದ ಕಾಮಗಾರಿ ವಿಭಾಗದಲ್ಲಿನ ವಾರ್ಡ್‌ಗಳ ವ್ಯಾಪ್ತಿಯ ಬಹುಮುಖ್ಯವಾಗಿರುವ ರಸ್ತೆಗಳು ಹಾಗೂ ಪಾದಚಾರಿ ಮಾರ್ಗಗಳನ್ನು ಅಭಿವೃದ್ಧಿ ಪಡಿಸಲು ಸರ್ಕಾರದಿಂದ ನವನಗರೋತ್ಥಾನ ಅಡಿಯಲ್ಲಿ ಅನುಮೋದನೆಯಾಗಿರುವ ರೂ.21.40 ಕೋಟಿಗಳ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ ಹಾಗೂ ಸರ್ಕಾರದ ಆದೇಶ ಸಂಖ್ಯೆ: ನಅಇ 128 ಎಂಎನ್‌ವೈ 2019, ದಿನಾಂಕ: 21-01-2020 ರಂತೆ ಜಯನಗರ ವಿಭಾಗಕ್ಕೆ ರೂ.36.48 ಕೋಟಿಗಳ ಅನುದಾನ ನೀಡಲಾಗಿದ್ದು, ಈ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಈ ಯೋಜನೆಯಲ್ಲಿಯೂ ರಸ್ತೆಗಳ ಹಾಗೂ ಪಾದಚಾರಿ ಮಾರ್ಗಗಳನ್ನು ಅಭಿವೃದ್ಧಿ ಪಡಿಸಲು ಉದ್ದೇಶಿಸಲಾಗಿದೆ.
ಆ	ಬಂದಿದ್ದಲ್ಲಿ, ಈ ಸಂಬಂಧ ಅನುದಾನ ಬಿಡುಗಡೆ ಮಾಡಲು ಸರ್ಕಾರದ ನಿಲುವೇನು (ವಿವರ ನೀಡುವುದು)?	ಆರ್ಥಿಕ ಪರಿಸ್ಥಿತಿಗನುಗುಣವಾಗಿ ಅನುದಾನ ಒದಗಿಸುವ ಬಗ್ಗೆ ಪರಿಶೀಲಿಸಲಾಗುವುದು.

ಸಂಖ್ಯೆ: ನಅಇ 30 ಎಂಎನ್‌ವೈ 2021 (ಇ)

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ಸರ್ಕಾರ

ಸಂಖ್ಯೆ: HORTI 47 HGM 2021

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿ: 04-02-2021

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿ
ತೋಟಗಾರಿಕೆ ಇಲಾಖೆ

4V 125 5/2/21

ಇವರಿಗೆ:
ಕಾರ್ಯದರ್ಶಿಯವರು
ಕರ್ನಾಟಕ ವಿಧಾನಸಭಾ ಸಚಿವಾಲಯ,
ವಿಧಾನಸೌಧ, ಬೆಂಗಳೂರು.

ಮಾನ್ಯರೇ,

ವಿಷಯ :ಶ್ರೀ ರವೀಂದ್ರ ಶ್ರೀಕಂಠಯ್ಯ, ವಿಸಸ, ಇವರ ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ:1085ರ ಬಗ್ಗೆ.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ ರವೀಂದ್ರ ಶ್ರೀಕಂಠಯ್ಯ, ವಿಸಸ, ಇವರ ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ:1085ಕ್ಕೆ ಉತ್ತರದ 25 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

T.V. Sunandamma 04/02/2021
(ಟಿ.ವಿ.ಸುನಂದಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ
ತೋಟಗಾರಿಕೆ ಇಲಾಖೆ

4/2

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1085
ಸದಸ್ಯರ ಹೆಸರು : ಶ್ರೀ ರವೀಂದ್ರ ಶ್ರೀಕಂಠಯ್ಯ(ಶ್ರೀರಂಗಪಟ್ಟಣ)
ಉತ್ತರಿಸುವ ಸಚಿವರು : ಮಾನ್ಯತೋಟಗಾರಿಕೆ ಮತ್ತು ರೇಷ್ಮೆ ಸಚಿವರು
ಉತ್ತರಿಸಬೇಕಾದ ದಿನಾಂಕ : 05-02-2021

ಕ್ರ. ಸಂ.	ಪ್ರಶ್ನೆ	ಉತ್ತರ
ಅ	ಶ್ರೀರಂಗಪಟ್ಟಣ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ರೈತರು ಬೆಳೆದಿರುವ ತರಕಾರಿ ಮತ್ತು ಹಣ್ಣು ಹಾಗೂ ಇತ್ಯಾದಿಗಳನ್ನು ಸಂಗ್ರಹಣೆ (ಸ್ಟೋರೇಜ್ ಕೇಂದ್ರ) ಮಾಡಲು ಹೊಸದಾಗಿ ಯಂತ್ರವನ್ನು ಅಳವಡಿಸಲು ರೈತರು ಮತ್ತು ಸಾರ್ವಜನಿಕರು ಮನವಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಇಲ್ಲ.
ಆ	ಹಾಗಿದ್ದಲ್ಲಿ, ರೈತರು ಮತ್ತು ಸಾರ್ವಜನಿಕರ ಹಿತದೃಷ್ಟಿಯಿಂದ ಯಾವಾಗ ಸ್ಟೋರೇಜ್ ಕೇಂದ್ರ ಅಳವಡಿಸಲು ಸರ್ಕಾರ ಕ್ರಮಕೈಗೊಳ್ಳಲಿದೆ?	ರೈತರು ಮತ್ತು ಸಾರ್ವಜನಿಕರ ಹಿತದೃಷ್ಟಿಯಿಂದ ತರಕಾರಿ ಮತ್ತು ಹಣ್ಣು ಇತ್ಯಾದಿಗಳನ್ನು ಸಂಗ್ರಹಣೆ ಮಾಡಲು ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆ ಹಾಗೂ ರಾಷ್ರೀಯ ಕೃಷಿ ವಿಕಾಸ ಯೋಜನೆಗಳಡಿ ಈ ಕೆಳಕಂಡ ಘಟಕಗಳಿಗೆ ಸಹಾಯಧನ ನೀಡಲು ಅವಕಾಶವಿರುತ್ತದೆ. ಅ) ಪ್ಯಾಕ್ ಹೌಸ್: ಒಟ್ಟು ಘಟಕ ವೆಚ್ಚ ರೂ.4.00 ಲಕ್ಷಗಳಿಗೆ ಶೇ.50 ರಂತೆಗರಿಷ್ಠ ರೂ.2.00 ಲಕ್ಷಗಳವರೆಗೆ ಸಹಾಯಧನ ನೀಡಲಾಗುತ್ತದೆ. ಆ) ಈರುಳ್ಳಿ ಶೇಖರಣಾ ಘಟಕ: ಒಟ್ಟು ಘಟಕ ವೆಚ್ಚ ರೂ.1.75 ಲಕ್ಷಗಳಿಗೆ ಶೇ.50 ರಂತೆಗರಿಷ್ಠ ರೂ.0.875 ಲಕ್ಷಗಳವರೆಗೆ ಸಹಾಯಧನ ನೀಡಲಾಗುತ್ತದೆ. ಇ) ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಖಾಸಗಿ ಅಥವಾ ಸಹಕಾರಿ ಸಂಘದಲ್ಲಿ ಕೋಲ್ಡ್ ಸ್ಟೋರೇಜ್ ನ್ನು ರೈತರು ತಾವೇ ನಿರ್ಮಿಸಿಕೊಂಡಲ್ಲಿ ಅದಕ್ಕೆ ಸರ್ಕಾರದಿಂದ ಶೇ.35 ರಷ್ಟು ಸಹಾಯಧನ ನೀಡಲಾಗುತ್ತದೆ. Type-1 ಗರಿಷ್ಠ 5000 MT ಸಾಮರ್ಥ್ಯದ ಶೀಥಲ ಗೃಹ ಘಟಕ ಸ್ಥಾಪನೆಗೆ — ಘಟಕದ ವೆಚ್ಚ ರೂ. 8000/- ಪ್ರತಿ MT ಶೇ.35 ರಂತೆ ಗರಿಷ್ಠ ರೂ.140.00 ಲಕ್ಷಗಳವರೆಗೆ ಸಹಾಯಧನ ನೀಡಲಾಗುತ್ತಿದೆ. Type-2 ಗರಿಷ್ಠ 5000 MT ಸಾಮರ್ಥ್ಯದ ಶೀಥಲಗೃಹ ಘಟಕ ಸ್ಥಾಪನೆಗೆ — ಘಟಕದ ವೆಚ್ಚ ರೂ. 10000/- ಪ್ರತಿ MT ಶೇ.35 ರಂತೆಗರಿಷ್ಠ ರೂ.175.00 ಲಕ್ಷಗಳ ವರೆಗೆ ಸಹಾಯಧನ ನೀಡಲಾಗುತ್ತಿದೆ.

HORTI 47 HGM 2021

(ಆರ್.ಶಂಕರ್)
ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: HORTI 65 HGM 2021

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿ: 04-02-2021

ಇವರಿಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿ
ತೋಟಗಾರಿಕೆ ಇಲಾಖೆ

W 25 5/2/21

ಇವರಿಗೆ:

ಕಾರ್ಯದರ್ಶಿಯವರು
ಕರ್ನಾಟಕ ವಿಧಾನಸಭಾ ಸಚಿವಾಲಯ,
ವಿಧಾನಸೌಧ, ಬೆಂಗಳೂರು.

ಮಾನ್ಯರೇ,

ವಿಷಯ :ಶ್ರೀ ಬಾಲಕೃಷ್ಣ ಸಿ.ಎಸ್, ವಿಸಸ, ಇವರ ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ:1031ರ ಬಗ್ಗೆ.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ ಬಾಲಕೃಷ್ಣ ಸಿ.ಎಸ್, ವಿಸಸ, ಇವರ ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ:1031ಕ್ಕೆ ಉತ್ತರದ 25 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

T. V. Sunandamma 04/02/2021
(ಟಿ.ವಿ.ಸುನಂದಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ
ತೋಟಗಾರಿಕೆ ಇಲಾಖೆ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1031
ಸದಸ್ಯರ ಹೆಸರು : **ಶ್ರೀ ಬಾಲಕೃಷ್ಣ ಸಿ.ಎನ್ (ಶ್ರವಣಬೆಳಗೊಳ)**
ಉತ್ತರಿಸುವ ಸಚಿವರು : ಮಾನ್ಯ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು
ಉತ್ತರಿಸಬೇಕಾದ ದಿನಾಂಕ : 05-02-2021.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ಹಾಸನ ಜಿಲ್ಲೆಗೆ ಬಿಡುಗಡೆಯಾದ ಅನುದಾನವೆಷ್ಟು. (ತಾಲ್ಲೂಕುವಾರು ವಿವರ ನೀಡುವುದು)	2020-21ನೇ ಸಾಲಿನಲ್ಲಿ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ಹಾಸನ ಜಿಲ್ಲೆಗೆ ಒಟ್ಟಾರೆ ರೂ.1150.16 ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ. ತಾಲ್ಲೂಕುವಾರು ವಿವರ ಕೆಳಕಂಡಂತಿದೆ

ಕ್ರಮ ಸಂಖ್ಯೆ	ತಾಲ್ಲೂಕು	ಅನುದಾನದ ವಿವರ (ರೂ. ಲಕ್ಷಗಳಲ್ಲಿ)
1	ಆಲೂರು	9.252
2	ಅರಕಲಗೂಡು	25.513
3	ಅರಸೀಕೆರೆ	656.004
4	ಬೇಲೂರು	197.291
5	ಚನ್ನರಾಯಪಟ್ಟಣ	172.520
6	ಹಾಸನ	65.536
7	ಹೊಳೆನರಸೀಪುರ	19.574
8	ಸಕಲೇಶಪುರ	3.870
9	ಹಾಸನ (ರಾಜ್ಯ ವಲಯ)	0.600
	ಒಟ್ಟು	**1150.160**

ಕ್ರ. ಸಂ.	ಪ್ರಶ್ನೆ	ಉತ್ತರ
ಆ)	2019-20ನೇ ಸಾಲಿನ ಹನಿ ನೀರಾವರಿ ಕಡತಗಳು ವಿಲೇವಾರಿ ಆಗದಿರುವುದಕ್ಕೆ ಕಾರಣಗಳೇನು	ಅನುದಾನದ ಕೊರತೆಯ ಕಾರಣ 2019-20ನೇ ಸಾಲಿನ ಹನಿ ನೀರಾವರಿ ಕೆಲವು ಕಡತಗಳು ವಿಲೇವಾರಿಯಾಗಿರುವುದಿಲ್ಲ.
ಇ)	ಚನ್ನರಾಯಪಟ್ಟಣ ತಾಲ್ಲೂಕಿನ ತೋಟಗಾರಿಕೆ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು (ವೃಂದಗಳವಾರು ವಿವರ ನೀಡುವುದು);	ಚನ್ನರಾಯಪಟ್ಟಣ ತಾಲ್ಲೂಕಿನ ತೋಟಗಾರಿಕೆ ಇಲಾಖೆಯ ಕಛೇರಿಯಲ್ಲಿ ಖಾಲಿ ಇರುವ ಹುದ್ದೆಗಳ ಒಟ್ಟು ಸಂಖ್ಯೆ: **06** **(ವೃಂದವಾರು ವಿವರ ಕೆಳಕಂಡಂತಿದೆ)**

ಕ್ರ. ಸಂ.	ವೃಂದ	ಹುದ್ದೆ	ಖಾಲಿ ಇರುವ ಹುದ್ದೆಗಳ ಸಂಖ್ಯೆ
1	ಎ	ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು	1
2	ಬಿ	ಸಹಾಯಕ ತೋಟಗಾರಿಕೆ ಅಧಿಕಾರಿ	03
3	ಸಿ	ತೋಟಗಾರಿಕೆ ಸಹಾಯಕರು	01
4	ಡಿ	ಮುಖ್ಯ ತೋಟಗಾರರು	01
		ಒಟ್ಟು	**06**

ಈ)	ಹಾಗಿದ್ದಲ್ಲಿ ಖಾಲಿ ಇರುವ ಹುದ್ದೆಗಳನ್ನು ತುಂಬಲು ಸರ್ಕಾರ ತೆಗೆದು ಕೊಂಡಿರುವ ಕ್ರಮಗಳೇನು?	• ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ವೃಂದದ 8 ಹುದ್ದೆಗಳು ಕೆ.ಪಿ.ಎಸ್.ಸಿ.ಯಿಂದ ಅರ್ಹ ಅಭ್ಯರ್ಥಿಗಳ ಆಯ್ಕೆ ಪಟ್ಟಿ ಸ್ವೀಕೃತವಾಗಿದ್ದು, ನೇಮಕಾತಿ ಪೂರ್ವ ಪ್ರಕ್ರಿಯೆ ಸರ್ಕಾರದಲ್ಲಿ ಪರಿಶೀಲನೆಯಲ್ಲಿದೆ. • ಸಹಾಯಕ ತೋಟಗಾರಿಕೆ ಅಧಿಕಾರಿ ವೃಂದದ 309 ಹುದ್ದೆಗಳಿಗೆ ನೇರನೇಮಕಾತಿ ಮೂಲಕ ಕೆ.ಪಿ.ಎಸ್.ಸಿಯಿಂದ ಅರ್ಹ ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ನಿರೀಕ್ಷಿಸಲಾಗುತ್ತಿದೆ. • ತೋಟಗಾರರ ಹುದ್ದೆಗಳ ನೇರನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿದೆ.

Horti 65 HGM 2021

(ಆರ್.ಶಂಕರ್)
ತೋಟಗಾರಿಕೆ ಮತ್ತು ರೇಷ್ಮೆ
ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: HORTI 61 HGM 2021

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿ: 04-02-2021

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿ
ತೋಟಗಾರಿಕೆ ಇಲಾಖೆ

4/5 70 5/2/21

ಇವರಿಗೆ:
ಕಾರ್ಯದರ್ಶಿಯವರು
ಕರ್ನಾಟಕ ವಿಧಾನಸಭಾ ಸಚಿವಾಲಯ,
ವಿಧಾನಸೌಧ, ಬೆಂಗಳೂರು.

ಮಾನ್ಯರೇ,

ವಿಷಯ :ಶ್ರೀ ಲಕ್ಷ್ಮಿ ಆರ್.ಹೆಬ್ಬಾಳ್ಕರ್.ವಿಸಸ, ಇವರ ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ:1203ರ ಬಗ್ಗೆ.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ ಲಕ್ಷ್ಮಿ ಆರ್.ಹೆಬ್ಬಾಳ್ಕರ್.ವಿಸಸ, ಇವರ ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ:1203ಕ್ಕೆ ಉತ್ತರದ 25 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

T. V. Sunandamma 04/02/2021
(ಟಿ.ವಿ.ಸುನಂದಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ
ತೋಟಗಾರಿಕೆ ಇಲಾಖೆ
4/2

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1203
ವಿಧಾನ ಸಭೆ ಸದಸ್ಯರ ಹೆಸರು : ಶ್ರೀಮತಿ. ಲಕ್ಷ್ಮೀ ಆರ್. ಹೆಬ್ಬಾಳ್ಕರ್ (ಬೆಳಗಾವಿ ಗ್ರಾಮಾಂತರ)
ಉತ್ತರಿಸ ಬೇಕಾದ ಸಚಿವರು : ಮಾನ್ಯ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು
ಉತ್ತರಿಸ ಬೇಕಾದ ದಿನಾಂಕ : 05.02.2020

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ರಾಜ್ಯದಲ್ಲಿ ಸಾವಯವ ಉತ್ಪನ್ನಗಳನ್ನು ಉತ್ತೇಜಿಸಲು ಸರ್ಕಾರ ಕೈಗೊಂಡ ಯೋಜನೆಗಳೇನು?	1. ರಾಜ್ಯದಲ್ಲಿ ಸಾವಯವ ಕೃಷಿಗೆ ಉತ್ತೇಜನ ನೀಡುವ ಉದ್ದೇಶದಿಂದ ದೇಶದಲ್ಲಿಯೇ ಪ್ರಪ್ರಥಮ ಬಾರಿಗೆ 2004 ರಲ್ಲಿಯೇ ಸಾವಯವ ಕೃಷಿ ನೀತಿಯನ್ನು ರಾಜ್ಯವು ಜಾರಿಗೆ ತಂದಿರುತ್ತದೆ. ಈ ನೀತಿಯನ್ವಯ, **ಸಾವಯವ ಗ್ರಾಮ** ಯೋಜನೆ ಹೆಸರಿನಲ್ಲಿ ಹಲವಾರು ಸಾವಯವ ಕೃಷಿ ಉತ್ತೇಜನ ಕಾರ್ಯಕ್ರಮಗಳನ್ನು ಪ್ರಾರಂಭಿಸಿ ಜೀವ ವೈವಿಧ್ಯತೆ ಸಂರಕ್ಷಣೆ, ಮಿಶ್ರಬೇಸಾಯ, ಮಣ್ಣು ಮತ್ತು ನೀರಿನ ಸಂರಕ್ಷಣೆ, ಸ್ಥಳೀಯವಾಗಿ ಸಾವಯವ ಗೊಬ್ಬರ ಉತ್ಪಾದನೆ, ಸಾವಯವ ಪ್ರಮಾಣೀಕರಣಕ್ಕೆ ನೆರವು ಇತ್ಯಾದಿ ಕಾರ್ಯಕ್ರಮಗಳನ್ನು ಅನುಷ್ಠಾನಿಸಲಾಗಿರುತ್ತದೆ. 2. 2008ನೇ ಸಾಲಿನಲ್ಲಿ ಸಾವಯವ ಕೃಷಿ ಉತ್ತೇಜನಾ ಕಾರ್ಯಕ್ರಮಗಳನ್ನು ಮತ್ತಷ್ಟು ಉತ್ತೇಜಿಸುವ ಸಲುವಾಗಿ **ಸಾವಯವ ಕೃಷಿ ಮಿಷನ್** ಕಾರ್ಯಕ್ರಮವನ್ನು ಜಾರಿಗೊಳಿಸಲಾಗಿದೆ. ಸದರಿ ಮಿಷನ್ ಅಡಿ ಸಾವಯವ ಕೃಷಿಯ ಬಗ್ಗೆ ಅರಿವು/ಒಲವು ಮೂಡಿಸುವಂತಹ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. 3. 2013-14ನೇ ಸಾಲಿನಿಂದ ಈ ಹಿಂದೆ ಚಾಲ್ತಿಯಲ್ಲಿದ್ದ ಸಾವಯವ ಗ್ರಾಮ ಸ್ಥಳ ಯೋಜನೆಯನ್ನು ಮತ್ತಷ್ಟು ಪರಿಷ್ಕರಣೆಗಳೊಂದಿಗೆ ರಾಜ್ಯಾದ್ಯಂತ **"ಸಾವಯವ ಭಾಗ್ಯ"** ಯೋಜನೆಯಾಗಿ ಹೋಬಳಿ ಮಟ್ಟದಲ್ಲಿ ಪ್ರಾರಂಭಿಸಿ ತಲಾ 100 ಹೆಕ್ಟೇರ್ ಪ್ರದೇಶದ ಹೋಬಳಿ ಮಟ್ಟದ ಗುಚ್ಛಗಳನ್ನು ಸಾವಯವ ಪ್ರಮಾಣೀಕರಣಕ್ಕೆ ಒಳಪಡಿಸಿ ಅಲ್ಲಿನ ಸಾವಯವ ಕೃಷಿಕರ ಸಂಘಗಳನ್ನು ಸೊಸೈಟಿ ಕಾಯ್ದೆಯಡಿ ನೊಂದಾಯಿಸಲಾಗಿದೆ. ರಾಜ್ಯದ ಸಾವಯವ ಬೆಳೆಗಾರರು ತಾವು ಬೆಳೆದ ಉತ್ಪನ್ನಗಳ ಮಾರಾಟಕ್ಕೆ ಸೂಕ್ತ ಮಾರುಕಟ್ಟೆ ಹಾಗೂ ಉತ್ತಮ ಧಾರಣೆ ದೊರಕಿಸಿಕೊಡುವ ನಿಟ್ಟಿನಲ್ಲಿ 2016-17ನೇ ಸಾಲಿನಲ್ಲಿ ಸಾವಯವ ಕೃಷಿಕರ ಸಂಘಗಳನ್ನು ಒಗ್ಗೂಡಿಸಿ 15 ಪ್ರಾಂತೀಯ ಸಹಕಾರ ಸಾವಯವ ಕೃಷಿಕರ ಸಂಘಗಳ ಒಕ್ಕೂಟಗಳನ್ನು ರಾಜ್ಯಾದ್ಯಂತ ರಚಿಸಲಾಯಿತು. ಈ ಒಕ್ಕೂಟಗಳ ಮೂಲಕ ಸದಸ್ಯ ರೈತರು ಉತ್ಪಾದಿಸಿದ ಸಾವಯವ ಉತ್ಪನ್ನಗಳ ಸಂಸ್ಕರಣೆ, ವರ್ಗೀಕರಣ, ಮೌಲ್ಯವರ್ಧನೆ, ಪ್ಯಾಕಿಂಗ್ ಮತ್ತು ಮಾರಾಟ ವ್ಯವಸ್ಥೆ ಕಲ್ಪಿಸಿಕೊಡಲಾಗಿದೆ. 2019-20 ನೇ ಸಾಲಿನಲ್ಲಿ ರಾಜ್ಯದಲ್ಲಿ ರಚಿಸಲಾಗಿರುವ 15 ಪ್ರಾಂತೀಯ ಸಹಕಾರ ಸಾವಯವ ಕೃಷಿಕರ ಸಂಘಗಳ ಒಕ್ಕೂಟಗಳು ಸೇರಿ ಕರ್ನಾಟಕ ರಾಜ್ಯ ಸಹಕಾರ ಸಾವಯವ ಉತ್ಪನ್ನಗಳ ಮಾರಾಟ ಮಹಾಮಂಡಳಿ ನಿಯಮಿತವನ್ನು ರಚಿಸಲಾಗಿದೆ.

ಆ	ಸಾಮಾನ್ಯ ಜನರು ಸಾವಯವ ಸಿರಿಧಾನ್ಯ ಅಥವಾ ಉತ್ಪನ್ನಗಳನ್ನು ಹೇಗೆ ಖರೀದಿಸಬಹುದು?	2016-17 ನೇ ಸಾಲಿನಲ್ಲಿ ಸಾವಯವ ಕೃಷಿಕರ ಸಂಘಗಳನ್ನು ಒಗ್ಗೂಡಿಸಿ 15 ಪ್ರಾಂತೀಯ ಸಹಕಾರ ಸಾವಯವ ಕೃಷಿಕರ ಸಂಘಗಳ ಒಕ್ಕೂಟಗಳನ್ನು ರಾಜ್ಯಾದ್ಯಂತ ರಚಿಸಲಾಗಿದೆ. ಈ ಒಕ್ಕೂಟಗಳ ಮೂಲಕ ಸದಸ್ಯ ರೈತರು ಉತ್ಪಾದಿಸಿದ ಸಾವಯವ ಉತ್ಪನ್ನಗಳ ಮಾರಾಟ ವ್ಯವಸ್ಥೆ ಕಲ್ಪಿಸಲಾಗಿದೆ. ಈ ಒಕ್ಕೂಟಗಳ ಪ್ರತಿನಿಧಿಗಳನ್ನು ಸಂಪರ್ಕಿಸಿ, ಒಕ್ಕೂಟದಡಿಯ ಸಿರಿದಾನ್ಯ ಮತ್ತು ಸಾವಯವ ಬೆಳೆಗಾರರಿಂದ ಉತ್ಪನ್ನಗಳನ್ನು ಖರೀದಿಸಬಹುದಾಗಿರುತ್ತದೆ. ಮಹಾನಗರಗಳಲ್ಲಿ Super market ಗಳು ಹಾಗು ಮಾಲ್ ಗಳಲ್ಲಿ ಸಿರಿಧಾನ್ಯ ಹಾಗೂ ಸಾವಯವ ಉತ್ಪನ್ನಗಳು ಲಭ್ಯವಿರುತ್ತವೆ. ತೋಟಗಾರಿಕೆ ಇಲಾಖೆಯ ಪ್ರೋತ್ಸಾಹದಿಂದ ಜೈವಿಕ ಸೊಸೈಟಿ ಸ್ಥಾಪಿಸಲಾಗಿದ್ದು, ಸಾವಯವ ಉತ್ಪನ್ನಗಳು ಲಭ್ಯವಿರುತ್ತವೆ.
ಇ	ಸಾಮಾನ್ಯ ವ್ಯಕ್ತಿಯು ಗ್ರಾಮೀಣ ಹಾಗೂ ತಾಲ್ಲೂಕು ಪ್ರದೇಶಗಳಲ್ಲಿ ಹಾಪ್ ಕಾಮ್ಸ್ ನ್ನು ತೆರೆಯಬಹುದೇ? ಹಾಪ್ ಕಾಮ್ಸ್ ನ ಪರವಾನಗಿ/ ಫ್ರಾಂಚೈಸಿಯನ್ನು ಪಡೆಯಲು ಅನುಸರಿಸಲಾಗುವ ಮಾನದಂಡವೇನು?	ಇಲ್ಲ. ಹಾಪ್ ಕಾಮ್ಸ್ ಸಂಸ್ಥೆಗಳು ಸಹಕಾರಿ ಸಂಘಗಳ ಕಾಯ್ದೆಯಡಿ ನೋಂದಣಿಯಾಗಿ ಜಿಲ್ಲಾ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಆಯಾ ಜಿಲ್ಲೆಗಳ ವ್ಯಾಪ್ತಿಯಲ್ಲಿ ಮಾರಾಟ ಮಳಿಗೆಗಳನ್ನು ಹೊಂದಿರುತ್ತದೆ. ಅವುಗಳನ್ನು ಸಂಸ್ಥೆಯ ಮುಖಾಂತರ ನಿರ್ವಹಿಸಲಾಗುತ್ತಿದೆ. ಹಾಪ್ ಕಾಮ್ಸ್ ಬೆಂಗಳೂರಿನಲ್ಲಿ ಮಾತ್ರ ಪರವಾನಗಿ/ಫ್ರಾಂಚೈಸಿಯನ್ನು ನೀಡಲು ಅನುಸರಿಸಲಾಗುವ ಮಾನದಂಡಗಳು ಕಳಕಂಡಂತಿದೆ. • ಸಂಸ್ಥೆಗೆ ಭದ್ರತಾ ಠೇವಣಿಯಾಗಿ ರೂ.1.00 ಲಕ್ಷ ಮತ್ತು ಬ್ಯಾಂಕ್ ಗ್ಯಾರಂಟಿಯಾಗಿ ರೂ.1.00 ಲಕ್ಷ ನೀಡಬೇಕು. • ಪ್ರತಿ ತಿಂಗಳು ರೂ.1.00 ಲಕ್ಷ ಮೌಲ್ಯದ ಹಣ್ಣು ಮತ್ತು ತರಕಾರಿಗಳನ್ನು ಸಂಸ್ಥೆಯಿಂದ ಖರೀದಿಸಬೇಕು. • ಪ್ರತಿ ತಿಂಗಳು ಸಂಸ್ಥೆ ಮಳಿಗೆಗಳಿಗೆ ಬಾಡಿಗೆ ಮೊತ್ತ ರೂ.8000/-ಗಳನ್ನು ಪಾವತಿಸಬೇಕು. • ಪ್ರತಿ ತಿಂಗಳು ವಿದ್ಯುಚ್ಛಕ್ತಿ ಬಿಲ್ಲನ್ನು ಫ್ರಾಂಚೈಸಿದಾರರೆ ಪಾವತಿಸಬೇಕು. ಸಂಸ್ಥೆಯು ನಿಗದಿ ಪಡಿಸಿದ ದರದಲ್ಲಿ ಮಾರಾಟ ಮಾಡಬೇಕು.

Horti 61 HGM 2021

(ಆರ್.ಶಂಕರ್)
ತೋಟಗಾರಿಕೆ ಮತ್ತು ರೇಷ್ಮೆ
ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ:ನಅಇ 26 ಎಲ್ಎಕ್ಯೂ 2021.

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:05/02/2021.

67
uls
5/2/21

ಇವರಿಂದ
ಸರ್ಕಾರದ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ

ಇವರಿಗೆ
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ ಸಚಿವಾಲಯ,
ವಿಧಾನ ಸೌಧ, ಬೆಂಗಳೂರು

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀಮತಿ ಲಕ್ಷ್ಮೀ ಆರ್. ಹೆಬ್ಬಾಳ್ಕರ್ (ಬೆಳಗಾಂ ಗ್ರಾಮಾಂತರ) ರವರ ಪ್ರಶ್ನೆ ಸಂಖ್ಯೆ 1200 ಕ್ಕೆ ಉತ್ತರಿಸುವ ಬಗ್ಗೆ.

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀಮತಿ ಲಕ್ಷ್ಮೀ ಆರ್ ಹೆಬ್ಬಾಳ್ಕರ್ (ಬೆಳಗಾಂ ಗ್ರಾಮಾಂತರ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1200 ಕ್ಕೆ ಸಂಬಂಧಿಸಿದಂತೆ ಉತ್ತರದ 25 ಪ್ರತಿಗಳನ್ನು ಹಾಗೂ Soft Copy ಯನ್ನು email ID: questionsklc@karnataka.gov.in ಇಲ್ಲಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

A Vijayakumar 05.02.2021

(ಎ ವಿಜಯ ಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ (ಎಂಎ-1&3)

5/02

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1200
ಸದಸ್ಯರ ಹೆಸರು	:	ಶ್ರೀಮತಿ ಲಕ್ಷ್ಮೀ ಆರ್. ಹೆಬ್ಬಾಳ್ಕರ್ (ಬೆಳಗಾವಿ ಗ್ರಾಮಾಂತರ)
ಉತ್ತರಿಸುವ ದಿನಾಂಕ	:	05/02/2021
ಉತ್ತರಿಸುವ ಸಚಿವರು	:	ಮಾನ್ಯ ನಗರಾಭಿವೃದ್ಧಿ ಸಚಿವರು

ಕ.ಸಂ.	ಪ್ರಶ್ನೆ	ಉತ್ತರ
(ಅ)	ರಾಜ್ಯದ ಮಹಾನಗರ ಪಾಲಿಕೆಗಳಲ್ಲಿರುವ ಒಟ್ಟು ಸದಸ್ಯ ಸ್ಥಾನಗಳ ಸಂಖ್ಯೆ ಎಷ್ಟು;(ಜಿಲ್ಲಾವಾರು ಮಾಹಿತಿ ನೀಡುವುದು)	ರಾಜ್ಯದ ಮಹಾನಗರ ಪಾಲಿಕೆಗಳಲ್ಲಿರುವ ಒಟ್ಟು ಸದಸ್ಯ ಸ್ಥಾನಗಳ ವಿವರ ಈ ಕೆಳಗಿನಂತೆ ಇರುತ್ತದೆ.

ಕ್ರ ಸಂ.	ಮಹಾನಗರ ಪಾಲಿಕೆಗಳ ಹೆಸರು	ಒಟ್ಟು ಸದಸ್ಯ ಸ್ಥಾನಗಳ ವಿವರ
1.	ಹುಬ್ಬಳ್ಳಿ-ಧಾರವಾಡ	79
2.	ಬೆಳಗಾವಿ	58
3.	ಕಲಬುರ್ಗಿ	55
4.	ಬಳ್ಳಾರಿ	39
5.	ವಿಜಯಪುರ	35
6.	ಮೈಸೂರು	65
7.	ದಾವಣಗೆರೆ	ಚುನಾಯಿತ ಸದಸ್ಯರುಗಳು – 45 ನಾಮನಿರ್ದೇಶನ ಸದಸ್ಯರುಗಳು – 5
8.	ತುಮಕೂರು	ಚುನಾಯಿತ ಸದಸ್ಯರುಗಳು – 35 ನಾಮನಿರ್ದೇಶನ ಸದಸ್ಯರುಗಳು – 5
9.	ಶಿವಮೊಗ್ಗ	ಚುನಾಯಿತ ಸದಸ್ಯರುಗಳು – 35 ನಾಮನಿರ್ದೇಶನ ಸದಸ್ಯರುಗಳು – 5
10.	ಮಂಗಳೂರು	ಚುನಾಯಿತ ಸದಸ್ಯರುಗಳು – 60 ನಾಮನಿರ್ದೇಶನ ಸದಸ್ಯರುಗಳು – 4

ಕ.ಸಂ.	ಪ್ರಶ್ನೆ	ಉತ್ತರ
(ಆ)	ಖಾಲಿಯಿರುವ/ಅವಧಿ ಮುಗಿದ ಮಹಾನಗರ ಪಾಲಿಕೆಗಳಿಗೆ ಚುನಾವಣೆಯನ್ನು ಯಾವಾಗ ನಡೆಸಲಾಗುವುದು; (ಪ್ರಕ್ರಿಯೆಯು ಯಾವ ಹಂತದಲ್ಲಿದೆ;	ಮಾನ್ಯ ಉಚ್ಛ ನ್ಯಾಯಾಲಯ, ಬೆಂಗಳೂರು ಇಲ್ಲಿ ದಾಖಲಾಗಿದ್ದ ರಿಟ್ ಅರ್ಜಿ ಸಂಖ್ಯೆ: 49814/2019 c/w 35/2020 ಪ್ರಕರಣದಲ್ಲಿ ದಿನಾಂಕ 17/12/2020ರಂದು ನೀಡಿರುವ ತೀರ್ಪಿನಲ್ಲಿ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಮತ್ತು ವಿಜಯಪುರ ಮಹಾನಗರ ಪಾಲಿಕೆಗೆ 06 ವಾರದೊಳಗೆ ಕ್ಷೇತ್ರ ಪುನರ್ ವಿಂಗಡಣೆಯನ್ನು ಅಂತಿಮಗೊಳಿಸಲು, ಕ್ಷೇತ್ರ ಪುನರ್ ವಿಂಗಡಣೆ ಅಂತಿಮಗೊಂಡ ದಿನಾಂಕದಿಂದ 02 ತಿಂಗಳೊಳಗೆ ವಾರ್ಡ್‌ವಾರು ಮೀಸಲಾತಿಯನ್ನು ಅಂತಿಮಗೊಳಿಸಲು ಮಾನ್ಯ ಉಚ್ಛ ನ್ಯಾಯಾಲಯವು ನಿರ್ದೇಶನ ನೀಡಿರುತ್ತದೆ. ಮಾನ್ಯ ಉಚ್ಛ ನ್ಯಾಯಾಲಯದ ಆದೇಶದನ್ವಯ ವಿಜಯಪುರ ಮಹಾನಗರ ಪಾಲಿಕೆಗೆ ಕ್ಷೇತ್ರ ಪುನರ್ ವಿಂಗಡಣೆ ಕೈಗೊಂಡು ಕರಡು ಅಧಿಸೂಚನೆಯನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ 17/12/2020ರಂದು ಪ್ರಕಟಿಸಿ ಬಾಧಿತರಾಗಬಹುದಾದವರಿಂದ ಸಲಹೆ/ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿದೆ.

....2

		ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಗೆ ಸಂಬಂಧಿಸಿದಂತೆ 2011 ರ ಜನಗಣತಿಯನ್ನಾಧರಿಸಿ, ಕ್ಷೇತ್ರ ಪುನರ್ ವಿಂಗಡಣೆ ಕೈಗೊಂಡು ಜಿಲ್ಲಾಧಿಕಾರಿ, ಧಾರವಾಡ ಜಿಲ್ಲೆ ರವರಿಂದ ಪ್ರಸ್ತಾವನೆ ಸ್ವೀಕೃತಗೊಂಡಿದ್ದು, ಪರಿಶೀಲನೆಯಲ್ಲಿರುತ್ತದೆ. ಮಾನ್ಯ ಉಚ್ಛ ನ್ಯಾಯಾಲಯ, ಬೆಂಗಳೂರು ಇಲ್ಲಿ ದಾಖಲಾಗಿದ್ದ ರಿಟ್ ಅರ್ಜಿ ಸಂಖ್ಯೆ 14925/2020 ಪ್ರಕರಣದಲ್ಲಿ ದಿನಾಂಕ 17/12/2020ರಂದು ನೀಡಿರುವ ಆದೇಶದನ್ವಯ ಬೆಳಗಾವಿ ಮಹಾನಗರ ಪಾಲಿಕೆಗೆ ವಾರ್ಡ್‌ವಾರು ಮೀಸಲಾತಿಯನ್ನು 02 ತಿಂಗಳೊಳಗೆ ಪೂರ್ಣಗೊಳಿಸಲು ನಿರ್ದೇಶನ ನೀಡಿರುತ್ತದೆ. ಅದರನ್ವಯ ಬೆಳಗಾವಿ ಮಹಾನಗರ ಪಾಲಿಕೆಯ ವಾರ್ಡ್‌ಗಳಿಗೆ ಮೀಸಲಾತಿ ನಿಗದಿಪಡಿಸಲು ಕರಡು ಅಧಿಸೂಚನೆಯನ್ನು ದಿನಾಂಕ 16/01/2021ರಂದು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿ ಬಾಧಿತರಾಗಬಹುದಾದವರಿಂದ ಸಲಹೆ/ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿದೆ. ಕಲಬುರ್ಗಿ ಮಹಾನಗರ ಪಾಲಿಕೆಗೆ 06 ವಾರದೊಳಗೆ ಕ್ಷೇತ್ರ ಪುನರ್ ವಿಂಗಡಣೆಯನ್ನು ಅಂತಿಮಗೊಳಿಸಲು, ಕ್ಷೇತ್ರ ಪುನರ್ ವಿಂಗಡಣೆ ಅಂತಿಮಗೊಂಡ ದಿನಾಂಕದಿಂದ 02 ತಿಂಗಳೊಳಗೆ ವಾರ್ಡ್‌ವಾರು ಮೀಸಲಾತಿಯನ್ನು ಅಂತಿಮಗೊಳಿಸಲು ಮಾನ್ಯ ಉಚ್ಛ ನ್ಯಾಯಾಲಯವು ನಿರ್ದೇಶನ ನೀಡಿರುತ್ತದೆ. ಕಲಬುರ್ಗಿ ಮಹಾನಗರ ಪಾಲಿಕೆಗೆ ಸಂಬಂಧಿಸಿದಂತೆ 2011 ರ ಜನಗಣತಿಯನ್ನಾಧರಿಸಿ, ಕ್ಷೇತ್ರ ಪುನರ್ ವಿಂಗಡಣೆ ಕೈಗೊಂಡು ಜಿಲ್ಲಾಧಿಕಾರಿ, ಕಲಬುರ್ಗಿ ಜಿಲ್ಲೆ ರವರಿಂದ ಪ್ರಸ್ತಾವನೆ ಸ್ವೀಕೃತಗೊಂಡಿದ್ದು, ಪರಿಶೀಲನೆಯಲ್ಲಿರುತ್ತದೆ. ಬಳ್ಳಾರಿ ಮಹಾನಗರ ಪಾಲಿಕೆಗೆ ಸಂಬಂಧಿಸಿದಂತೆ ವಾರ್ಡ್‌ವಾರು ಮೀಸಲಾತಿಯನ್ನು ಪ್ರಶ್ನಿಸಿ ದಾಖಲಾಗಿದ್ದ ರಿಟ್ ಅರ್ಜಿ ಸಂಖ್ಯೆ: 106127/2018 ಪ್ರಕರಣವು ದಿನಾಂಕ 11/01/2021ರಂದು ಇತ್ಯರ್ಥಗೊಂಡಿರುತ್ತದೆ. ಮಾನ್ಯ ಉಚ್ಛ ನ್ಯಾಯಾಲಯ, ಬೆಂಗಳೂರು ಇಲ್ಲಿ ದಾಖಲಾಗಿದ್ದ ಮೇಲ್ಕಂಡ ಎರಡು ಪ್ರಕರಣಗಳಲ್ಲಿ ನೀಡಿರುವ ಆದೇಶದನ್ವಯ ಅವಧಿ ಮುಕ್ತಾಯಗೊಂಡಿರುವ ಮಹಾನಗರ ಪಾಲಿಕೆಗಳಿಗೆ ಚುನಾವಣೆ ನಡೆಸಲು ನಿಯಮಾನುಸಾರ ಅಗತ್ಯ ಕ್ರಮಕೈಗೊಳ್ಳಲಾಗುವುದು.
(ಇ)	ಸದರಿ ಚುನಾವಣೆಗೆ ಸ್ಪರ್ಧಿಸಲು ಕನಿಷ್ಠ ವಿದ್ಯಾರ್ಹತೆಯನ್ನು ನಿಗದಿಪಡಿಸುವ ಆಲೋಚನೆ ಸರ್ಕಾರದ ಮುಂದಿದೆಯೇ? (ಪೂರ್ಣ ಮಾಹಿತಿಯನ್ನು ಒದಗಿಸುವುದು)	ಮಹಾನಗರ ಪಾಲಿಕೆಗಳ ಚುನಾವಣೆಗೆ ಸ್ಪರ್ಧಿಸಲು ಕನಿಷ್ಠ ವಿದ್ಯಾರ್ಹತೆಯನ್ನು ನಿಗದಿಪಡಿಸುವ ಆಲೋಚನೆ ಸರ್ಕಾರದ ಮುಂದೆ ಇರುವುದಿಲ್ಲ.

ಸಂಖ್ಯೆ: ನಅಇ 26 ಎಲ್‌ಎಕ್ಯೂ 2021

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: HORTI 56 HGM 2021

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿ: 04-02-2021

13
4/5
5/2/21

ಇವರಿಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿ
ತೋಟಗಾರಿಕೆ ಇಲಾಖೆ

ಇವರಿಗೆ:

ಕಾರ್ಯದರ್ಶಿಯವರು
ಕರ್ನಾಟಕ ವಿಧಾನಸಭಾ ಸಚಿವಾಲಯ,
ವಿಧಾನಸೌಧ, ಬೆಂಗಳೂರು.

ಮಾನ್ಯರೇ,

ವಿಷಯ : ಡಾ: ಅಜಯ್ ಧರ್ಮಸಿಂಗ್, ವಿಸಸ, ಇವರ ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ:1162ರ ಬಗ್ಗೆ.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಡಾ: ಅಜಯ್ ಧರ್ಮಸಿಂಗ್, ವಿಸಸ, ಇವರ ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ:1162ಕ್ಕೆ ಉತ್ತರದ 25 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

T. V. Sunandamma 04/02/2021
(ಟಿ.ವಿ.ಸುನಂದಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ
ತೋಟಗಾರಿಕೆ ಇಲಾಖೆ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1162
ವಿಧಾನ ಸಭೆಯ ಸದಸ್ಯರ ಹೆಸರು : ಡಾ||.ಅಜಯ್ ಧರ್ಮ ಸಿಂಗ್ (ಜೇವರ್ಗಿ)
ಉತ್ತರಿಸಬೇಕಾದ ದಿನಾಂಕ : 05-02-2021
ಉತ್ತರಿಸುವ ಸಚಿವರು : ಮಾನ್ಯ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಕ್ರ. ಸಂ	ಪ್ರಶ್ನೆಗಳು	ಉತ್ತರಗಳು
ಅ)	ಜೇವರ್ಗಿ ವಿಧಾನಸಭಾ ಕ್ಷೇತ್ರದಲ್ಲಿ ಸಹಾಯಕ ತೋಟಗಾರಿಕೆ ಅಧಿಕಾರಿ ಹುದ್ದೆ ಸೇರಿದಂತೆ ಲಿಪಿಕ ಸಿಬ್ಬಂದಿ ಹುದ್ದೆಗಳು ಹೋಬಳಿವಾರು ಖಾಲಿ ಇರುವುದು ಹಾಗೂ ಸದರಿ ಖಾಲಿಯಿರುವ ಹುದ್ದೆಗಳಿಂದ ಇಲಾಖೆಯ ಕಾರ್ಯಕ್ರಮಗಳನ್ನು ಯಶ್ವಸಿಯಾಗಿ ಅನುಷ್ಠಾನಕ್ಕೆ ತರಲು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹುದ್ದೆಗಳು ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ.
ಆ)	ಹಾಗಿದ್ದಲ್ಲಿ, ಸದರಿ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಸರ್ಕಾರ ಕೈಗೊಂಡಿರುವ ಪರ್ಯಾಯ ಕ್ರಮಗಳು ಹಾಗೂ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಯಾವ ಕಾಲಮಿತಿಯಲ್ಲಿ ಕ್ರಮ ಜರುಗಿಸಲಿದೆ (ವಿವರ ನೀಡುವುದು)?	ಲಭ್ಯವಿರುವ ಅಧಿಕಾರಿ/ಸಿಬ್ಬಂಧಿ ವರ್ಗದವರಿಂದಲೇ ಇಲಾಖೆಯ ವಿವಿಧ ಕಾರ್ಯಕ್ರಮಗಳ ಅನುಷ್ಠಾನಕ್ಕೆ ತೊಂದರೆ ಆಗದಂತೆ ಕ್ರಮ ವಹಿಸಲಾಗುತ್ತಿದೆ. ಸರ್ಕಾರದ ಸುತ್ತೋಲೆ ಸಂ:ಆಇ 3 ಬಿಇಎಂ 2020, ದಿನಾಂಕ:06.07.2020ರಲ್ಲಿ ನೇರ ನೇಮಕಾತಿ ಹುದ್ದೆಗಳಿಗೆ ಸಂಬಂಧಿಸಿದಂತೆ 2020-21ನೇ ಸಾಲಿನ ಆರ್ಥಿಕ ವರ್ಷದಲ್ಲಿ ಎಲ್ಲಾ ನೇರನೇಮಕಾತಿ ಹುದ್ದೆಗಳನ್ನು ಭರ್ತಿ ಮಾಡುವುದನ್ನು ಮುಂದಿನ ಆದೇಶದವರೆಗೂ ತಡೆಹಿಡಿಯಲಾಗಿರುತ್ತದೆ. ಸದರಿ ನಿರ್ಬಂಧವನ್ನು ತೆರವುಗೊಳಿಸಿದ ನಂತರ ಭರ್ತಿ ಮಾಡಲು ಹಂತ-ಹಂತವಾಗಿ ಕ್ರಮಕೈಗೊಳ್ಳಲಾಗುವುದು.

Horti 56 HGM 2021

(ಆರ್.ಶಂಕರ್)
ತೋಟಗಾರಿಕೆ ಮತ್ತು ರೇಷ್ಮೆ
ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಐ 27 ಐಎಪಿ(ಇ) 2021

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ 01.02.2021.

ಇವರಿಂದ:
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ,
ವಿಕಾಸಸೌಧ, ಬೆಂಗಳೂರು.

ಇವರಿಗೆ:
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ ಸಚಿವಾಲಯ,
ವಿಧಾನಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆಯ ಸದಸ್ಯರಾದ ಡಾ|| ರಂಗನಾಥ್ ಹೆಚ್.ಡಿ. (ಕುಣಿಗಲ್) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 391ಕ್ಕೆ ಉತ್ತರಿಸುವ ಬಗ್ಗೆ.

---*---

ಮಾನ್ಯ ವಿಧಾನ ಸಭೆಯ ಸದಸ್ಯರಾದ ಡಾ|| ರಂಗನಾಥ್ ಹೆಚ್.ಡಿ. (ಕುಣಿಗಲ್) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 391ಕ್ಕೆ ಉತ್ತರದ 25 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಅಗತ್ಯ ಕ್ರಮಕ್ಕಾಗಿ ತಮಗೆ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ಎನ್. ಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ (ಕೈ.ಅ),
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 391 (ಇಂಧನ ಇಲಾಖೆಯಿಂದ ವರ್ಗಾವಣೆಗೊಂಡ ಪ್ರಶ್ನೆ)
2. ಸದಸ್ಯರ ಹೆಸರು : ಡಾ॥ ರಂಗನಾಥ್ ಹೆಚ್.ಡಿ. (ಕುಣಿಗಲ್)
3. ಉತ್ತರಿಸುವ ದಿನಾಂಕ : 05.02.2021
4. ಉತ್ತರಿಸುವ ಸಚಿವರು : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	2020-21ನೇ ಸಾಲಿನ ಆಯವ್ಯಯದಲ್ಲಿ ರಾಮನಗರ ತಾಲ್ಲೂಕಿನ ಹಾರೋಹಳ್ಳಿ 5ನೇ ಹಂತದ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (KIADB) ಕೈಗಾರಿಕಾ ಪ್ರದೇಶದಲ್ಲಿ "ಎಲೆಕ್ಟ್ರಿಕ್ ವೆಹಿಕಲ್ಸ್ ಮತ್ತು ಎನರ್ಜಿ ಸ್ಟೋರೇಜ್ ಮ್ಯಾನುಫ್ಯಾಕ್ಚರಿಂಗ್ ಕ್ಲಸ್ಟರ್‌ನ್ನು ಸ್ಥಾಪಿಸಲಾಗಿದೆಯೇ;	2020-21ನೇ ಸಾಲಿನ ಆಯವ್ಯಯದಲ್ಲಿ ಘೋಷಣೆಯಂತೆ ಹಾರೋಹಳ್ಳಿ ಮತ್ತು ಬಿಡದಿ ಕೈಗಾರಿಕಾ ಪ್ರದೇಶಗಳ ಮಧ್ಯಭಾಗದಲ್ಲಿ ಬರುವ ರಾಮನಗರ ಜಿಲ್ಲೆ ಮತ್ತು ತಾಲ್ಲೂಕು, ಕಂಚುಗಾರನಹಳ್ಳಿ ಮತ್ತು ಕಂಚುಗಾರನಹಳ್ಳಿ ಕಾವಲ್ ಹಾಗೂ ಕನಕಪುರ ತಾಲ್ಲೂಕು, ಮುಡೇನಹಳ್ಳಿ ಮತ್ತು ಯರೇಹಳ್ಳಿ ಗ್ರಾಮಗಳ ಒಟ್ಟು 912-12½ ಎಕರೆ ಜಮೀನನ್ನು ಹಾರೋಹಳ್ಳಿ 5ನೇ ಹಂತದ ಕೈಗಾರಿಕಾ ಪ್ರದೇಶಕ್ಕಾಗಿ ಭೂಸ್ವಾಧೀನಪಡಿಸಲು ದಿನಾಂಕ: 09.07.2020ರಂದು ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ. ದಿನಾಂಕ: 22.12.2020ರಂದು ನಡೆದ ಮಂಡಳಿ ಸಭೆಯಲ್ಲಿ ಜಿಲ್ಲಾಧಿಕಾರಿ, ರಾಮನಗರ ಜಿಲ್ಲೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 04.11.2020ರಂದು ನಡೆದ ಭೂದರ ನಿರ್ಧರಣಾ ಸಲಹಾ ಸಮಿತಿ ಸಭೆಯು ಶಿಫಾರಸ್ಸು ಮಾಡಿರುವ ದರವನ್ನು ಅನುಮೋದಿಸಲಾಗಿದೆ. ಭೂಪರಿಹಾರ ಪಾವತಿ ಕಾರ್ಯ ಪೂರ್ಣಗೊಂಡ ನಂತರ ಉದ್ದೇಶಿತ ಯೋಜನೆಯನ್ನು ಜಾರಿಗೆ ತರಲಾಗುವುದು.
(ಆ)	ಸ್ಥಾಪಿಸದೇ ಇದ್ದಲ್ಲಿ, ಯಾವಾಗ ಸ್ಥಾಪಿಸಲಾಗುವುದು ಹಾಗೂ ಸ್ಥಾಪಿಸುವಲ್ಲಿ ಆಗುತ್ತಿರುವ ವಿಳಂಬಕ್ಕೆ ಕಾರಣವೇನು?	

ಸಂಖ್ಯೆ: ಸಿಐ 27 ಐಎಪಿ (ಇ) 2021

(ಜಗದೀಶ ಶೆಟ್ಟರ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಒ 33 ಸಿಎಲ್‌ಎಸ್ 2021

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ: 03.02.2021

60 U/S 05/2/21

ಇಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಹಕಾರ ಇಲಾಖೆ,
ಬೆಂಗಳೂರು-560001.

ಇವರಿಗೆ:

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ ಸಚಿವಾಲಯ,
ವಿಧಾನಸೌಧ,
ಬೆಂಗಳೂರು.

ಮಾನ್ಯರೆ,

ವಿಷಯ : ಕರ್ನಾಟಕ ವಿಧಾನ ಸಭೆಯ ಸದಸ್ಯರಾದ ಶ್ರೀ ಖಾದರ್ ಯು.ಟಿ. ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1153ಕ್ಕೆ ಉತ್ತರ ಒದಗಿಸುವ ಕುರಿತು.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಸಭೆಯ ಸದಸ್ಯರಾದ ಶ್ರೀ ಖಾದರ್ ಯು.ಟಿ. ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1153ಕ್ಕೆ ಸಂಬಂಧಿಸಿದಂತೆ ಉತ್ತರದ 25 ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲಾಗಿದೆ.

ತಮ್ಮ ನಂಬುಗೆಯ,

Radha H C

(ಹೆಚ್. ಸಿ. ರಾಧ)
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ)
ಸಹಕಾರ ಇಲಾಖೆ.

ಕರ್ನಾಟಕ ವಿಧಾನ ಸಭೆ

ಮಾನ್ಯ ವಿಧಾನ ಸಭೆ ಸದಸ್ಯರು : ಶ್ರೀ ಖಾದರ್ ಯು.ಟಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1153

ಉತ್ತರಿಸಬೇಕಾದ ದಿನಾಂಕ : 05.02.2021

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಸಹಕಾರ ಇಲಾಖೆಯಿಂದ ಯಾವ ಯಾವ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ; (ಸಂಪೂರ್ಣ ಮಾಹಿತಿ ಒದಗಿಸುವುದು)	ಸಹಕಾರ ಇಲಾಖೆಯಿಂದ ಸಹಕಾರ ಸಂಘಗಳು, ಸಹಕಾರ ಸದಸ್ಯರು ಹಾಗೂ ರೈತರ ಅಭಿವೃದ್ಧಿಗಾಗಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳ ವಿವರ **ಅನುಬಂಧ-1** ರಲ್ಲಿ ನೀಡಲಾಗಿದೆ.
ಆ)	ಕಳೆದ ಎರಡು ವರ್ಷಗಳಲ್ಲಿ ಇಲಾಖೆಯಿಂದ ಕೈಗೊಂಡಿರುವ ಕಾರ್ಯಕ್ರಮಗಳೇನು? (ಜಿಲ್ಲಾವಾರು ವಿವರಗಳನ್ನು ಒದಗಿಸುವುದು.)	ಕಳೆದ ಎರಡು ವರ್ಷಗಳಲ್ಲಿ ಇಲಾಖೆಯಿಂದ ರಾಜ್ಯ ವಲಯ/ ಜಿಲ್ಲಾ ಪಂಚಾಯತ್/ ತಾಲ್ಲೂಕು ಪಂಚಾಯತ್ ಯೋಜನೆಗಳಡಿ ಕೈಗೊಂಡಿರುವ ಕಾರ್ಯಕ್ರಮ ಮತ್ತು ಅನುದಾನದ ವಿವರ **ಅನುಬಂಧ-02** ರಲ್ಲಿ ನೀಡಲಾಗಿದೆ.

ಸಂಖ್ಯೆ: ಸಿಒ 23 ಸಿಎಲ್ಎಸ್ 2021

(ಎಸ್.ಟಿ. ಸೋಮಶೇಖರ್)
ಸಹಕಾರ ಸಚಿವರು

ಅನುಬಂಧ-1

ಸಹಕಾರ ಇಲಾಖೆಯಿಂದ ಅಭಿವೃದ್ಧಿಗಾಗಿ ಹಮ್ಮಿಕೊಂಡಿರುವ ಯೋಜನೆಗಳ ವಿವರ

1) **ಬೆಳೆ ಸಾಲಕ್ಕಾಗಿ ಬಡ್ಡಿ ಸಹಾಯಧನ:** ಈ ಯೋಜನೆಯ ಉದ್ದೇಶ ರೈತರಿಗೆ ರೂ.3 ಲಕ್ಷಗಳವರೆಗಿನ ಅಲ್ಪಾವಧಿ ಕೃಷಿ ಸಾಲಗಳನ್ನು ಶೂನ್ಯ ಬಡ್ಡಿ ದರದಲ್ಲಿ ಹಾಗೂ ರೂ.10 ಲಕ್ಷದವರೆಗಿನ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲಗಳನ್ನು ಶೇ.3ರ ಬಡ್ಡಿ ದರದಲ್ಲಿ ಸಹಕಾರ ಸಂಸ್ಥೆಗಳ ಮೂಲಕ ಒದಗಿಸಿ ರೈತ ವರ್ಗದ ಜನರಿಗೆ ಸಾಲಗಳ ಮೇಲಿನ ಬಡ್ಡಿ ಹೊರೆಯನ್ನು ಕಡಿಮೆ ಮಾಡುವುದಾಗಿರುತ್ತದೆ ಮತ್ತು ಕೇಂದ್ರ ಸರ್ಕಾರದಿಂದ ಬಂಡವಾಳ ಸಹಾಯಧನವು ಲಭ್ಯವಿರುವ ಪಾಲಿ ಹೌಸ್‌ಗಳಲ್ಲಿ ಬೆಳೆ ಬೆಳೆಯುವ ಹಾಗೂ ಸೌರಶಕ್ತಿ ಪಂಪ್‌ಸೆಟ್‌ಗಳನ್ನು ಅಳವಡಿಸುವ ಯೋಜನೆಗಳಿಗೆ 10 ಲಕ್ಷ ರೂ. ವರೆಗಿನ ಸಾಲವನ್ನು ಶೇ.3ರ ಬಡ್ಡಿದರದಲ್ಲಿ ಒದಗಿಸಲಾಗುವುದು.

2) **ಸ್ವಸಹಾಯ ವರ್ಗಗಳಿಗೆ ಸಾಲಗಳ ಮೇಲಣ ಬಡ್ಡಿ ಧನಸಹಾಯ :** ಸಮಾಜದಲ್ಲಿ ಆರ್ಥಿಕವಾಗಿ ಹಿಂದುಳಿದಿರುವ ದುರ್ಬಲ ವರ್ಗದವರ ಏಳಿಗೆಗಾಗಿ ಪತ್ತಿನ ಸಹಕಾರ ಸಂಘಗಳಿಂದ ಸ್ವಸಹಾಯ ಗುಂಪುಗಳಿಗೆ ಶೇ.4ರ ಬಡ್ಡಿ ದರದಲ್ಲಿ ಸಾಲ ವಿತರಿಸುವುದು ಮಹಿಳಾ ಸ್ವಸಹಾಯ ಸಂಘಗಳಿಗೆ ಶೂನ್ಯ ಬಡ್ಡಿ ದರದಲ್ಲಿ ಸಾಲ ವಿತರಿಸುವುದು. ಸರ್ಕಾರದ ಬದ್ಧತೆಯಂತೆ ಸಹಕಾರ ಸಂಘಗಳಿಂದ ಮಂಜೂರಾಗುವ ಸಾಲದ ಮೇಲೆ ಬಡ್ಡಿ ಸಹಾಯಧನವನ್ನು ಒದಗಿಸುವುದು ಈ ಯೋಜನೆಯ ಮುಖ್ಯ ಗುರಿಯಾಗಿರುತ್ತದೆ.

3) **ಕಾಯಕ ಯೋಜನೆಗೆ ಬಡ್ಡಿ ಸಹಾಯಧನ:** ಸ್ವ-ಸಹಾಯ ಗುಂಪುಗಳ ಸದಸ್ಯರ ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆಯನ್ನು ವೃದ್ಧಿಗೊಳಿಸುವುದರ ಮೂಲಕ ಸ್ವ -ಉದ್ಯೋಗವನ್ನು ಪ್ರೋತ್ಸಾಹಿಸಿ ಆದಾಯವನ್ನು ವೃದ್ಧಿಸುವ ನಿಟ್ಟಿನಲ್ಲಿ "ಕಾಯಕ" ಯೋಜನೆಯಡಿ ಸ್ವ-ಸಹಾಯ ಗುಂಪುಗಳಿಗೆ ರೂ.5 ಲಕ್ಷದವರೆಗೆ ಶೂನ್ಯ ಬಡ್ಡಿ ದರದಲ್ಲಿ ಮತ್ತು ರೂ.5 ಲಕ್ಷದಿಂದ ರೂ. 10 ಲಕ್ಷದವರೆಗೆ ಶೇ.4 ರ ಬಡ್ಡಿದರದಲ್ಲಿ ಸಾಲ ನೀಡುವ ಯೋಜನೆಯನ್ನು ಇಲಾಖೆಯು ಅನುಷ್ಠಾನಗೊಳಿಸುತ್ತಿದೆ.

4) **ಬಡವರ ಬಂಧು ಯೋಜನೆಗೆ ಬಡ್ಡಿ ಸಹಾಯಧನ :** ಬೀದಿ ವ್ಯಾಪಾರಿಗಳು ಮತ್ತು ಸಣ್ಣ ವ್ಯಾಪಾರಿಗಳಿಗೆ ಡಿಸಿಸಿ ಬ್ಯಾಂಕುಗಳು ಮತ್ತು ಪಟ್ಟಣ ಸಹಕಾರ ಬ್ಯಾಂಕುಗಳ ಮೂಲಕ ಬ್ಯಾಂಕಿಂಗ್ ಸೇವೆ ಮತ್ತು ಸಾಲದ ವ್ಯವಸ್ಥೆ ಕಲ್ಪಿಸಲು 'ಬಡವರ ಬಂಧು' ಯೋಜನೆಯನ್ನು ಜಾರಿಗೊಳಿಸಲಾಗಿದೆ. ಬೀದಿ ವ್ಯಾಪಾರಿಗಳು ಮತ್ತು ಸಣ್ಣ ವ್ಯಾಪಾರಿಗಳಿಗೆ ಡಿಸಿಸಿ ಬ್ಯಾಂಕುಗಳು ಮತ್ತು ಪಟ್ಟಣ ಸಹಕಾರ ಬ್ಯಾಂಕುಗಳ ಮೂಲಕ ಶೂನ್ಯ ಬಡ್ಡಿ ದರಲ್ಲಿ ಸಾಲ ಒದಗಿಸಲಾಗುವುದು.

5) **ಬಾಕಿದಾರರ ಸಾಲದ ಬಡ್ಡಿ ಮನ್ನಾ ಯೋಜನೆ :** ರೈತರು ವಿವಿಧ ಸಹಕಾರ ಸಂಘಗಳಲ್ಲಿ ಅಂದರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳು, ಲ್ಯಾಂಪ್ಸ್ ಸಹಕಾರ ಸಂಘಗಳು ಮತ್ತು ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳಿಂದ ಸಾಲ ಪಡೆದು ದಿನಾಂಕ:31-01-2020ಕ್ಕೆ ಸುಸ್ತಿಯಾಗಿರುವ ಎಲ್ಲಾ ಬಗೆಯ ಕೃಷಿ ಸಾಲಗಳ ಅಸಲನ್ನು ದಿನಾಂಕ: 30-06-2020 ರೊಳಗೆ ರೈತ ಸದಸ್ಯರು ಪಾವತಿಸಿದಲ್ಲಿ ಸದರಿ ಸಾಲದ ಮೇಲಿನ ಪೂರ್ಣ ಬಡ್ಡಿಯನ್ನು ಮನ್ನಾ ಮಾಡಲಾಗುವುದು ಹಾಗೂ ಈ ಬಡ್ಡಿ ಹೊರೆಯನ್ನು ಸರ್ಕಾರವು ಭರಿಸಲಿದೆ.

6) **ರೈತರ ಸಾಲ ಮನ್ನಾ-ಸಹಕಾರ ಸಂಘಗಳು/ಸಹಕಾರಿ ಬ್ಯಾಂಕುಗಳಿಂದ ಪಡೆದ ಅಲ್ಪಾವಧಿ ಸಾಲಗಳು :** ಸಹಕಾರ ಸಂಘಗಳಲ್ಲಿ ಅಂದರೆ ಪ್ಯಾಕ್ಸ್, ಡಿಸಿಸಿ ಬ್ಯಾಂಕಿನ ಶಾಖೆಗಳು ಮತ್ತು ಪಿಕಾರ್ಡ್ ಬ್ಯಾಂಕುಗಳಲ್ಲಿ ರೈತರು ಬೆಳೆ ಸಾಲ ಪಡೆದು ದಿ.10-7-2018 ಕ್ಕೆ ಹೊರಬಾಕಿ ಹೊಂದಿರುವ ಕುಟಂಬಕ್ಕೆ ಗರಿಷ್ಟ ರೂ.1 ಲಕ್ಷಗಳ ವರೆಗೆ ಸಾಲ ಮನ್ನಾ ದೊರೆಯುತ್ತದೆ.ಸಾಲ ಮನ್ನಾ ಸೌಲಭ್ಯವು ರೈತರು ಮರುಪಾವತಿ ಮಾಡಬೇಕಾದ ಗಡುವಿನ

ದಿನಾಂಕಕ್ಕೆ ಜಾರಿಗೆ ಬರುತ್ತದೆ.ಕುಟುಂಬದಲ್ಲಿ ಯಾವುದೇ ಸದಸ್ಯನು ರೂ.20000/ ಕ್ಕಿಂತ ಹೆಚ್ಚಿನ ವೇತನ/ಪಿಂಚಣಿ ಪಡೆಯುತ್ತಿದ್ದಲ್ಲಿ ಅಥವಾ ಕಳೆದ ಮೂರು ವರ್ಷಗಳಲ್ಲಿ ಆದಾಯ ತೆರಿಗೆ ಪಾವತಿಸಿದಲ್ಲಿ ಅಂತಹ ರೈತರಿಗೆ ಈ ಸೌಲಭ್ಯ ದೊರೆಯುವುದಿಲ್ಲ.ದಿ.10-7-2018 ಕ್ಕೆ ಸಾಲವು ಚಾಲ್ತಿ ಇದ್ದು, ರೂ 1 ಲಕ್ಷಕ್ಕಿಂತ ಹೆಚ್ಚಿಗೆ ಇದ್ದಲ್ಲಿ ಹೆಚ್ಚಿನ ಮೊತ್ತವನ್ನು ಗಡುವು ದಿನಾಂಕದೊಳಗೆ ಮರುಪಾವತಿಸಬೇಕು.ದಿ.10-7-2018 ಕ್ಕೆ ಸಾಲವು ಸುಸ್ತಿ ಇದ್ದಲ್ಲಿ ಮಾರುಪಾವತಿ ದಿನಾಂಕದವರೆಗಿನ ಬಡ್ಡಿಯನ್ನು ಮತ್ತು ರೂ 1 ಲಕ್ಷಕ್ಕಿಂತ ಹೆಚ್ಚಿನ ಮೊತ್ತವನ್ನು ದಿ.31-7-2019 ರೊಳಗೆ ಮರುಪಾವತಿಸಬೇಕು. ದಿ.10-7-2018 ರಿಂದ ದಿ.30-9-2018 ರ ವರೆಗೆ ಗಡುವು ಬರುವ ಸಾಲಗಲಿಗೆ ಗಡುವು ದಿನಾಂಕದಿಂದ ಸಾಲ ಮರುಪಾವತಿ ದಿನಾಂಕದವರೆಗಿನ ಬಡ್ಡಿಯನ್ನು ಮತ್ತು ರೂ.1 ಲಕ್ಷಕ್ಕಿಂತ ಹೆಚ್ಚಿನ ಮೊತ್ತವನ್ನು ದಿ.31-7-2019 ರೊಳಗೆ ಮರುಪಾವತಿಸತಕ್ಕದ್ದು.ಸಹಕಾರ ಸಂಘಗಳಲ್ಲಿ ಸಾಲ ಮನ್ನಾ ಸೌಲಭ್ಯ ಪಡೆದ ರೈತರಿಗೆ ವಾಣಿಜ್ಯ ಬ್ಯಾಂಕಿನಲ್ಲಿ ಸಾಲ ಮನ್ನಾ ಸೌಲಭ್ಯ ದೊರೆಯುವುದಿಲ್ಲ.

7) **ಲ್ಯಾಂಪ್ಸ್ ಸಂಯುಕ್ತ ಸಂಘಗಳಿಗೆ ಮಾರುಕಟ್ಟೆ ಮೂಲ ಸೌಕರ್ಯಗಳ ಸ್ಥಾಪನೆ:** ಲ್ಯಾಂಪ್ಸ್ ಸಹಕಾರ ಮಹಾಮಂಡಳ ಹಾಗೂ ಲ್ಯಾಂಪ್ಸ್ ಸಂಘಗಳಿಗೆ ಮೂಲಭೂತ ಸೌಕರ್ಯಗಳಾದ ಸ್ವಂತ ಕಟ್ಟಡ, ಸಂಸ್ಕರಣಾ ಘಟಕ, ಕಂಪ್ಯೂಟರ್‌ಗಳು, ಫ್ಯಾಕ್ಸ್, ಟೆಲಿಫೋನ್‌ಗಳನ್ನು ಒದಗಿಸುವುದು ಈ ಯೋಜನೆಯ ಉದ್ದೇಶವಾಗಿದ್ದು, ಮೂಲಭೂತ ಸೌಕರ್ಯ ಒದಗಿಸುವುದರಿಂದ ಲ್ಯಾಂಪ್ಸ್ ಸಹಕಾರ ಸಂಘಗಳ ಸದಸ್ಯರು ಸಂಗ್ರಹಿಸಿದ ಕಿರು ಅರಣ್ಯ ಉತ್ಪನ್ನಗಳಿಗೆ ಉತ್ತಮ ಮಾರುಕಟ್ಟೆ ಸೌಲಭ್ಯ ದೊರಕಿ ಅವರು ಆರ್ಥಿಕವಾಗಿ ಲಾಭ ಪಡೆಯುಲು ಅನುಕೂಲವಾಗುತ್ತದೆ

8) **ವಿವಿಧ ಸಹಕಾರಿ ಸಂಸ್ಥೆಗಳಲ್ಲಿ ಬಿ.ಪಿ.ಎಲ್/ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಹಿಂದುಳಿದ ಅಲ್ಪಸಂಖ್ಯಾತ, ಮಹಿಳಾ ಮತ್ತು ವಿಕಲ ಚೇತನ ವರ್ಗದ ಜನರನ್ನು ಸದಸ್ಯರನ್ನಾಗಿ ನೊಂದಾಯಿಸುವ ಬಗ್ಗೆ.:** ಯೋಜನೆಯ ಪ್ರಮುಖ ಉದ್ದೇಶ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಹಿಂದುಳಿದ ವರ್ಗ/ ಅಲ್ಪಸಂಖ್ಯಾತ ವರ್ಗದ ಜನರನ್ನು ಎಲ್ಲಾ ವಿಧದ ಸಹಕಾರ ಸಂಘಗಳಲ್ಲಿ ಸದಸ್ಯರನ್ನಾಗಿ ನೋಂದಾಯಿಸಲು ಸಹಾಯಧನ ನೀಡುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ. ಆ ಮೂಲಕ ಆಯಾ ಸಹಕಾರ ಸಂಘಗಳಿಂದ ದೊರಕುವ ಸೌಲಭ್ಯವನ್ನು ಅವರಿಗೆ ಒದಗಿಸುವುದು. ಆಯಾ ಸಂಘದ ಒಂದು ಷೇರಿನ ಮೊತ್ತ ಅಥವಾ ಗರಿಷ್ಠ ರೂ.500/- ಇವುಗಳ ಪೈಕಿ ಯಾವುದು ಕಡಿಮೆಯೋ ಅಷ್ಟು ಮೊತ್ತವನ್ನು ಮಂಜೂರು ಮಾಡಲಾಗುವುದು.

9) **ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಹಿಂದುಳಿದ ವರ್ಗ ಮತ್ತು ಅಲ್ಪ ಸಂಖ್ಯಾತರ ಸಹಕಾರ ಸಂಘಗಳಿಗೆ ಹಣಕಾಸು ಸಹಾಯ:** ಈ ಯೋಜನೆಯಡಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ/ ಹಿಂದುಳಿದ ವರ್ಗ / ಅಲ್ಪಸಂಖ್ಯಾತರ ಸಹಕಾರಿ ಸಂಘಗಳಿಗೆ ಮೂಲಭೂತ ಸೌಕರ್ಯ ಹೊಂದಲು/ಆಸ್ತಿ ನಿರ್ಮಾಣ ಮಾಡಿಕೊಳ್ಳಲು ಸಹಾಯಧನ ನೀಡಲಾಗುವುದು. ಫಲಾನುಭವಿ ಸಹಕಾರ ಸಂಘಗಳಲ್ಲಿ ಮೂಲಭೂತ ಸೌಕರ್ಯ / ಆಸ್ತಿ ನಿರ್ಮಾಣವಾಗುವುದರಿಂದ ಸಂಘಗಳ ವ್ಯವಹಾರ ಹೆಚ್ಚಿ, ಅವುಗಳ ಉದ್ದೇಶಗಳು ಈಡೇರಲು ಸಾಧ್ಯವಾಗುತ್ತದೆ.

10) **ಕಾಸ್ಕಾರ್ಡ ಬ್ಯಾಂಕ್‌ಗೆ ಸಾಲ:** ಕಸ್ಕಾರ್ಡ್ ಬ್ಯಾಂಕ್‌ಗೆ ಅವಧಿ ಸಾಲವನ್ನು ವಿಸ್ತರಿಸಿ, ಆ ಮೂಲಕ ಪಿಕಾರ್ಡ್ ಬ್ಯಾಂಕ್‌ಗಳಿಗೆ ಸಾಲ ದೊರೆಯುವಂತಾಗಲು, ರಾಜ್ಯ ಸರ್ಕಾರದ ಶೇ. 5 ರ ಪಾಲನ್ನು ಭರಿಸುವುದು.ನಬಾರ್ಡ್‌ನಿಂದ ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್

ಪುನರ್ಧನ ಸೌಲಭ್ಯ ಪಡೆಯುತ್ತದೆ. ಇದರಿಂದಾಗಿ ಸಕಾಲದಲ್ಲಿ ರೈತರಿಗೆ ಸುಲಭ ದರದಲ್ಲಿ ದೀರ್ಘಾವಧಿ ಸಾಲ ನೀಡಲು ಅವಕಾಶವಾಗುತ್ತದೆ ಹಾಗೂ ಆ ಮೂಲಕ ರೈತರ ಜೀವನ ಮಟ್ಟ ಸುಧಾರಿಸುತ್ತದೆ.

11) **ಮಲಪ್ರಭಾ ಸಹಕಾರಿ ಎಣ್ಣೆ ಗಿರಣಿ ನಿ. ನರಗುಂದಕ್ಕೆ ಅನುದಾನ :** ಮಲಪ್ರಭಾ ಸಹಕಾರಿ ಎಣ್ಣೆ ಗಿರಣಿ ನಿ. ನರಗುಂದಕ್ಕೆ ಇದರ ಪುನಶ್ಚೇತನಕ್ಕಾಗಿ ಅನುದಾನ ಒದಗಿಸಲಾಗಿದೆ.

ಜಿಲ್ಲಾ ಪಂಚಾಯತ್ ಯೋಜನೆಗಳು:

1) **ವಿವಿಧ ವರ್ಗದ ಸಹಕಾರಿ ಸಂಸ್ಥೆಗಳಿಗೆ ಸಹಾಯಧನ/ಎನ್.ಸಿ.ಡಿ.ಸಿ. ಯೋಜನೆ(ಸಹಾಯಧನ)** ಈ ಯೋಜನೆಯಡಿ ವಿವಿಧ ವರ್ಗದ ಸಹಕಾರ ಸಂಘಗಳಿಗೆ ಸಹಾಯಧನದ ರೂಪದಲ್ಲಿ ಆರ್ಥಿಕ ನೆರವನ್ನು ನೀಡಲಾಗುತ್ತದೆ.

2) **ಹಾಲು ಉತ್ಪಾದನಾ ಮಹಿಳಾ ಸಹಕಾರ ಸಂಘಗಳಿಗೆ ಮೂಲಭೂತ ಸೌಕರ್ಯಗಳಿಗಾಗಿ ಆರ್ಥಿಕ ಸಹಾಯ:** ಈ ಯೋಜನಾ ಕಾರ್ಯಕ್ರಮದಡಿ ಪ್ರಾರಂಭ ಹಂತದಲ್ಲಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಸಲುವಾಗಿ ಸರ್ಕಾರದಿಂದ ಸಹಾಯಧನ ರೂಪದಲ್ಲಿ ಆರ್ಥಿಕ ನೆರವು ನೀಡಲಾಗುತ್ತದೆ.. ಉತ್ತಮವಾಗಿ ಕಾರ್ಯ ನಿರ್ವಹಿಸುವ ಹಾಲು ಉತ್ಪಾದಕರ ಸಹಕಾರ ಸಂಘಗಳು ಹಾಲು ಸಂಗ್ರಹಣೆ ಕಾರ್ಯಾಗಾರವನ್ನು ನಿರ್ಮಿಸಿಕೊಳ್ಳಲು ತಲಾ ರೂ.50,000/- ಗಳನ್ನು ಮತ್ತು ಉಪಕರಣಗಳನ್ನು ಖರೀದಿಸಲು ರೂ.4,000/- ಗಳನ್ನು ಸಹಾಯಧನ ರೂಪದಲ್ಲಿ ನೀಡಲು ಯೋಜನೆಯಲ್ಲಿ ಅವಕಾಶ ಮಾಡಲಾಗಿರುತ್ತದೆ.

3) **ಸಣ್ಣ ಶಾಖೆಗಳ ಪ್ರಾರಂಭ ಮತ್ತು ವ್ಯವಹಾರ ಕಟ್ಟಡಗಳ ನಿರ್ಮಾಣ (ಸಾಲ):** ಈ ಯೋಜನೆಯಡಿ ಗ್ರಾಹಕ ಸಹಕಾರ ಸಂಘಗಳು ಸಣ್ಣ ಘಟಕಗಳನ್ನು ತೆರೆಯುವ ಸಲುವಾಗಿ ಬಳಕೆದಾರರ ಸಹಕಾರ ಸಂಘಗಳಿಗೆ ಆರ್ಥಿಕ ನೆರವನ್ನು ಸಾಲದ ರೂಪದಲ್ಲಿ ನೀಡಲು ಈ ಯೋಜನೆಯನ್ನು ರೂಪಿಸಿಕೊಳ್ಳಲಾಗಿದೆ

4) **ವಿವಿಧ ವರ್ಗದ ಸಹಕಾರ ಸಂಘಗಳಿಗೆ ಷೇರು ಬಂಡವಾಳದ ಸಹಾಯ(ಸಾಮಾನ್ಯ/ನಬಾರ್ಡ್/ಎನ್‌ಸಿಡಿಸಿ):** ಈ ಯೋಜನೆಯಡಿ ವಿವಿಧ ವರ್ಗದ ಸಹಕಾರಿ ಸಂಸ್ಥೆಗಳಿಗೆ ಷೇರು ಬಂಡವಾಳಕ್ಕಾಗಿ ಆರ್ಥಿಕ ನೆರವನ್ನು ನೀಡಲಾಗುತ್ತದೆ.

5) **ಇತರೆ ಸಹಕಾರ ಸಂಘಗಳ ಷೇರು ಬಂಡವಾಳ:** ಈ ಯೋಜನೆಯಡಿ ಸಾಕಷ್ಟು ಷೇರು ಬಂಡವಾಳ ಹೊಂದಿರದ ಸಂಘಗಳಿಗೆ ಸರ್ಕಾರವು ಷೇರು ಬಂಡವಾಳ ಒದಗಿಸಿ, ಆ ಮೂಲಕ ಆ ಸಂಘಗಳ ಸಾಲ ಪಡೆಯುವ ಸಾಮರ್ಥ್ಯ ಹೆಚ್ಚಿಸಿ ಆರ್ಥಿಕ ಅಭಿವೃದ್ಧಿಗೆ ಸಹಾಯವಾಗುತ್ತದೆ. ಪ್ರತಿ ಸಂಘಕ್ಕೆ ಗರಿಷ್ಠ ರೂ.25,000/- ವರೆಗೆ ಆರ್ಥಿಕ ಸಹಾಯವನ್ನು ನೀಡಲಾಗುವುದು.

6) **ಸಾರ್ವತ್ರಿಕ ಕಾರ್ಯಾಗಾರ ನಿರ್ಮಾಣಕ್ಕಾಗಿ ಮಹಿಳಾ ಸಹಕಾರ ಸಂಘಗಳಿಗೆ ಸಾಲಗಳು:** ಮಹಿಳಾ ಸಹಕಾರ ಸಂಘಗಳು ಅನೇಕ ಸಣ್ಣಮಟ್ಟ ಪದಾರ್ಥಗಳನ್ನು ಹಾಗೂ ಕೈಗಾರಿಕಾ ವಸ್ತುಗಳನ್ನು ತಯಾರಿಸಲು ಮತ್ತು ಸಿದ್ಧಪಡಿಸಲು, ನೌಕರರ/ಕಾರ್ಮಿಕರ ವರ್ಗದವರಿಗೆ ಕಾರ್ಯನಿರ್ವಹಿಸಲು ಅನುಕೂಲವಾಗಲು ತನ್ನದೇ ಆದ ಒಂದು ಸಾಮಾನ್ಯ ಕಾರ್ಯಾಗಾರವನ್ನು ಹೊಂದುವುದು ಅವಶ್ಯವಾಗಿರುತ್ತದೆ. ಈ ಉದ್ದೇಶಕ್ಕಾಗಿ ಸರ್ಕಾರದಿಂದ ಷೇರು ಬಂಡವಾಳದ ರೂಪದಲ್ಲಿ ಆರ್ಥಿಕ ನೆರವು ನೀಡಲಾಗುವುದು. ಪ್ರತಿ ಸಂಘಕ್ಕೆ ಗರಿಷ್ಠ ರೂ.25,000/- ರವರೆಗೆ ನೀಡಲಾಗುವುದು.

7) **ವಿವಿಧ ವರ್ಗದ ಸಹಕಾರಿ ಸಂಘಗಳಿಗೆ ಸಾಲದ ಸಹಾಯ (ಎನ್‌ಸಿಡಿಸಿ):** ಈ ಯೋಜನೆಯಡಿ ವಿವಿಧ ವರ್ಗದ ಸಹಕಾರ ಸಂಘಗಳಿಗೆ ಸಹಾಯಧನದ ರೂಪದಲ್ಲಿ ಆರ್ಥಿಕ ನೆರವನ್ನು ನೀಡಲಾಗುತ್ತದೆ.

ತಾಲ್ಲೂಕು ಪಂಚಾಯತ್ ಯೋಜನೆಗಳು

8) **ವಿಶೇಷ ಘಟಕ ಯೋಜನೆಯಡಿ – ಆಸ್ತಿಗಳ ಸೃಷ್ಟಿಗಾಗಿ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳು ಮಂಜೂರು ಮಾಡಿದ ಸಾಲಗಳ ಮೇಲೆ ಶೇಕಡ 60 ರಷ್ಟು ಸಹಾಯಧನ.:** ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳು ಆಸ್ತಿ ನಿರ್ಮಾಣಕ್ಕಾಗಿ ಪರಿಶಿಷ್ಟ ಜಾತಿ ಸದಸ್ಯರಿಗೆ ಮಂಜೂರು ಮಾಡಿದ ದೀರ್ಘಾವಧಿ ಸಾಲದ ಮೇಲೆ ಸರ್ಕಾರವು ಶೇಕಡ 60 ರಷ್ಟನ್ನು ಸಹಾಯಧನದ ರೂಪದಲ್ಲಿ ಸಂಬಂಧಪಟ್ಟ ಪ್ರಾಥಮಿಕ ಕೃಷಿ ಮತ್ತು ಭೂ ಅಭಿವೃದ್ಧಿ ಬ್ಯಾಂಕ್‌ನಿಂದ ಸಾಲ ತೆಗೆದುಕೊಳ್ಳುವವನ ಲೆಕ್ಕಕ್ಕೆ ಹೊಂದಾಣಿಕೆ ಆಗುವಂತೆ ಮಂಜೂರು ಮಾಡಿ ಆದೇಶ ಹೊರಡಿಸುತ್ತದೆ. ಈ ಯೋಜನೆಯಡಿ ಪರಿಶಿಷ್ಟ ಜಾತಿ ಫಲಾನುಭವಿಗಳು, ಬಡತನ ರೇಖೆಯಿಂದ ಮೇಲೆ ಬರಲು ಸಹಕಾರಿಯಾಗುತ್ತದೆ.

9) **ಮಹಿಳಾ ಸಹಕಾರ ಸಂಘಗಳಲ್ಲಿ ಹೂಡಿಕೆಗಳು (ಷೇರು):** ಮಹಿಳೆಯರಿಂದ ಸ್ಥಾಪಿಸಲ್ಪಟ್ಟು ನಡೆಸುತ್ತಿರುವ ಸಹಕಾರ ಸಂಘಗಳು ಸರಿಯಾದ ಸ್ಥಿತಿಯಲ್ಲಿ ಕಾರ್ಯನಿರ್ವಹಿಸಲು ಹಾಗೂ ಈ ಸಂಸ್ಥೆಗಳು ಒಂದು ಸಾಮರ್ಥ್ಯ ಘಟಕವಾಗಲು ಆರಂಭದ ವರ್ಷಗಳಲ್ಲಿ ತಮ್ಮ ಸಿಬ್ಬಂದಿ ವೆಚ್ಚಗಳನ್ನು ಭರಿಸಲು ಈ ಸಂಘಗಳಿಗೆ ಉತ್ತೇಜನ ನೀಡುವುದು ಅವಶ್ಯಕವಾಗಿದೆ. ಇದರಿಂದ ಮಹಿಳಾ ಸಹಕಾರ ಸಂಘಗಳು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಲು ನುರಿತ ವ್ಯಕ್ತಿಯನ್ನು ಈ ಉದ್ದೇಶಕ್ಕಾಗಿ ನೇಮಿಸಿಕೊಳ್ಳಲು ಸಾಧ್ಯವಾಗುತ್ತದೆ. ಇದಕ್ಕೆ ರೂ.7500/– ನ್ನು ಸಹಾಯಧನ ರೂಪದಲ್ಲಿ ಕೊಡಲಾಗುತ್ತದೆ. ಮೊದಲನೇ ವರ್ಷ ರೂ.3000/– ಎರಡನೇ ವರ್ಷ 2500/– ಮೂರನೇ ವರ್ಷ ರೂ.2000/– ಗಳನ್ನು ಸಂಘವು ಅಸ್ತಿತ್ವಕ್ಕೆ ಬಂದ ವರ್ಷದಿಂದ ನೀಡಲಾಗುತ್ತಿದೆ. ಇದಲ್ಲದೇ ರೂ.25000/– ಷೇರು ಬಂಡವಾಳ ಮತ್ತು ಸಾಲವಾಗಿ ಕೊಡಲಾಗುವುದು.

10) **ವ್ಯವಹಾರ ಕಟ್ಟಡಗಳ ನಿರ್ಮಾಣ ಮತ್ತು ಮಹಿಳಾ ಸಹಕಾರ ಸಂಘಗಳಿಗೆ ಸಾಲಗಳು:** ಈ ಯೋಜನೆಯಲ್ಲಿ ಮಹಿಳಾ ಸಹಕಾರ ಸಂಘಗಳು ಮಾರಾಟ ಮಳಿಗೆ ಕಟ್ಟಿಸಲು ಸಾಲ ಗರಿಷ್ಠ ರೂ.1 ಲಕ್ಷದವರೆಗೆ ಆರ್ಥಿಕ ಸಹಾಯ ನೀಡಲಾಗುವುದು.

ಸಹಕಾರ ಸಂಘಗಳ ಸಹಾಯಕ ನಿಬಂಧಕರು

(ಆಯವ್ಯಯ)

ಅನುಬಂಧ-2

ಕಳೆದ ಎರಡು ವರ್ಷಗಳಲ್ಲಿ ಇಲಾಖೆಯಿಂದ ಕೈಗೊಂಡಿರುವ ಕಾರ್ಯಕ್ರಮ ಮತ್ತು ಅನುದಾನದ ವಿವರ

ರಾಜ್ಯ ವಲಯ ಯೋಜನೆಗಳು (ರೂ.ಲಕ್ಷಗಳಲ್ಲಿ)

ಕ್ರ.ಸಂ	ಯೋಜನೆ	2018-19	2019-20
1	ಬೆಳೆ ಸಾಲಕ್ಕಾಗಿ ಬಡ್ಡಿ ಸಹಾಯಧನ	77749.64	102835.00
2	ಸ್ವಸಹಾಯ ವರ್ಗಗಳಿಗೆ ಸಾಲಗಳ ಮೇಲಣ ಬಡ್ಡಿ ಧನಸಹಾಯ	6000.00	8330.00
3	ಕಾಯಕ ಯೋಜನೆಗೆ ಬಡ್ಡಿ ಸಹಾಯಧನ	-	100.00
4	ಬಡವರ ಬಂಧು ಯೋಜನೆ ಗೆ ಬಡ್ಡಿ ಸಹಾಯಧನ	-	35.00
5	ಬಾಕಿದಾರರ ಸಾಲದ ಬಡ್ಡಿ ಮನ್ನಾ ಯೋಜನೆ	4625.35	5237.44
6	ಲ್ಯಾಂಪ್ಸ್ ಸಂಯುಕ್ತ ಸಂಘಗಳಿಗೆ ಮಾರುಕಟ್ಟೆ ಮೂಲ ಸೌಕರ್ಯಗಳ ಸ್ಥಾಪನೆ	370.00	200.00
7	ವಿವಿಧ ಸಹಕಾರಿ ಸಂಸ್ಥೆಗಳಲ್ಲಿ ಬಿ.ಪಿ.ಎಲ್/ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಹಿಂದುಳಿದ ಅಲ್ಪ ಸಂಖ್ಯಾತ, ಮಹಿಳಾ ಮತ್ತು ವಿಕಲ ಚೇತನ ವರ್ಗದ ಜನರನ್ನು ಸದಸ್ಯರನ್ನಾಗಿ ನೊಂದಾಯಿಸುವ ಬಗ್ಗೆ.	694.00	193.97
8	ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಹಿಂದುಳಿದ ವರ್ಗ ಮತ್ತು ಅಲ್ಪ ಸಂಖ್ಯಾತರ ಸಹಕಾರ ಸಂಘಗಳಿಗೆ ಹಣಕಾಸು ಸಹಾಯ	17.00	49.00
9	ಕಾಸ್ಕಾರ್ಡ ಬ್ಯಾಂಕ್‌ಗೆ ಸಾಲ	456.00	1000.00
10	ಯಶಸ್ವಿನಿ ಗ್ರಾಮೀಣ & ನಗರ	9314.00	-
11	ಸಾಲ ಮನ್ನಾ ಯೋಜನೆ (ರೂ.50,000)	274021.40	-
	ಸಾಲ ಮನ್ನಾ ಯೋಜನೆ(ರೂ.1.00 ಲಕ್ಷದವರೆಗೆ)	260000.00	517492.00
12	ಚಾಮರಾಜನಗರ ತೆಂಗು ಬೆಳೆಗಾರರ ಸಂಸ್ಕರಣ ಮತ್ತು ಮಾರಾಟ ಸಹಕಾರ ಸಂ.ನಿ.ಕ್ಕೆ ಬಡ್ಡಿ ರಹಿತ ಸಾಲ	-	300.00
13	ಮಲಪ್ರಭಾ ಸಹಕಾರಿ ಎಣ್ಣೆ ನಿರಣಿ ನಿ.,ನರಗುಂದಕ್ಕೆ ಅನುದಾನ	-	200.00
14	ಕೆ ಸಿ ಸಿ ಬ್ಯಾಂಕ ಧಾರವಾಡ ಹಾಗೂ ಡಿಸಿ ಸಿ ಬ್ಯಾಂಕ ವಿಜಯಪುರ ಬ್ಯಾಂಕಗಳಿಗೆ ಸಹಾಯನುದಾನ	500.00	-
	ಒಟ್ಟು	633747.39	635972.41

2018-19 ಮತ್ತು 2019-20 ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ್ ಯೋಜನೆಗಳಡಿ ಹಂಚಿಕೆಯಾದ ಅನುದಾನದ ವಿವರ

(ರೂ.ಲಕ್ಷಗಳಲ್ಲಿ)

ಕ್ರ.ಸಂ	ಯೋಜನಾವಾರು ವಿವರ ಹಾಗೂ ಲೆಕ್ಕಶೀರ್ಷಿಕೆ	ಜಿಲ್ಲೆಯ ಹೆಸರು	2018-19	2019-20
1	2	3	4	5
1	ವಿವಿಧ ಸಹಕಾರಿ ಸಂಘಗಳಿಗೆ ಸಹಾಯ/ಎನ್‌ಸಿಡಿಸಿ ಯೋಜನೆ	ಬೆಂಗಳೂರು ನಗರ	3.00	5.00
		ಬೆಂಗಳೂರು (ಗ್ರಾ)	4.00	4.00
		ಚಿತ್ರದುರ್ಗ	3.00	3.00
		ಕೋಲಾರ	2.50	2.50
		ಶಿವಮೊಗ್ಗ	7.00	7.00
		ತುಮಕೂರು	1.00	1.00
		ದಾವಣಗೆರೆ	3.00	3.00
		ರಾಮನಗರ	2.00	2.00
		ಚಿಕ್ಕಮಗಳೂರು	1.50	1.50
		ಹಾಸನ	6.00	6.00
		ಕೊಡಗು	4.50	4.50
		ಮಂಡ್ಯ	15.00	15.00
		ಉಡುಪಿ	1.50	1.50
		ವಿಜಯಪುರ	2.00	2.00
		ಧಾರವಾಡ	1.00	1.00
		ಉತ್ತರ ಕನ್ನಡ	4.00	4.00
		ಬಾಗಲಕೋಟೆ	1.00	1.00
		ಗದಗ	1.60	1.6
		ಹಾವೇರಿ	12.26	12.50
		ಕಲ್ಬುರ್ಗಿ	10.00	10.00
		ಬಳ್ಳಾರಿ	0.50	0.50
		ಬೀದರ್	3.00	3.00
		ರಾಯಚೂರು	5.00	5.00
		ಕೊಪ್ಪಳ	2.63	2.63

ಕ್ರ.ಸಂ	ಯೋಜನಾವಾರು ವಿವರ ಹಾಗೂ ಲೆಕ್ಕಶೀರ್ಷಿಕೆ	ಜಿಲ್ಲೆಯ ಹೆಸರು	2018-19	2019-20
1	2	3	4	5
	ಒಟ್ಟು		96.99	99.23
2	ಹಾಲು ಉತ್ಪಾದನಾ ಮಹಿಳಾ ಸಹಕಾರ ಸಂಘಗಳಿಗೆ ಮೂಲಭೂತ ಸೌಕರ್ಯಗಳು	ಬೆಂಗಳೂರು ನಗರ	5.00	5.00
		ಕೋಲಾರ	1.50	1.50
		ಮೈಸೂರು	25.00	20.00
		ದಕ್ಷಿಣ ಕನ್ನಡ	10.00	10.00
		ಹಾಸನ	6.00	6.00
		ಮಂಡ್ಯ	10.00	10.00
		ಚಾಮರಾಜನಗರ	6.00	8.00
		ಉಡುಪಿ	2.50	2.50
		ಗದಗ್	1.75	1.75
		ಬೀದರ್	3.00	3.00
		ರಾಯಚೂರು	2.00	2.00
		ಕೊಪ್ಪಳ	1.00	1.00
	ಒಟ್ಟು		73.75	70.75
	ವಿವಿಧ ವರ್ಗದ ಸಹಕಾರ ಸಂಘಗಳಿಗೆ ಷೇರು ಬಂಡವಾಳದ ಸಹಾಯ	ಬೆಂಗಳೂರು (ಗ್ರಾ)	6.00	6.00
		ಚಿತ್ರದುರ್ಗ	–	6.00
		ಕೋಲಾರ	5.00	5.00
		ಶಿವಮೊಗ್ಗ	4.00	4.00
		ತುಮಕೂರು	2.00	2.00
		ದಾವಣಗೆರೆ	3.00	3.00
		ರಾಮನಗರ	4.00	4.00
		ಚಿಕ್ಕಬಳ್ಳಾಪುರ	3.00	3.00
		ದಕ್ಷಿಣ ಕನ್ನಡ	10.00	10.00
		ಹಾಸನ	6.00	6.00
		ಮಂಡ್ಯ	18.00	18.00
		ಚಾಮರಾಜನಗರ	3.60	0.00
		ಧಾರವಾಡ	2.53	2.53
		ಗದಗ	7.60	7.60

ಕ್ರ.ಸಂ	ಯೋಜನಾವಾರು ವಿವರ ಹಾಗೂ ಲೆಕ್ಕಶೀರ್ಷಿಕೆ	ಜಿಲ್ಲೆಯ ಹೆಸರು	2018-19	2019-20
1	2	3	4	5
		ಹಾವೇರಿ	7.60	7.60
		ಕಲ್ಬುರ್ಗಿ	10.00	10.00
		ಬಳ್ಳಾರಿ	6.00	6.00
		ಬೀದರ್	8.00	8.00
		ರಾಯಚೂರು	5.00	5.00
		ಯಾದಗಿರಿ	6.00	8.00
		ಕೊಪ್ಪಳ	4.05	4.05
	ಒಟ್ಟು		**121.38**	**125.78**
4	ಇತರೆ ಸಹಕಾರ ಸಂಘಗಳಿಗೆ ಷೇರು ಬಂಡವಾಳ	ಚಿತ್ರದುರ್ಗ	6.00	1.00
		ಚಿಕ್ಕಬಳ್ಳಾಪುರ	3.00	3.00
		ಕೊಡಗು	4.50	4.50
		ಚಾಮರಾಜನಗರ	2.00	0.00
		ವಿಜಯಪುರ	7.60	7.60
		ಬಾಗಲಕೋಟೆ	3.00	3.00
		ಬಳ್ಳಾರಿ	0.50	0.50
		ಬೀದರ್	5.00	5.00
		ರಾಯಚೂರು	1.00	5.00
	ಒಟ್ಟು:		**32.60**	**29.60**
5	ವಿವಿಧ ವರ್ಗದ ಸಹಕಾರ ಸಂಘಗಳಿಗೆ ಸಾಲದ ಸಹಾಯ -ಎನ್.ಸಿ.ಡಿ.ಸಿ	ಚಿತ್ರದುರ್ಗ	6.00	6.00
		ದಾವಣಗೆರೆ	2.00	2.00
		ರಾಮನಗರ	4.00	4.00
		ಚಿಕ್ಕಬಳ್ಳಾಪುರ	1.00	1.00
		ಮಂಡ್ಯ	16.00	16.00
		ವಿಜಯಪುರ	10.00	10.00
		ಧಾರವಾಡ	2.53	2.53
		ಬಾಗಲಕೋಟೆ	2.25	2.25
		ಗದಗ	2.00	2.00
		ಕಲ್ಬುರ್ಗಿ	6.00	6.00

ಕ್ರ.ಸಂ	ಯೋಜನಾವಾರು ವಿವರ ಹಾಗೂ ಲೆಕ್ಕಶೀರ್ಷಿಕೆ	ಜಿಲ್ಲೆಯ ಹೆಸರು	2018–19	2019–20
1	2	3	4	5
		ಬಳ್ಳಾರಿ	5.00	5.00
		ಬೀದರ್	2.50	2.50
		ಕೊಪ್ಪಳ	2.00	2.00
	ಒಟ್ಟು:		**61.28**	**61.28**
6	ಸಾರ್ವತ್ರಿಕ ಕಾರ್ಯಾಗಾರದ ನಿರ್ಮಾಣಕ್ಕಾಗಿ ಮಹಿಳಾ ಸಹಕಾರ ಸಂಘಗಳಿಗೆ ಸಾಲಗಳು	ಬೆಂಗಳೂರು ಗ್ರಾಮೀಣ	6.00	6.00
		ದಾವಣಗೆರೆ	3.50	3.50
		ರಾಮನಗರ	2.00	2.00
		ಬೀದರ್	1.50	1.50
	ಒಟ್ಟು		**13.00**	**13.00**
7	ಸಣ್ಣ ಶಾಖೆಗಳ ಪ್ರಾರಂಭ ಮತ್ತು ವ್ಯವಹಾರ ಕಟ್ಟಡಗಳ ನಿರ್ಮಾಣ (ಸಾಲ)			
		ಗದಗ	6.00	6.00
		ಗುಲ್ಬರ್ಗಾ	3.90	3.90
		ಬಳ್ಳಾರಿ	1.10	1.10
	ಒಟ್ಟು		**11.00**	**11.00**
	ತಾಲ್ಲೂಕು ಪಂಚಾಯತ್ ಯೋಜನೆಗಳು			
8	ವಿಶೇಷ ಘಟಕ ಯೋಜನೆಯಡಿ– ಆಸ್ತಿಗಳ ಸೃಷ್ಟಿಗಾಗಿ ಪಿ.ಸಿ.ಎ.ಆರ್.ಡಿ.ಬಿ ಮಂಜೂರು ಮಾಡಿದ ಸಾಲಗಳ ಮೇಲೆ ಸಹಾಯಧನ	ಬೆಂಗಳೂರು ನಗರ	10.00	10.00
		ಬೆಂಗಳೂರು (ಗ್ರಾ)	4.00	4.00
		ಚಿತ್ರದುರ್ಗ	8.00	3.00
		ಕೋಲಾರ	5.00	5.00
		ಶಿವಮೊಗ್ಗ	1.00	1.00
		ತುಮಕೂರು	10.00	10.00
		ದಾವಣಗೆರೆ	2.00	2.00
		ರಾಮನಗರ	4.00	4.00
		ಚಿಕ್ಕಬಳ್ಳಾಪುರ	3.00	3.00
		ಮೈಸೂರು	25.00	30.00
		ಚಿಕ್ಕಮಗಳೂರು	4.00	4.50
		ದಕ್ಷಿಣ ಕನ್ನಡ	8.00	8.00
		ಹಾಸನ	20.00	20.00
		ಕೊಡಗು	3.00	3.00

ಕ್ರ.ಸಂ	ಯೋಜನಾವಾರು ವಿವರ ಹಾಗೂ ಲೆಕ್ಕಶೀರ್ಷಿಕೆ	ಜಿಲ್ಲೆಯ ಹೆಸರು	2018-19	2019-20
1	2	3	4	5
		ಮಂಡ್ಯ	8.00	8.00
		ಚಾಮರಾಜ ನಗರ	11.60	15.50
		ಉಡುಪಿ	4.00	4.00
		ಬೆಳಗಾಂ	3.00	3.00
		ವಿಜಯಪುರ	1.40	1.40
		ಬಾಗಲಕೋಟೆ	3.00	10.00
		ಗದಗ	3.00	3.00
		ಹಾವೇರಿ	1.47	1.47
		ಕಲ್ಬುರ್ಗಿ	4.00	4.00
		ಬೀದರ್	2.50	2.50
		ಕೊಪ್ಪಳ	3.32	3.32
		ಯಾದಗಿರಿ	3.00	3.00
	ಒಟ್ಟು:		**155.29**	**166.69**
9	ಮಹಿಳಾ ಸಹಕಾರಿ ಸಂಘಗಳಲ್ಲಿ ಹೂಡಿಕೆಗಳು (ಷೇರು)	ಬೆಂಗಳೂರು ನಗರ	1.50	1.50
		ಕೋಲಾರ	1.50	1.50
		ದಕ್ಷಿಣ ಕನ್ನಡ	1.50	1.50
		ಕೊಡಗು	0.75	0.75
		ಮಂಡ್ಯ	3.00	3.00
		ಬೆಳಗಾವಿ	1.30	1.50
		ಬಾಗಲಕೋಟೆ	1.00	1.00
		ಕಲ್ಬುರ್ಗಿ	4.00	4.00
		ಬೀದರ್	3.00	3.00
		ರಾಯಚೂರು	1.00	1.00
		ಯಾದಗಿರಿ	3.00	4.00
		ಕೊಪ್ಪಳ	1.00	1.00
	ಒಟ್ಟು		**22.55**	**23.75**
10	ವ್ಯವಹಾರ ಕಟ್ಟಡಗಳ ನಿರ್ಮಾಣ ಮತ್ತು ಮಹಿಳಾ ಸಹಕಾರ ಸಂಘಗಳಿಗೆ ಸಾಲಗಳು (ದುಡಿಮೆ ಬಂಡವಾಳ)	ಚಿಕ್ಕಬಳ್ಳಾಪುರ	5.16	5.00
		ಕೊಪ್ಪಳ	2.00	2.00
	ಒಟ್ಟು		**7.16**	**7.00**

ಸಹಕಾರ ಸಂಘಗಳ ಸಹಾಯಕ ನಿಬಂಧಕರು
(ಆಯವ್ಯಯ)

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಐ 36 ಸಿಓಎಫ್ 2021

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 04.02.2021

ಇವರಿಂದ:

ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ,
ವಿಕಾಸಸೌಧ, ಬೆಂಗಳೂರು.

ಇವರಿಗೆ:

ಕಾರ್ಯದರ್ಶಿ(ಪ್ರ)
ಕರ್ನಾಟಕ ವಿಧಾನ ಸಭೆ
ವಿಧಾನಸೌಧ, ಬೆಂಗಳೂರು.

150
Q/S
5/2/21

ಶ್ರೀನಿವಾಸ್.ಎಂ.

ಮಾನ್ಯರೆ,

ವಿಷಯ: ಮಾನ್ಯ ಕರ್ನಾಟಕ ವಿಧಾನ ಸಭಾ ಸದಸ್ಯರಾದ ಶ್ರೀ ~~[illegible]~~. ಇವರ ಚುಕ್ಕೆ ಗುರುತಿನ ಪ್ರ.ಸಂ:1067ಕ್ಕೆ ಉತ್ತರಿಸುವ ಬಗ್ಗೆ.

ಉಲ್ಲೇಖ: ತಮ್ಮ ಕಛೇರಿ ಪತ್ರ ಸಂಖ್ಯೆ: ವಿಸಪ್ರಶಾ/15ನೇವಿಸ/9ಅ/ಚುಗು-ಚುರ ಪ್ರಶ್ನೆ/06/2021; ಪ್ರಸಂ. 1067/2021, ದಿನಾಂಕ:04.02.2021.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರಗಳ ಕಡೆಗೆ ತಮ್ಮ ಗಮನವನ್ನು ಸೆಳೆಯಲಾಗಿದೆ. ಕಾರ್ಯದರ್ಶಿ ಕರ್ನಾಟಕ ವಿಧಾನ ಸಭಾ ಸದಸ್ಯರಾದ ಶ್ರೀ ~~[illegible]~~ ಶ್ರೀನಿವಾಸ್.ಎಂ. ಇವರ ಚುಕ್ಕೆ ಗುರುತಿನ ಪ್ರ.ಸಂ:1067ಕ್ಕೆ ಸಂಬಂಧಿಸಿದಂತೆ ಉತ್ತರದ 100 ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿದೆ. ಸದರಿ ಉತ್ತರದ ಸಾಫ್ಟ್ ಪ್ರತಿಗಳನ್ನು ಪಿಡಿಎಫ್ ಮಾದರಿಯಲ್ಲಿ ಇ-ಮೇಲ್ ವಿಳಾಸ **dsqb-kla-kar@nic.inಕ್ಕೆ** ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿತಳಾಗಿದ್ದೇನೆ.

ತಮ್ಮ ನಂಬುಗೆಯ

04/02/2021

(ಜೆ.ಶೀಲಾಬಾಯಿ)
ಸರ್ಕಾರದ ಅಧೀನ ಕಾರ್ಯದರ್ಶಿ (ಸಕ್ಕರೆ)
ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ
ದೂರವಾಣಿ : 080-22034611

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1067
2. ಸದಸ್ಯರ ಹೆಸರು : ಶ್ರೀ ಶ್ರೀನಿವಾಸ್ ಎಂ.
3. ಉತ್ತರಿಸಬೇಕಾದ ದಿನಾಂಕ : 05.02.2021
4. ಉತ್ತರಿಸುವ ಸಚಿವರು : ಪೌರಾಡಳಿತ ಮತ್ತು ಸಕ್ಕರೆ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
(ಅ)	ಮಂಡ್ಯ ಮೈಷುಗರ್ ಸಕ್ಕರೆ ಕಾರ್ಖಾನೆ ಕಬ್ಬು ಅರೆಯದೆ ಸ್ಥಗಿತಗೊಂಡಿದ್ದು, ಅದನ್ನು ಪುನಾರಂಭಿಸುವ ಬಗ್ಗೆ ಸರ್ಕಾರದ ಕ್ರಮವೇನು; (ವಿವರ ನೀಡುವುದು)	ಮೈಸೂರು ಸಕ್ಕರೆ ಕಂಪನಿಯು 2015-16, 2016-17 ಹಾಗೂ 2019-20 ನೇ ಸಾಲಿನಲ್ಲಿ ದುಡಿಯುವ ಬಂಡವಾಳದ ಕೊರತೆಯಿಂದಾಗಿ ಕಬ್ಬು ಅರೆಯುವ ಕಾರ್ಯವನ್ನು ಸ್ಥಗಿತಗೊಳಿಸಿರುತ್ತದೆ ಈ ಕಾರ್ಖಾನೆಯನ್ನು ಪುನಶ್ಚೇತನಗೊಳಿಸುವ ಸಂಬಂಧ ಸದರಿ ಕಾರ್ಖಾನೆಯನ್ನು 2021-22ನೇ ಹಂಗಾಮಿನಿಂದ 40 ವರ್ಷಗಳ ಅವಧಿಗೆ LROT(Lease Rehablitate Operate Transfer) ಆಧಾರದ ಮೇಲೆ ಇದ್ದಲ್ಲಿ ಇದ್ದಂತೆಯೇ ((As is where is Basis) ಖಾಸಗಿಯವರಿಗೆ ಗುತ್ತಿಗೆ ನೀಡಲು ಸರ್ಕಾರದ ಆದೇಶ ಸಂಖ್ಯೆ ಸಿಐ 05 ಸಿಓಎಫ್ 2020 ದಿನಾಂಕ 18-11-2020ರಲ್ಲಿ ಅನುಮತಿಯನ್ನು ನೀಡಲಾಗಿದೆ.
(ಆ)	ಅವು ಯಾವ ಹಂತದಲ್ಲಿದೆ; (ಸಂಪೂರ್ಣ ಮಾಹಿತಿ ನೀಡುವುದು)	ಸದರಿ ಕಾರ್ಖಾನೆಯನ್ನು ಖಾಸಗಿಯವರಿಗೆ ಗುತ್ತಿಗೆ ಸಂಬಂಧ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮಗಳು 2000ರನ್ವಯ ಟೆಂಡರ್ ಕರೆಯುವ ಸಂಬಂದ ಟೆಂಡರ್ ಡಾಕ್ಯುಮೆಂಟ್ ಮತ್ತು ಒಡಂಬಡಿಕೆ ಪತ್ರವನ್ನು ಸಿದ್ದಪಡಿಸಲು ಕ್ರಮವಹಿಸಲಾಗುತ್ತಿದೆ.
(ಇ)	ಮೈಷುಗರ್ ಸಕ್ಕರೆ ಕಾರ್ಖಾನೆಯನ್ನು ಯಾವಾಗ ಪ್ರಾರಂಭಿಸಲಾಗುವುದು? (ವಿವರ ನೀಡುವುದು)	ಯಶಸ್ವಿ ಬಿಡ್ಡುದಾರರು ಸದರಿ ಕಾರ್ಖಾನೆಯಲ್ಲಿ 2021-22ನೇ ಸಾಲಿನಿಂದ ಕಬ್ಬು ನುರಿಸುವ ಹಂಗಾಮನ್ನು ಪ್ರಾರಂಭಿಸುವಂತೆ ಟೆಂಡರ್‌ನಲ್ಲಿ ಷರತ್ತು ವಿಧಿಸಲಾಗುತ್ತಿದ್ದು, ಅದರಂತೆ ಯಶಸ್ವಿ ಬಿಡ್ಡುದಾರರು 2021-22ನೇ ಹಂಗಾಮಿನಿಂದ ಸದರಿ ಕಬ್ಬು ನುರಿಸುವ ಕಾರ್ಯವನ್ನು ಪ್ರಾರಂಭಿಸುತ್ತಾರೆ.

ಸಂಖ್ಯೆ: ಸಿಐ 36 ಸಿಓಎಫ್ 2021

(ಎನ್. ನಾಗರಾಜು.ಎಂ.ಟಿ.ಬಿ.)
ಪೌರಾಡಳಿತ ಮತ್ತು ಸಕ್ಕರೆ ಸಚಿವರು.

ಕರ್ನಾಟಕ ಸರ್ಕಾರ

ಸಂಖ್ಯೆ: HORTI 57 HGM 2021

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿ: 04-02-2021

4/3 (11) 5/2/21

ಇವರಿಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿ
ತೋಟಗಾರಿಕೆ ಇಲಾಖೆ

ಇವರಿಗೆ:

ಕಾರ್ಯದರ್ಶಿಯವರು
ಕರ್ನಾಟಕ ವಿಧಾನಸಭಾ ಸಚಿವಾಲಯ,
ವಿಧಾನಸೌಧ, ಬೆಂಗಳೂರು.

ಮಾನ್ಯರೇ,

ವಿಷಯ : ಡಾ: ಅಜಯ್ ಧರ್ಮಸಿಂಗ್, ವಿಸಸ, ಇವರ ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ:1160ರ ಬಗ್ಗೆ.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಡಾ: ಅಜಯ್ ಧರ್ಮಸಿಂಗ್, ವಿಸಸ, ಇವರ ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ:1160ಕ್ಕೆ ಉತ್ತರದ 25 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

T.V. Sunandamma 04/02/2021
(ಟಿ.ವಿ.ಸುನಂದಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ
ತೋಟಗಾರಿಕೆ ಇಲಾಖೆ

ಕರ್ನಾಟಕ ವಿಧಾನಸಭೆ

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 1160
ಮಾನ್ಯ ಸದಸ್ಯರ ಹೆಸರು : ಶ್ರೀ.ಅಜಯ್ ಧರ್ಮಸಿಂಗ್ ಡಾ|| (ಜೇವರ್ಗಿ)
ಉತ್ತರಿಸುವ ಸಚಿವರು : ಮಾನ್ಯ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು
ಉತ್ತರಿಸಬೇಕಾದ ದಿನಾಂಕ : 05-02-2021

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಬೆಂಗಳೂರು ಹೊರತುಪಡಿಸಿ ರಾಜ್ಯದ ಉಳಿದ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲಿ ತೋಟಗಾರಿಕೆ ಇಲಾಖೆಯು ನರ್ಸರಿಗಳನ್ನು ಹೊಂದಿದೆಯೇ;	ಇಲ್ಲ. ರಾಜ್ಯದ 176 ವಿಧಾನ ಸಭಾ ಕ್ಷೇತ್ರಗಳಲ್ಲಿ ಮಾತ್ರ ತೋಟಗಾರಿಕೆ ಇಲಾಖೆಯು ನರ್ಸರಿಗಳನ್ನು ಹೊಂದಿದೆ.
ಆ)	ರಾಜ್ಯದಲ್ಲಿ ನರ್ಸರಿಗಳನ್ನು ಹೊಂದಿರುವ ಎಷ್ಟು ವಿಧಾನಸಭಾ ಕ್ಷೇತ್ರಗಳಿವೆ (ಪೂರ್ಣ ಮಾಹಿತಿ ನೀಡುವುದು);	ರಾಜ್ಯದ 176 ವಿಧಾನ ಸಭಾ ಕ್ಷೇತ್ರಗಳಲ್ಲಿ ತೋಟಗಾರಿಕೆ ಇಲಾಖೆಯು ನರ್ಸರಿಗಳನ್ನು ಹೊಂದಿದೆ. (ಮಾಹಿತಿಯನ್ನು ಅನುಬಂಧ-1ರಲ್ಲಿ ನೀಡಲಾಗಿದೆ).
ಇ)	ನರ್ಸರಿಗಳಲ್ಲಿ ರೈತರಿಗೆ ಯಾವ ಯಾವ ಜಿಲ್ಲೆಗಳಲ್ಲಿ ಯಾವ ಯಾವ ತೋಟಗಾರಿಕೆ ಸಸಿಗಳನ್ನು ವಿತರಿಸಲಾಗುತ್ತಿದೆ;	ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1ರಲ್ಲಿ ನೀಡಲಾಗಿದೆ.
ಈ)	ಜೇವರ್ಗಿ ವಿಧಾನಸಭಾ ಕ್ಷೇತ್ರದಲ್ಲಿ ನರ್ಸರಿ ಇಲ್ಲದೆ ರೈತರು ಇಲಾಖೆಯ ಸೌಲಭ್ಯಗಳನ್ನು ಪಡೆಯಲು ತೊಂದರೆಗೊಳಗಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.	ಜೇವರ್ಗಿ ವಿಧಾನಸಭಾ ಕ್ಷೇತ್ರದಲ್ಲಿ ನರ್ಸರಿ ಇರುವುದಿಲ್ಲ. ಈ ಕ್ಷೇತ್ರದ ರೈತರು ಕಲಬುರಗಿ ತಾಲ್ಲೂಕಿನ ಕೆಸರಟಗಿ ಮತ್ತು ಅಫಜಲಪುರ ತಾಲ್ಲೂಕಿನ ಗುಡೂರು ತೋಟಗಾರಿಕೆ ಕ್ಷೇತ್ರಗಳಿಂದ ಸಸಿ/ಕಸಿಗಳನ್ನು ಖರೀದಿಸುತ್ತಾರೆ.
ಉ)	ಹಾಗಿದ್ದಲ್ಲಿ, ಸದರಿ ಮತ ಕ್ಷೇತ್ರದಲ್ಲಿ ನರ್ಸರಿಗಳನ್ನು ತೆರೆಯಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ (ವಿವರ ನೀಡುವುದು)?	ಸದರಿ ಮತ ಕ್ಷೇತ್ರದಲ್ಲಿ ಇಲಾಖೆಯ ವ್ಯಾಪ್ತಿಯಡಿ ಯಾವುದೇ ಜಮೀನು ಇಲ್ಲದೇ ಇರುವುದರಿಂದ ನರ್ಸರಿ ತೆರೆಯಲಾಗಿರುವುದಿಲ್ಲ.

ಸಂಖ್ಯೆ: HORTI 57 HGM 2021

(ಆರ್.ಶಂಕರ್)
ತೋಟಗಾರಿಕೆ ಮತ್ತು ರೇಷ್ಮೆ
ಸಚಿವರು

ಅನುಬಂಧ-1

ರಾಜ್ಯದಲ್ಲಿ ತೋಟಗಾರಿಕೆ ಇಲಾಖೆಯ ವ್ಯಾಪ್ತಿಯಲ್ಲಿರುವ ಕ್ಷೇತ್ರ ಮತ್ತು ನರ್ಸರಿಗಳು (ವಿಧಾನಸಭಾ ಕ್ಷೇತ್ರವಾರು) ಮತ್ತು ಕಸಿ/ಸಸಿಗಳ ವಿವರಗಳು

Sl. No	ಜಿಲ್ಲೆಯ ಹೆಸರು	ತೋಟಗಾರಿಕೆ ಕ್ಷೇತ್ರ/ಸಸ್ಯಾಗಾರದ ಹೆಸರು	ವಿಧಾನ ಸಭಾ ಕ್ಷೇತ್ರದ ಹೆಸರು	ರೈತರಿಗೆ ವಿತರಿಸಲಾಗುವ ತೋಟಗಾರಿಕೆ ಸಸಿಗಳ ವಿವರ
1	2	3	4	5
1	ಬೆಂಗಳೂರು ಗ್ರಾಮಾಂತರ	ತಿಪ್ಪಗೊಂಡನಹಳ್ಳಿ ತೋ.ಕ್ಷೇ.	ನೆಲಮಂಗಲ	ಮಾವು, ತೆಂಗು, ಸೀಬೆ, ಕರಿಬೇವು, ನುಗ್ಗೆ, ನಿಂಬೆ, ಸಪೋಟ ಪಪ್ಪಾಯ, ಅಡಿಕೆ, ಅಲಂಕಾರಿಕ ಗಿಡ, ಔಷಧಿ ಗಿಡಗಳು
2		ನೆಲಮಂಗಲ ಸಸ್ಯಾಗಾರ	ನೆಲಮಂಗಲ	
3		ಮಾದರಿ ಪುಷ್ಪಾಭಿವೃದ್ಧಿ ಕೇಂದ್ರ ನಗರೂರು	ಯಲಹಂಕ	
4		ದೊಡ್ಡಬಳ್ಳಾಪುರ ತೋ.ಕ್ಷೇ.	ದೊಡ್ಡಬಳ್ಳಾಪುರ	
5		ಕೆ.ಪೂಜೇನಹಳ್ಳಿ ತೋ.ಕ್ಷೇ.	ದೇವನಹಳ್ಳಿ	
6		ದೇವನಹಳ್ಳಿ ಸಸ್ಯಾಗಾರ	ದೇವನಹಳ್ಳಿ	
7		ಕನ್ನಮಂಗಲ ತೋ.ಕ್ಷೇ.	ಮಹದೇವಪುರ	
8		ದಂಡುಪಾಳ್ಯ ತೋ.ಕ್ಷೇ.	ಹೊಸಕೋಟೆ	
9	ಬಾಗಲಕೋಟೆ	ಶ್ರೀ ಬನಶಂಕರಿ ತೋ.ಕ್ಷೇ.	ಬದಾಮಿ	ತೆಂಗು, ಕರಿಬೇವು, ಸೀಬೆ,ನಿಂಬೆ, ನುಗ್ಗೆ, ಮಾವು, ಅಲಂಕಾರಿಕಾ ಸಸಿಗಳು & ತರಕಾರಿ ಸಸಿಗಳು
ವಿಷಯ : ಕರ್ನಾಟಕ ವಿಧಾನ ಸಭೆಯ ಸದಸ್ಯರಾದ ಶ್ರೀ ಶಿವಾನಂದ ಎಸ್. ಪಾಟೀಲ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1090ಕ್ಕೆ ಉತ್ತರ ಒದಗಿಸುವ ಕುರಿತು.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಸಭೆಯ ಸದಸ್ಯರಾದ ಶ್ರೀ ಶಿವಾನಂದ ಎಸ್. ಪಾಟೀಲ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1090ಕ್ಕೆ ಸಂಬಂಧಿಸಿದಂತೆ ಉತ್ತರದ 25 ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲಾಗಿದೆ.

ತಮ್ಮ ನಂಬುಗೆಯ,

Radha H.C
(ಹೆಚ್. ಸಿ. ರಾಧ)
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ)
ಸಹಕಾರ ಇಲಾಖೆ.

ಕರ್ನಾಟಕ ವಿಧಾನ ಸಭೆ

ಮಾನ್ಯ ವಿಧಾನ ಸಭೆ ಸದಸ್ಯರು : ಶ್ರೀ ಶಿವಾನಂದ ಎಸ್.ಪಾಟೀಲ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1090

ಉತ್ತರಿಸಬೇಕಾದ ದಿನಾಂಕ : 05.02.2021

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	2020–21 ನೇ ಸಾಲಿಗೆ ರಾಜ್ಯದ ರೈತರಿಗೆ ಕೃಷಿ ಪತ್ತಿನ ಸಹಕಾರ ಸಂಸ್ಥೆಗಳು ನಿವ್ವಳ ಶೂನ್ಯ ಬಡ್ಡಿದರ ಅನ್ವಯವಾಗುವಂತೆ ರೂ.3.00 ಲಕ್ಷಗಳವರೆಗಿನ ಅಲ್ಪಾವಧಿ ಕೃಷಿ ಸಾಲ ನೀಡಲು ಸರ್ಕಾರ ಸುತ್ತೋಲೆಯನ್ನು ಹೊರಡಿಸಿದೆಯೇ?	ಹೌದು. 2020–21 ನೇ ಸಾಲಿಗೆ ರಾಜ್ಯದ ರೈತರಿಗೆ ಕೃಷಿ ಪತ್ತಿನ ಸಹಕಾರ ಸಂಸ್ಥೆಗಳು ನಿವ್ವಳ ಶೂನ್ಯ ಬಡ್ಡಿದರ ಅನ್ವಯವಾಗುವಂತೆ ರೂ.3.00 ಲಕ್ಷಗಳವರೆಗಿನ ಅಲ್ಪಾವಧಿ ಕೃಷಿ ಸಾಲ ನೀಡಲು ಸರ್ಕಾರ ಆದೇಶ ಸಂಖ್ಯೆ: ಸಿಒ 201 ಸಿಎಲ್‌ಎಸ್ 2020, ದಿ.05.09.2020 ರಂದು ಆದೇಶ ಹೊರಡಿಸಲಾಗಿದೆ.
ಆ)	ಹೊರಡಿಸಿದ್ದಲ್ಲಿ, ಇದಕ್ಕಾಗಿ ಯಾವ ಷರತ್ತುಗಳನ್ನು ವಿಧಿಸಲಾಗಿದೆ (ಮಾಹಿತಿ ಒದಗಿಸುವುದು)	ಸರ್ಕಾರ ಆದೇಶ ಸಂಖ್ಯೆ: ಸಿಒ 201 ಸಿಎಲ್‌ಎಸ್ 2020, ದಿ.05.09.2020ರ ಆದೇಶದ ಪ್ರತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.
ಇ)	ಒಂದು ಕುಟುಂಬಕ್ಕೆ ಗರಿಷ್ಟ ರೂ.3.00 ಲಕ್ಷ ಮಾತ್ರ ಸಾಲ ವಿತರಿಸಲು ಆದೇಶಿಸಿರುವುದನ್ನು ಸರ್ಕಾರ ರೈತರ ಹಿತದೃಷ್ಟಿಯಿಂದ ಮರುಪರಿಶೀಲಿಸಿ ಸಾಲ ವಿತರಣೆಗೆ ವಿಧಿಸಿರುವ ಸುತ್ತೋಲೆಯನ್ನು ತಿದ್ದುಪಡಿ ಮಾಡಲು ಕ್ರಮ ಕೈಗೊಳ್ಳುವುದೇ:	ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿದೆ.
ಈ)	ಹಾಗಿದ್ದಲ್ಲಿ, ರೈತರ ಹಿತದೃಷ್ಟಿಯಿಂದ ಪ್ರತಿ ಕುಟುಂಬದ ಬದಲಾಗಿ ಪ್ರತಿ ಅರ್ಹ ರೈತನಿಗೆ ಸಾಲ ವಿತರಿಸಲು ಸುತ್ತೋಲೆ ಮೂಲಕ ಅವಕಾಶ ಕಲ್ಪಿಸಲಾಗುವುದೇ? (ಮಾಹಿತಿ ಒದಗಿಸುವುದು)	ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿದ್ದು, ಪರಿಶೀಲನೆಯ ನಂತರ ಕ್ರಮವಿಡಲಾಗುವುದು.

ಸಂಖ್ಯೆ: ಸಿಒ 27 ಸಿಎಲ್‌ಎಸ್ 2021

(ಎಸ್.ಟಿ. ಸೋಮಶೇಖರ್)
ಸಹಕಾರ ಸಚಿವರು

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2020-21ನೇ ಸಾಲಿಗೆ ರಾಜ್ಯದ ರೈತರಿಗೆ ಪತ್ತಿನ ಸಹಕಾರಿ ಸಂಸ್ಥೆಗಳು ಶೂನ್ಯ ಬಡ್ಡಿದರ ಅನ್ವಯವಾಗುವಂತೆ ರೂ.3.00 ಲಕ್ಷಗಳವರೆಗೆ ಅಲ್ಪಾವಧಿ ಕೃಷಿ ಸಾಲ ವಿತರಿಸುವ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ: ಸಿಒ 109 ಸಿಎಲ್ಎಸ್ 2019, ದಿನಾಂಕ:30-03-2020.
2. ಸರ್ಕಾರದ ಆದೇಶ ಸಂಖ್ಯೆ:ಸಿಒ 109 ಸಿಎಲ್ಎಸ್ 2019, ದಿನಾಂಕ:21-05-2020.
3. ಸಹಕಾರ ಸಂಘಗಳ ನಿಬಂಧಕರ ಪತ್ರ ಸಂಖ್ಯೆ: ಆರ್‌ಸಿಎಸ್/ ಸಿಆರ್‌ಡಿ/ ಸಿಎಬಿ-1/ 02/ 2020-21, ದಿನಾಂಕ: 30-05-2020.

****

ಪ್ರಸ್ತಾವನೆ:

ಮೇಲೆ ಓದಲಾದ (1) ಮತ್ತು (2)ರ ಸರ್ಕಾರದ ಆದೇಶದಲ್ಲಿ 2019-20ನೇ ಸಾಲಿಗೆ ರಾಜ್ಯದ ರೈತರಿಗೆ ಪತ್ತಿನ ಸಹಕಾರಿ ಸಂಸ್ಥೆಗಳ ಮೂಲಕ ಶೂನ್ಯ ಬಡ್ಡಿ ದರದಲ್ಲಿ ರೂ.3.00 ಲಕ್ಷಗಳವರೆಗೆ ಅಲ್ಪಾವಧಿ ಕೃಷಿ ಸಾಲ ನೀಡಲು ಆದೇಶ ಹೊರಡಿಸಲಾಗಿರುತ್ತದೆ.

ಮೇಲೆ ಓದಲಾದ (3) ರ ಸಹಕಾರ ಸಂಘಗಳ ನಿಬಂಧಕರ ಪತ್ರದಲ್ಲಿ ರಾಜ್ಯದ ರೈತರಿಗೆ ಪತ್ತಿನ ಸಹಕಾರಿ ಸಂಸ್ಥೆಗಳ ಮೂಲಕ ಶೂನ್ಯ ಬಡ್ಡಿ ದರದಲ್ಲಿ ರೂ.3.00 ಲಕ್ಷಗಳವರೆಗೆ 2020-21ನೇ ಸಾಲಿಗೆ ಅಲ್ಪಾವಧಿ ಕೃಷಿ ಸಾಲ ನೀಡಲು ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ, ರೈತರ ಕೃಷಿ ಚಟುವಟಿಕೆಗಳಿಗೆ ಸಕಾಲದಲ್ಲಿ ಬೆಳೆ ಸಾಲ ಒದಗಿಸಲು ಅನುಕೂಲ ಮಾಡಿಕೊಡುವ ಸಲುವಾಗಿ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಒ 201 ಸಿಎಲ್ಎಸ್ 2020, ದಿನಾಂಕ: 05-09-2020

ರಾಜ್ಯದ ರೈತರಿಗೆ ಸಹಕಾರಿ ಸಂಸ್ಥೆಗಳು ನಿವ್ವಳ ಶೂನ್ಯ ಬಡ್ಡಿದರ ಅನ್ವಯವಾಗುವಂತೆ ಒಂದು ಕುಟುಂಬಕ್ಕೆ ಗರಿಷ್ಟ ರೂ.3.00 ಲಕ್ಷಗಳವರೆಗೆ ಅಲ್ಪಾವಧಿ ಕೃಷಿ ಸಾಲ ನೀಡುವ ಯೋಜನೆಯನ್ನು ಕೆಳಕಂಡ ಷರತ್ತುಗಳಿಗೊಳಪಟ್ಟು ಜಾರಿಗೊಳಿಸಲು ಸರ್ಕಾರ ಮಂಜೂರಾತಿ ನೀಡಿ ಆದೇಶಿಸಿದೆ.

ಷರತ್ತುಗಳು:

1. ಈ ಯೋಜನೆಯು ಕೃಷಿ ಪತ್ತಿನ ಸಹಕಾರಿ ಸಂಸ್ಥೆಗಳು ಅಂದರೆ, ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಸ್ಥೆಗಳು, ಟಿಬೇಟಿಯನ್ ಸಹಕಾರ ಸಂಸ್ಥೆಗಳು, ಕೃಷಿ ಮತ್ತು ಕೃಷಿ ಸಂಬಂಧಿತ ಅಲ್ಪಾವಧಿ ಸಾಲಗಳನ್ನು ನೀಡುತ್ತಿರುವ ಲ್ಯಾಂಪ್ಸ್ ಸಹಕಾರ ಸಂಘಗಳು, ಪಿಕಾರ್ಡ್ ಬ್ಯಾಂಕುಗಳು ಮತ್ತು ಸಹಕಾರ ಸಂಘಗಳ ನಿಬಂಧಕರು ಈ ಯೋಜನೆಯಡಿ ಅರ್ಹಎಂದು ಗುರುತಿಸುವ ಇತರೆ ಸಹಕಾರಿ ಸಂಸ್ಥೆಗಳು ವಿತರಿಸುವ ಅಲ್ಪಾವಧಿ ಕೃಷಿ ಸಾಲಗಳಿಗೆ ಅನ್ವಯಿಸುತ್ತದೆ. (ಪಟ್ಟಣ ಸಹಕಾರ ಬ್ಯಾಂಕುಗಳು ನೀಡುವ ಸಾಲಗಳಿಗೆ ಈ ಯೋಜನೆ ಅನ್ವಯಿಸುವುದಿಲ್ಲ).

2. ಈ ಯೋಜನೆಯು ಒಂದು ಕುಟುಂಬಕ್ಕೆ ಗರಿಷ್ಟ ರೂ.3.00 ಲಕ್ಷಗಳಿಗೆ ನೀಡಿದ ಸಾಲಗಳಿಗೆ ಮಾತ್ರ ಅನ್ವಯವಾಗುತ್ತದೆ.

3. ಸಾಲ ಪಡೆದ ರೈತ ಸರ್ಕಾರಿ/ಸರ್ಕಾರಿ ಸಾಮ್ಯದ ಸಂಸ್ಥೆಗಳಲ್ಲಿ ನೌಕರನಾಗಿದ್ದು, ಮಾಸಿಕ ರೂ.20000 ವೇತನ/ಪಿಂಚಣಿ ಪಡೆಯುತ್ತಿರುವ ಅಥವಾ ಕಳೆದ ಮೂರು ವರ್ಷಗಳಲ್ಲಿ ಆದಾಯತೆರಿಗೆ ಪಾವತಿಸಿದ್ದರೆ ಅಂತಹ ರೈತರಿಗೆ ಬಡ್ಡಿ ಪ್ರೋತ್ಸಾಹಧನ ದೊರೆಯುವುದಿಲ್ಲ. ಇದಕ್ಕಾಗಿ ಅರ್ಜಿ ನಮೂನೆಯಲ್ಲಿಯೇ ರೈತನ ದೃಡೀಕರಣವನ್ನು ಪಡೆಯತಕ್ಕದ್ದು. ಈಗಾಗಲೇ ಸಾಲ ವಿತರಿಸಿದ್ದಲ್ಲಿ ಪ್ರತ್ಯೇಕವಾಗಿ ದೃಡೀಕರಣ ಪಡೆಯತಕ್ಕದ್ದು.

4. ಸಹಕಾರ ಸಂಘಗಳು ರೈತರಿಗೆ ಕೇಂದ್ರ ಸರ್ಕಾರ ನಿಗದಿಪಡಿಸಿದ ಮಾನದಂಡಗಳನ್ವಯ ಶೇ.7 ರ ಬಡ್ಡಿದರದಲ್ಲಿ ಸಾಲ ವಿತರಿಸಬೇಕು.

ಮೂರು ಹಂತದ ಸಹಕಾರ ಸಂಘಗಳು/ಬ್ಯಾಂಕುಗಳು ತಮ್ಮ ಅಧೀನದಲ್ಲಿ ಬರುವ ಸಹಕಾರ ಸಂಘಗಳು/ಬ್ಯಾಂಕುಗಳಿಗೆ ಆಕರಣೆ ಮಾಡಬೇಕಾದ ಬಡ್ಡಿದರ ಮತ್ತು ಸಂಬಂಧಿಸಿದ ಸಂಸ್ಥೆಗಳು ಆಡಳಿತ ವೆಚ್ಚವನ್ನು ಸರಿದೂಗಿಸುವ ಸಲುವಾಗಿ ರಾಜ್ಯ ಸರ್ಕಾರದಿಂದ ಗರಿಷ್ಟ ಒಂದು ವರ್ಷದ ಅವಧಿಗೆ ನೀಡುವ ಬಡ್ಡಿ ಸಹಾಯಧನವನ್ನು ಈ ಕೆಳಗೆ ನೀಡಿದೆ.

I. ಅಪೆಕ್ಸ್ ಬ್ಯಾಂಕ್ ನಬಾರ್ಡ್‌ನಿಂದ ರಿಯಾಯತಿ ಬಡ್ಡಿದರದಲ್ಲಿ ಪಡೆದ ಸಾಲಕ್ಕೆ (ಶೇ.4.50) ಅಪೆಕ್ಸ್ ಬ್ಯಾಂಕ್ ಮಾರ್ಜಿನ್‌ದರ ಶೇ.0.50 ನ್ನು ಸೇರಿಸಿ ಒಟ್ಟಾರೆ ಶೇ.5.00 ರ ಬಡ್ಡಿ ಆಕರಣೆ ಮಾಡಿ ಡಿಸಿಸಿ ಬ್ಯಾಂಕುಗಳಿಗೆ ಸಾಲ ವಿತರಿಸಬೇಕು. ಅಪೆಕ್ಸ್ ಬ್ಯಾಂಕ್ ತನ್ನ ಸ್ವಂತ ಬಂಡವಾಳದಲ್ಲಿ ವಿತರಿಸಿದ ಸಾಲಗಳಿಗೆ ತನ್ನಯುಕ್ತ ಬಡ್ಡಿದರದಲ್ಲಿ ಸಾಲ ವಿತರಿಸುವುದು. ಕೇಂದ್ರ ಸರ್ಕಾರದಿಂದ ಲಭ್ಯವಾಗುವ ಶೇ.2ರ interest subvention ಮೊತ್ತವನ್ನು ಡಿಸಿಸಿ ಬ್ಯಾಂಕುಗಳೇ ಪಡೆಯುವಂತೆ ಬಡ್ಡಿದರ ನಿಗದಿಪಡಿಸಬೇಕು. ನಬಾರ್ಡ್‌ನಿಂದ ಹೆಚ್ಚುವರಿದರದಲ್ಲಿ ಮತ್ತು special liquidity fundಅಡಿಯಲ್ಲಿ ಪಡೆದ ಸಾಲಗಳಿಗೆ ಶೇ.0.25 ಮಾರ್ಜಿನ್ ಮಾತ್ರ ಅಪೆಕ್ಸ್ ಬ್ಯಾಂಕ್ ಆಕರಿಸತಕ್ಕದ್ದು.

II. ಡಿಸಿಸಿ ಬ್ಯಾಂಕುಗಳು ಪ್ಯಾಕ್ಸ್ ಗಳಿಗೆ ಶೇ.6.70 ರ ಬಡ್ಡಿದರವನ್ನು ಮತ್ತು ವಾಣಿಜ್ಯ ಬ್ಯಾಂಕುಗಳು ಪ್ಯಾಕ್ಸ್ ಗಳಿಗೆ ಶೇ.6.20 ಬಡ್ಡಿ ಆಕರಣೆ ಮಾಡಿ ಸಾಲ ವಿತರಿಸತಕ್ಕದ್ದು. ಇದಕ್ಕಾಗಿ ಕೇಂದ್ರ ಸರ್ಕಾರ ನೀಡುವ ಶೇ.2 ರ ಬಡ್ಡಿ ಸಹಾಯಧನವನ್ನು ಡಿಸಿಸಿ ಬ್ಯಾಂಕುಗಳು/ವಾಣಿಜ್ಯ ಬ್ಯಾಂಕುಗಳು ಪಡೆಯತಕ್ಕದ್ದು. ನಿಗದಿತ ಅವಧಿಯಲ್ಲಿ ವಸೂಲಾದ ಸಾಲಗಳಿಗೆ ಪ್ಯಾಕ್ಸ್ ಗಳಿಂದ ಯಾವುದೇ ಬಡ್ಡಿಯನ್ನು ವಸೂಲು ಮಾಡಬಾರದು ರಾಜ್ಯ ಸರ್ಕಾರದಿಂದ ಬಿಡುಗಡೆ ಮಾಡಿದ ಬಡ್ಡಿ ಸಹಾಯಧನದಿಂದ ಮಾತ್ರ ಡಿಸಿಸಿ ಬ್ಯಾಂಕುಗಳು/ವಾಣಿಜ್ಯ ಬ್ಯಾಂಕುಗಳು ಬಡ್ಡಿ ಜಮಾ ಪಡೆಯತಕ್ಕದ್ದು.

III. ಪ್ಯಾಕ್ಸ್‌ಗಳ ಹಂತದಲ್ಲಿ, ಪ್ಯಾಕ್ಸ್‌ಗಳು ರೈತರಿಗೆ ಕೇಂದ್ರ ಸರ್ಕಾರ ನಿಗದಿಪಡಿಸಿದ (ಶೇ.7) ಬಡ್ಡಿದರ ಆಕರಿಸಿ ಸಾಲ ವಿತರಿಸತಕ್ಕದ್ದು, ರೈತರು ನಿಗದಿತ ಅವಧಿಯಲ್ಲಿ ಸಾಲ ಮರುಪಾವತಿಸಿದಲ್ಲಿ ಕೇಂದ್ರ ಸರ್ಕಾರದ ಶೇ.3ರ ಪ್ರಾಮಾಣಿಕವಾಗಿ ಮರುಪಾವತಿಸಿದವರಿಗೆ ನೀಡುವ ಪ್ರೋತ್ಸಾಹಧನ (prompt payers incentive) ಮತ್ತು ರಾಜ್ಯ ಸರ್ಕಾರದ ಶೇ.4ರ ಬಡ್ಡಿ ಸಹಾಯಧನವನ್ನು

ಕೂಡಲೇ ರೈತರ ಖಾತೆಗೆ ವಾಪಸ್ಸು ನೀಡಿ, ಕೇಂದ್ರ ಸರ್ಕಾರದಿಂದ ಶೇ. 3 ಮತ್ತು ರಾಜ್ಯ ಸರ್ಕಾರದ ಶೇ.4ರ ಬಡ್ಡಿ ಸಹಾಯಧನವನ್ನು ಕ್ಲೇಮು ಮಾಡತಕ್ಕದ್ದು. ಇದರಿಂದ ರೈತರಿಗೆ ನಿವ್ವಳ ಶೂನ್ಯ ಬಡ್ಡಿದರದಲ್ಲಿ ಸಾಲ ನೀಡಿದಂತಾಗುತ್ತದೆ.

IV. ಒಟ್ಟಾರೆ ರಾಜ್ಯ ಸರ್ಕಾರವು ಶೇ.5.80ರಷ್ಟು ಬಡ್ಡಿ ಸಹಾಯಧನವನ್ನು ನೀಡಲಿದ್ದು, ಇದರಲ್ಲಿ ಶೇ.2.10 ಪ್ಯಾಕ್ಸ್ ಗಳಿಗೆ ಸಹಾಯಧನ ಹಾಗೂ ಉಳಿದ ಶೇ.3.70 ಬಡ್ಡಿ ಸಹಾಯಧನವನ್ನು ಡಿಸಿಸಿ ಬ್ಯಾಂಕುಗಳ ಮಾರ್ಜಿನ್ ಆಗಿ ನಿಗಧಿಪಡಿಸಲಾಗಿದೆ.

V. ವಾಣಿಜ್ಯ ಬ್ಯಾಂಕುಗಳಿಗೆ ಅದ್ಯರ್ಪಿತಗೊಂಡ ಸಹಕಾರ ಸಂಘಗಳು ಶೇ.5.30 (5.80-0.50 = 5.30)ರ ಬಡ್ಡಿ ಸಹಾಯಧನವನ್ನು ರಾಜ್ಯ ಸರ್ಕಾರದಿಂದ ಕ್ಲೇಮು ಮಾಡತಕ್ಕದ್ದು. ಇದರಲ್ಲಿ ಪ್ಯಾಕ್ಸ್‌ಗಳಿಗೆ ಶೇ.2.10 ಮಾರ್ಜಿನ್ ನೀಡಿ ಉಳಿದ ಶೇ.3.20 ಬಡ್ಡಿ ಸಹಾಯಧನದ ಮೊತ್ತವನ್ನು ವಾಣಿಜ್ಯ ಬ್ಯಾಂಕುಗಳು ಪಡೆದುಕೊಳ್ಳತಕ್ಕದ್ದು.

VI. ಕೇಂದ್ರ ಸರ್ಕಾರ ಸಕಾಲದಲ್ಲಿ ಮರುಪಾವತಿಸಿದ ರೈತರಿಗೆ ನೀಡುವ ಪ್ರೋತ್ಸಾಹಧನವನ್ನೂ ಸಹ ಡಿಸಿಸಿ ಬ್ಯಾಂಕುಗಳು/ವಾಣಿಜ್ಯ ಬ್ಯಾಂಕುಗಳು ಪಡೆಯತಕ್ಕದ್ದು.

VII. ಡಿಸಿಸಿ ಬ್ಯಾಂಕುಗಳು ತಮ್ಮ ಶಾಖೆಗಳ ಮೂಲಕ ನೇರವಾಗಿ ಸಾಲ ವಿತರಿಸಿದಲ್ಲಿ ಶೇ.4.80 ಬಡ್ಡಿ ಸಹಾಯಧನವನ್ನು ರಾಜ್ಯ ಸರ್ಕಾರದಿಂದ ನೀಡಲಾಗುವುದು.

5. ನಿಗದಿಪಡಿಸಿದ ಗಡುವು ದಿನಾಂಕದೊಳಗೆ ರೈತರು ಸಾಲ ಮರುಪಾವತಿಸಿದಲ್ಲಿ ಮಾತ್ರ ಕೇಂದ್ರ ಸರ್ಕಾರ ನೀಡುವ ಶೇ.3ರ ಪ್ರೋತ್ಸಾಹಧನ ಮತ್ತ ರಾಜ್ಯ ಸರ್ಕಾರದಿಂದ ನೀಡುವ ಶೇ.4ರ ಬಡ್ಡಿ ಸಹಾಯಧನಕ್ಕೆ ಅರ್ಹರಾಗುತ್ತಾರೆ.

6. ರೈತನು ಎರಡು ಸಂಘಗಳ ಕಾರ್ಯ ವ್ಯಾಪ್ತಿಯಲ್ಲಿ ಭೂಮಿಯನ್ನು ಹೊಂದಿದರೆ ಆದ್ಯತೆಯ ಮೇರೆಗೆ ರೈತನು ವಾಸಿಸುತ್ತಿರುವ ವ್ಯಾಪ್ತಿಯ ಸಂಘದಲ್ಲಿ ಪಡೆದ ಸಾಲಗಳಿಗೆ ಮೊದಲು ಪಾವತಿಸಿ, ರೂ.3 ಲಕ್ಷದ ಮಿತಿಯಲ್ಲಿ ಇತರೆ ಸಂಘದ ವ್ಯಾಪ್ತಿಯಲ್ಲಿ ಪಡೆದ ಸಾಲಗಳಿಗೆ ಸಹಾಯಧನ ವಿತರಿಸತಕ್ಕದ್ದು.

7. ರೈತರು ತಮ್ಮ ಸಾಲದ ದಾಖಲೆಗಳಲ್ಲಿ ತಪ್ಪದೇ ಆಧಾರ ಕಾರ್ಡ್‌ನ ನಕಲು ಪ್ರತಿ ನೀಡುವುದರೊಂದಿಗೆ ಆಧಾರ್ ಕಾರ್ಡ್ ಬಳಕೆಯ ಘೋಷಣಾ ಪತ್ರವನ್ನು ನೀಡತಕ್ಕದ್ದು,

8. ಈ ಬಡ್ಡಿದರವು ದಿನಾಂಕ:01.04.2020 ರಿಂದ ದಿನಾಂಕ: 31.03.2021ರವರೆಗೆ ಮಂಜೂರು ಮಾಡಿ ವಿತರಿಸಿದ ಕೃಷಿ ಅಲ್ಪಾವಧಿ ಸಾಲಗಳಿಗೆ ಮಾತ್ರ ಅನ್ವಯವಾಗುತ್ತದೆ.

9. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಸ್ಥಗಿತ/ಸಮಾಪನೆಗೊಂಡಿದ್ದಲಿ ಹಾಗೂ ಬಂಡವಾಳ ಕೊರತೆಯುಂಟಾಗಿದ್ದರೆ, ಅಂತಹ ಕಾರ್ಯ ವ್ಯಾಪ್ತಿಯಲ್ಲಿನ ರೈತರಿಗೆ ಡಿಸಿಸಿ ಬ್ಯಾಂಕಿನ ಶಾಖೆಗಳ ಮೂಲಕ ಸಾಲ ವಿತರಿಸತಕ್ಕದ್ದು.

10. ರಾಜ್ಯ ಮಟ್ಟದ ತಾಂತ್ರಿಕ ಸಮಿತಿಯಿಂದ ಅನುಮೋದನೆ ಪಡೆದು ಅಧಿಸೂಚನೆ ಹೊರಡಿಸಿದ ಸ್ಕೇಲ್ ಆಫ್ ಫೈನಾನ್ಸ್ ಮತ್ತು ಬೆಳೆ ವಿಮೆ ಆಧಾರದ ಮೇಲೆ ಮಂಜೂರಾದ ಸಾಲದ ಮಿತಿಗೆ ಮಾತ್ರ ಬಡ್ಡಿ ಸಹಾಯಧನ ಅನ್ವಯವಾಗುವುದು. Post harvest ಹಾಗೂ ಇತರೆ ಉದ್ದೇಶಗಳಿಗೆ ನೀಡುವ ಸಾಲಗಳಿಗೆ ಬಡ್ಡಿ ಸಹಾಯಧನ ಅನ್ವಯವಾಗುವುದಿಲ್ಲ.

11. ರೈತರಿಗೆ ಸಾಲ ಮತ್ತು ಸಹಾಯಧನವನ್ನು ಅವರು ಡಿಸಿಸಿ ಬ್ಯಾಂಕ್ ಅಥವಾ ವಾಣಿಜ್ಯ ಬ್ಯಾಂಕಿನಲ್ಲಿ ಹೊಂದಿರುವ ಉಳಿತಾಯ ಖಾತೆಯ ಮೂಲಕವೇ ವಿತರಿಸತಕ್ಕದ್ದು. ಸಾಲ ಮತ್ತು ಸಹಾಯಧನವನ್ನು ಸಂಘಗಳ ಹಂತದಲ್ಲಿ ನಗದು ಮೂಲಕ ಪಾವತಿಸುವುದನ್ನು ನಿರ್ಭಂದಿಸಲಾಗಿದೆ.

12. ಪ್ರಸ್ತುತ ಆರ್ಥಿಕ ವರ್ಷದಲ್ಲಿ ಅಂದರೆ, 01-04-2020 ರಿಂದ 31-03-2021 ರವರೆಗೆ ಅಂದಾಜು 24.50 ಲಕ್ಷ ರೈತರಿಗೆ ಬೆಳೆ ಸಾಲ ವಿತರಿಸಲು ಈಗಾಗಲೇ ಅಪೆಕ್ಸ್ ಬ್ಯಾಂಕ್ ಮತ್ತು ಡಿಸಿಸಿ ಬ್ಯಾಂಕುಗಳು ಗುರಿಯನ್ನು ಹೊಂದಿರುತ್ತವೆ, ಈಗಾಗಲೇ ಹೊಂದಿರುವ ಗುರಿಯಂತೆ ಸಾಲ ವಿತರಿಸಲು ಕ್ರಮ ಜರುಗಿಸತಕ್ಕದ್ದು. ಸಾಲ ವಿತರಣೆಯಲ್ಲಿ ಹೊಸ ಸದಸ್ಯರಿಗೆ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ 24.10% ಪ್ರತ್ಯೇಕವಾಗಿ ಗುರಿ ನಿಗಧಿಪಡಿಸತಕ್ಕದ್ದು.

13. ಸಾಲ ನೀಡುವ ಸಂಸ್ಥೆಗಳು ಪ್ರಾಥಮಿಕ ಸಹಕಾರಿ ಸಂಸ್ಥೆಗಳಿಂದ ಮತ್ತು ಪ್ರಾಥಮಿಕ ಸಹಕಾರಿ ಸಂಸ್ಥೆಗಳು ರೈತ ಸದಸ್ಯರಿಂದ ಯಾವುದೇ ಪ್ರಕ್ರಿಯಾ ಶುಲ್ಕ ಅಥವಾ ಸೇವಾ ಶುಲ್ಕ ಹೆಸರಿನಲ್ಲಿ ಯಾವುದೇ ಹಣವನ್ನು ಸಂಗ್ರಹಿಸತಕ್ಕದ್ದಲ್ಲ.

14. ಈ ಸೌಲಭ್ಯವು ಸಹಕಾರಿ ಸಂಸ್ಥೆಗಳು ನೀಡುವ ಕೃಷಿಯೇತರ (Non-agricultural loans) ಸಾಲಗಳಿಗೆ ಅನ್ವಯವಾಗುವುದಿಲ್ಲ.

15. ಪತ್ತಿನ ಸಹಕಾರ ಸಂಘಗಳು/ಬ್ಯಾಂಕುಗಳು ತಮಗೆ ದೊರೆಯಬೇಕಾದ ಬಡ್ಡಿ ಸಹಾಯಧನದ ಮತ್ತು ರೈತರಿಗೆ ದೊರೆಯಬೇಕಾದ ಬಡ್ಡಿ ಪ್ರೋತ್ಸಾಹಧನದ ಬಿಲ್ಲುಗಳನ್ನು ಪ್ರತಿ ತ್ರೈಮಾಸಿಕವಾಗಿ ಸಾಲ ವಸೂಲಾತಿ ಆಧಾರವಾಗಿ ನಿಬಂಧಕರು ಪಡೆದು ಅನುದಾನ ಬಿಡುಗಡೆ ಮಾಡತಕ್ಕದ್ದು. ಸಾಲ ವಿತರಿಸುವ ಹಂತದಲ್ಲಿಯೇ ರೈತರ ಎಲ್ಲಾ ಮಾಹಿತಿಯನ್ನು ತಂತ್ರಾಂಶದಲ್ಲಿ ಅಳವಡಿಸಲು ನಿಬಂಧಕರು ಸೂಕ್ತ ತಂತ್ರಾಂಶವನ್ನು ಅಭಿವೃದ್ಧಿ ಪಡಿಸತಕ್ಕದ್ದು ಮತ್ತು ಎಲ್ಲಾ ರೈತರ ಮಾಹಿತಿಯನ್ನು ತಂತ್ರಾಂಶದಲ್ಲಿ ಅಳವಡಿಸಲು ಕ್ರಮವಹಿಸತಕ್ಕದ್ದು.

16. ಸಹಕಾರ ಸಂಘ/ಬ್ಯಾಂಕುಗಳು ಸಾಲ ವಿತರಣೆ ಸಮಯದಲ್ಲಿಯೇ ಡಿಸಿಸಿ ಬ್ಯಾಂಕಿನ ವ್ಯವಸ್ಥಾಪಕರು ಮತ್ತು ತಾಲ್ಲೂಕು ಅಭಿವೃದ್ಧಿ ಅಧಿಕಾರಿ ಶೇ.100 ರಷ್ಟು ಬಿಲ್ಲುಗಳನ್ನು ಆನ್ ಲೈನ್ ಮೂಲಕ ಪರಿಶೀಲಿಸಿ ಸಾಲವನ್ನು ದೃಡೀಕರಿಸತಕ್ಕದ್ದು. ಈ ರೀತಿ ಪಡೆದ ಬಿಲ್ಲುಗಳಿಗೆ ನಿಬಂಧಕರು ಡಿಸಿಸಿ ಬ್ಯಾಂಕುಗಳಿಗೆ ಅನುದಾನ ಬಿಡುಗಡೆ ಮಾಡತಕ್ಕದ್ದು ಹಾಗೂ ಸಹಾಯಧನದ ಸದುಪಯೋಗದ ಬಗ್ಗೆ ತ್ರೈಮಾಸಿಕ ಪ್ರಗತಿ ವರದಿಗಳನ್ನು ನಿಗದಿತ ನಮೂನೆಯಲ್ಲಿ ಉಪಯೋಗ ಪ್ರಮಾಣ ಪತ್ರಗಳನ್ನು ಸಲ್ಲಿಸತಕ್ಕದ್ದು.

17. ಈ ಯೋಜನೆಯಡಿ ಅನುದಾನದ ಬಿಡುಗಡೆಯು ಕರ್ನಾಟಕ ಆರ್ಥಿಕ ಸಂಹಿತೆಯ ಪರಿಚ್ಛೇದ 161(ಬಿ)(2), ಪರಿಚ್ಛೇದ 101(ಬಿ)(5)(111)ರಡಿಯ ಟಿಪ್ಪಣಿ-2 ಹಾಗೂ ಪರಿಚ್ಛೇದ 101(ಬಿ)(6)(11)ರ ಅವಕಾಶಗಳ ಪಾಲನೆಗೆ ಒಳಪಟ್ಟಿರುತ್ತದೆ.

18. ಸಹಕಾರ ಸಂಘಗಳ ನಿಬಂಧಕರು ಈ ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಅಗತ್ಯವಾದ ಎಲ್ಲಾ ಕ್ರಮಗಳನ್ನು ಕೈಗೊಳ್ಳತಕ್ಕದ್ದು ಮತ್ತು ಅಗತ್ಯವಾದ ಮಾರ್ಗದರ್ಶನ ಮತ್ತು ಸೂಚನೆಗಳನ್ನು ನೀಡಲು ಸಕ್ಷಮರಾಗಿರತಕ್ಕದ್ದು.

19. ಈ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕಾಲಕಾಲಕ್ಕೆ ಸರ್ಕಾರ ಮತ್ತು ಸಹಕಾರ ಸಂಘಗಳ ನಿಬಂಧಕರು ನೀಡುವ ಸೂಚನೆಗಳನ್ನು ಸಂಬಂಧಿಸಿದ ಎಲ್ಲ ಸಹಕಾರ ಸಂಸ್ಥೆಗಳು ಕಡ್ಡಾಯವಾಗಿ ಪಾಲಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 135 ವೆಚ್ಚ-2/2020, ದಿನಾಂಕ:20.08.2020 ಮತ್ತು ದಿ:03.09.2020ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕರಾಜ್ಯಪಾಲರಆದೇಶಾನುಸಾರ
ಮತ್ತುಅವರ ಹೆಸರಿನಲ್ಲಿ,

(ಕೆ.ಎಂ. ಆಶಾ)
ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.

<u>ಇವರಿಗೆ:</u>

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು, ಇವರಿಗೆ ಕರ್ನಾಟಕ ರಾಜ್ಯಪತ್ರದಲ್ಲಿ ಕೂಡಲೇ ಪ್ರಕಟಿಸಿ, ಅದರ 100 ಪ್ರತಿಗಳನ್ನು ಒದಗಿಸಲು ಕೋರಿದೆ.

<u>ಪ್ರತಿಗಳು:</u>

1. ಪ್ರಧಾನ ಮಹಾಲೇಖಪಾಲರು, (ಜಿ&ಎಸ್ಎಸ್ಎ)/(ಇ&ಆರ್ಎಸ್ಎ)/(ಎ&ಇ), ಕರ್ನಾಟಕ ರಾಜ್ಯ, ಬೆಂಗಳೂರು.
2. ಮಾನ್ಯ ಸಹಕಾರ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ, ಬೆಂಗಳೂರು
6. ಸಹಕಾರ ಸಂಘಗಳ ನಿಬಂಧಕರು, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು-52.
7. ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕರು, ಶಂಕರಮಠ ರಸ್ತೆ, ಬಸವನಗುಡಿ, ಬೆಂಗಳೂರು-4.
8. ಮುಖ್ಯಕಾರ್ಯನಿರ್ವಹಣಾಧಿಕಾರಿ, ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ., ಉತ್ತುಂಗ, ನಂ.1, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-18.
9. ಮುಖ್ಯಕಾರ್ಯನಿರ್ವಹಣಾಧಿಕಾರಿ, ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್, ಚಾಮರಾಜಪೇಟೆ, ಬೆಂಗಳೂರು.
10. ಆಂತರಿಕ ಆರ್ಥಿಕ ಸಲಹೆಗಾರರು, ಸಹಕಾರ ಇಲಾಖೆ, ಬಹುಮಹಡಿಕಟ್ಟಡ, ಬೆಂಗಳೂರು.
11. ಸರ್ಕಾರದ ಅಧೀನ ಕಾರ್ಯದರ್ಶಿ-3, ಸಹಕಾರ ಇಲಾಖೆ, ಬೆಂಗಳೂರು
12. ರಾಜ್ಯ ಹುಜೂರ್ ಖಜಾನೆ, ನೃಪತುಂಗರಸ್ತೆ, ಬೆಂಗಳೂರು.
13. ರಾಜ್ಯ ಖಜಾನೆ ಅಧಿಕಾರಿ, ಜೆ.ಸಿ. ರಸ್ತೆ, ಬೆಂಗಳೂರು.
14. ಶಾಖಾ ರಕ್ಷಾ ಕಡತ : ಹೆಚ್ಚುವರಿ ಪ್ರತಿ

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಒ 08 ಸಿಆರ್‌ಸಿ 2021

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:03.02.2021

135

U/S
05/2/21

ಇವರಿಂದ,

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಹಕಾರ ಇಲಾಖೆ,
ಬೆಂಗಳೂರು – 560 001.

ಇವರಿಗೆ,

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ ಸಚಿವಾಲಯ
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಕರ್ನಾಟಕ ವಿಧಾನ ಸಭಾ ಸದಸ್ಯರಾದ ಶ್ರೀ ಶಿವಾನಂದ ಎಸ್. ಪಾಟೀಲ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1091 ಕ್ಕೆ ಉತ್ತರ ನೀಡುವ ಬಗ್ಗೆ.

******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಸಭಾ ಸದಸ್ಯರಾದ ಶ್ರೀ ಶಿವಾನಂದ ಎಸ್. ಪಾಟೀಲ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1091 ಕ್ಕೆ ಸಂಬಂಧಿಸಿದಂತೆ ಉತ್ತರದ 25 ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿತಳಾಗಿದ್ದೇನೆ.

ತಮ್ಮ ನಂಬುಗೆಯ,

Radha H C

(ಹೆಚ್.ಸಿ. ರಾಧ)
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ),
ಸಹಕಾರ ಇಲಾಖೆ.

ಕರ್ನಾಟಕ ವಿಧಾನ ಸಭೆ

ಮಾನ್ಯ ವಿಧಾನ ಸಭೆಯ ಸದಸ್ಯರು : ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನಬಾಗೇವಾಡಿ)

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1091

ಉತ್ತರಿಸಬೇಕಾದ ದಿನಾಂಕ : 05.02.2021

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಈಶ್ವರ ಕೋ-ಆಪರೇಟಿವ್ ಕ್ರೆಡಿಟ್ ಸೊಸೈಟಿ ನಿ., ವಿಜಯಪುರ ಇದರಲ್ಲಿ ಎಷ್ಟು ಜನ ಗ್ರಾಹಕರು ಮುದ್ದತ್ತು ಠೇವಣಿ ಹಣ ಇಟ್ಟಿರುತ್ತಾರೆ;	ಈಶ್ವರ ಕ್ರೆಡಿಟ್ ಕೋ-ಆಪ್ ಸೊಸೈಟಿ ಲಿ., ವಿಜಯಪುರ ಇಲ್ಲಿ ದಿನಾಂಕ:31-03-2020ರ ಅಂತ್ಯಕ್ಕೆ 4212 ಖಾತೆದಾರರು ರೂ.22,70,59,581/- ಮೊತ್ತದ ಮುದ್ದತಿ ಠೇವಣಿ ಹಣ ಇಟ್ಟಿರುತ್ತಾರೆ.
ಆ)	ಇವರಲ್ಲಿ ಎಷ್ಟು ಜನ ಗ್ರಾಹಕರ ಮುದ್ದತ್ತು ಠೇವಣಿ ಅವಧಿ ಮುಕ್ತಾಯವಾಗಿರುತ್ತದೆ;	4212 ಠೇವಣಿದಾರರ ಮುದ್ದತು ಠೇವಣಿ ಅವಧಿ ಮುಕ್ತಾಯಗೊಂಡಿರುತ್ತದೆ.
ಇ)	ಮುದ್ದತ್ತು ಠೇವಣಿ ಅವಧಿ ಮುಕ್ತಾಯವಾಗಿರುವ ಗ್ರಾಹಕರಿಗೆ ಸೊಸೈಟಿಯಿಂದ ಠೇವಣಿ ಹಣ ಮರುಪಾವತಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು.
ಈ)	ಮುದ್ದತ್ತು ಮೀರಿದ ಠೇವಣಿ ಹಣ ಮರುಪಾವತಿಸದೇ ಇರುವುದಕ್ಕೆ ಕಾರಣಗಳೇನು;	ಸಂಘವು ಸಂಗ್ರಹಿಸಿದ ಠೇವಣಿ ಹಣವು ದುರುಪಯೋಗವಾಗಿದ್ದು, ಹಣ ವಸೂಲಾತಿಯಾಗದಿರುವ ಕಾರಣ ಮುದ್ದತು ಮೀರಿದ ಠೇವಣಿ ಹಣವನ್ನು ಮರುಪಾವತಿಸಲು ಸಾಧ್ಯವಾಗಿರುವುದಿಲ್ಲ.
ಉ)	ಗ್ರಾಹಕರ ಹಿತದೃಷ್ಟಿಯಿಂದ ಸರ್ಕಾರ ಮುದ್ದತ್ತು ಮೀರಿದ ಠೇವಣಿ ಹಣವನ್ನು ಠೇವಣಿದಾರರಿಗೆ ಮರುಪಾವತಿಸಲು ಕೈಕೊಳ್ಳುವ ಕ್ರಮಗಳೇನು?	ಸಂಘದಲ್ಲಿ ಹಣ ದುರುಪಯೋಗವಾಗಿರುವ ಆರೋಪಕ್ಕೆ ಸಂಬಂಧಪಟ್ಟಂತೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಪ್ರಕರಣ 64 ರಡಿಯಲ್ಲಿ ವಿಚಾರಣೆ ನಡೆಸಲಾಗಿದ್ದು, ವಿಚಾರಣೆಯಲ್ಲಿ ಹಣ ದುರುಪಯೋಗವಾಗಿರುವುದು ಸಾಬೀತಾಗಿದೆ. ಸಂಘದ 2017-18 ಸಾಲಿನ ಲೆಕ್ಕ ಪರಿಶೋಧನೆಯಲ್ಲಿಯೂ ಹಣದುರುಪಯೋಗ ಕಂಡುಬಂದಿರುತ್ತದೆ. ಸಂಘದ ಆಡಳಿತ ಮಂಡಳಿಯ ಸದಸ್ಯರ ವಿರುದ್ಧ ಪ್ರಕರಣ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 29-ಸಿ ರಡಿ ಕ್ರಮಕೈಗೊಂಡು, ಎಲ್ಲಾ ಆಡಳಿತ ಮಂಡಳಿ ಸದಸ್ಯರನ್ನು ಅನರ್ಹಗೊಳಿಸಲಾಗಿದ್ದು, ಸಂಘಕ್ಕೆ ವಿಶೇಷಾಧಿಕಾರಿ ನೇಮಿಸಲಾಗಿದೆ. ಕರ್ನಾಟಕ ಸಹಕಾರ
		ಸಂಘಗಳ ಕಾಯ್ದೆ ಪ್ರಕರಣ 68 ರಡಿಯಲ್ಲಿ ಸಂಘಕ್ಕೆ ನಿರ್ದೇಶನ ನೀಡಿ ಹಣ ದುರುಪಯೋಗ ಮಾಡಿರುವ

		ಅಧ್ಯಕ್ಷರು, ಕಾರ್ಯದರ್ಶಿ, ಆಡಳಿತ ಮಂಡಳಿ ಸದಸ್ಯರ ವಿರುದ್ಧ ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆ ದಾಖಲಿಸಲು ಹಾಗೂ ಹಣ ವಸೂಲಾತಿಗೆ ಕಾನೂನು ಕ್ರಮ ಜರುಗಿಸಲು ನಿರ್ದೇಶನ ನೀಡಲಾಗಿದೆ. ಇವರುಗಳ ವಿರುದ್ಧ ವಿಜಯಪುರ ಗಾಂಧಿಚೌಕ ಪೋಲಿಸ್ ಠಾಣೆಯಲ್ಲಿ ಪ್ರಥಮ ಮಾಹಿತಿ ವರದಿ(FIR) ಸಲ್ಲಿಕೆಯಾಗಿ, ಕ್ರಿಮಿನಲ್ ಮೊಕದ್ದಮೆ ದಾಖಲಾಗಿದ್ದು, ಪ್ರಸ್ತುತ ಈ ಪ್ರಕರಣವು ಪೋಲಿಸ್ ಠಾಣೆ (ಗಾಂಧಿ ಚೌಕ) ದಲ್ಲಿ ತನಿಖೆ ಹಂತದಲ್ಲಿದೆ. ಆಡಳಿತ ಮಂಡಳಿ ಸದಸ್ಯರ ಸ್ಥಿರಾಸ್ತಿಯನ್ನು ಪ್ರಕರಣ 103 ರಡಿಯಲ್ಲಿ ಜಪ್ತಿ ಪೂರ್ವ ಆದೇಶ ಹೊರಡಿಸಲಾಗಿದೆ. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಪ್ರಕರಣ 69 ರಡಿಯಲ್ಲಿಅಧಿಬಾರ ಪ್ರಕರಣ ವಿಚಾರಣೆ ಹಂತದಲ್ಲಿದ್ದು, ದುರುಪಯೋಗವಾದ ಮೊತ್ತ ವಸೂಲಾತಿ ನಂತರ ಕಾನೂನಿನ ರೀತ್ಯಾ ಠೇವಣಿದಾರರಿಗೆ ಮರು ಪಾವತಿಸಲು ಕ್ರಮ ಕೈಗೊಳ್ಳಲಾಗುವುದು.

ಕಡತ ಸಂಖ್ಯೆ: ಸಿಒ 08 ಸಿಆರ್‌ಸಿ 2021

(ಎಸ್. ಟಿ. ಸೋಮಶೇಖರ್)
ಸಹಕಾರ ಸಚಿವರು.

ಕರ್ನಾಟಕ ವಿಧಾನ ಸಭೆ

ಮಾನ್ಯ ವಿಧಾನ ಸಭೆಯ ಸದಸ್ಯರು : ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನಬಾಗೇವಾಡಿ)

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1091

ಉತ್ತರಿಸಬೇಕಾದ ದಿನಾಂಕ : 05.02.2021

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಈಶ್ವರ ಕೋ-ಆಪರೇಟಿವ್ ಕ್ರೆಡಿಟ್ ಸೊಸೈಟಿ ನಿ., ವಿಜಯಪುರ ಇದರಲ್ಲಿ ಎಷ್ಟು ಜನ ಗ್ರಾಹಕರು ಮುದ್ದತ್ತು ಠೇವಣಿ ಹಣ ಇಟ್ಟಿರುತ್ತಾರೆ;	ಈಶ್ವರ ಕ್ರೆಡಿಟ್ ಕೋ-ಆಪ್ ಸೊಸೈಟಿ ಲಿ., ವಿಜಯಪುರ ಇಲ್ಲಿ ದಿನಾಂಕ:31-03-2020ರ ಅಂತ್ಯಕ್ಕೆ 4212 ಖಾತೆದಾರರು ರೂ.22,70,59,581/- ಮೊತ್ತದ ಮುದ್ದತಿ ಠೇವಣಿ ಹಣ ಇಟ್ಟಿರುತ್ತಾರೆ.
ಆ)	ಇವರಲ್ಲಿ ಎಷ್ಟು ಜನ ಗ್ರಾಹಕರ ಮುದ್ದತ್ತು ಠೇವಣಿ ಅವಧಿ ಮುಕ್ತಾಯವಾಗಿರುತ್ತದೆ;	4212 ಠೇವಣಿದಾರರ ಮುದ್ದತು ಠೇವಣಿ ಅವಧಿ ಮುಕ್ತಾಯಗೊಂಡಿರುತ್ತದೆ.
ಇ)	ಮುದ್ದತ್ತು ಠೇವಣಿ ಅವಧಿ ಮುಕ್ತಾಯವಾಗಿರುವ ಗ್ರಾಹಕರಿಗೆ ಸೊಸೈಟಿಯಿಂದ ಠೇವಣಿ ಹಣ ಮರುಪಾವತಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು.
ಈ)	ಮುದ್ದತ್ತು ಮೀರಿದ ಠೇವಣಿ ಹಣ ಮರುಪಾವತಿಸದೇ ಇರುವುದಕ್ಕೆ ಕಾರಣಗಳೇನು;	ಸಂಘವು ಸಂಗ್ರಹಿಸಿದ ಠೇವಣಿ ಹಣವು ದುರುಪಯೋಗವಾಗಿದ್ದು, ಹಣ ವಸೂಲಾತಿಯಾಗದಿರುವ ಕಾರಣ ಮುದ್ದತು ಮೀರಿದ ಠೇವಣಿ ಹಣವನ್ನು ಮರುಪಾವತಿಸಲು ಸಾಧ್ಯವಾಗಿರುವುದಿಲ್ಲ.
ಉ)	ಗ್ರಾಹಕರ ಹಿತದೃಷ್ಟಿಯಿಂದ ಸರ್ಕಾರ ಮುದ್ದತ್ತು ಮೀರಿದ ಠೇವಣಿ ಹಣವನ್ನು ಠೇವಣಿದಾರರಿಗೆ ಮರುಪಾವತಿಸಲು ಕೈಕೊಳ್ಳುವ ಕ್ರಮಗಳೇನು?	ಸಂಘದಲ್ಲಿ ಹಣ ದುರುಪಯೋಗವಾಗಿರುವ ಆರೋಪಕ್ಕೆ ಸಂಬಂಧಪಟ್ಟಂತೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಪ್ರಕರಣ 64 ರಡಿಯಲ್ಲಿ ವಿಚಾರಣೆ ನಡೆಸಲಾಗಿದ್ದು, ವಿಚಾರಣೆಯಲ್ಲಿ ಹಣ ದುರುಪಯೋಗವಾಗಿರುವುದು ಸಾಬೀತಾಗಿದೆ. ಸಂಘದ 2017-18 ಸಾಲಿನ ಲೆಕ್ಕ ಪರಿಶೋಧನೆಯಲ್ಲಿಯೂ ಹಣದುರುಪಯೋಗ ಕಂಡುಬಂದಿರುತ್ತದೆ. ಸಂಘದ ಆಡಳಿತ ಮಂಡಳಿಯ ಸದಸ್ಯರ ವಿರುದ್ಧ ಪ್ರಕರಣ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 29-ಸಿ ರಡಿ ಕ್ರಮಕೈಗೊಂಡು, ಎಲ್ಲಾ ಆಡಳಿತ ಮಂಡಳಿ ಸದಸ್ಯರನ್ನು ಅನರ್ಹಗೊಳಿಸಲಾಗಿದ್ದು, ಸಂಘಕ್ಕೆ ವಿಶೇಷಾಧಿಕಾರಿ ನೇಮಿಸಲಾಗಿದೆ. ಕರ್ನಾಟಕ ಸಹಕಾರ
		ಸಂಘಗಳ ಕಾಯ್ದೆ ಪ್ರಕರಣ 68 ರಡಿಯಲ್ಲಿ ಸಂಘಕ್ಕೆ ನಿರ್ದೇಶನ ನೀಡಿ ಹಣ ದುರುಪಯೋಗ ಮಾಡಿರುವ

		ಅಧ್ಯಕ್ಷರು, ಕಾರ್ಯದರ್ಶಿ, ಆಡಳಿತ ಮಂಡಳಿ ಸದಸ್ಯರ ವಿರುದ್ಧ ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆ ದಾಖಲಿಸಲು ಹಾಗೂ ಹಣ ವಸೂಲಾತಿಗೆ ಕಾನೂನು ಕ್ರಮ ಜರುಗಿಸಲು ನಿರ್ದೇಶನ ನೀಡಲಾಗಿದೆ. ಇವರುಗಳ ವಿರುದ್ಧ ವಿಜಯಪುರ ಗಾಂಧಿಚೌಕ ಪೋಲಿಸ್ ಠಾಣೆಯಲ್ಲಿ ಪ್ರಥಮ ಮಾಹಿತಿ ವರದಿ(FIR) ಸಲ್ಲಿಕೆಯಾಗಿ, ಕ್ರಿಮಿನಲ್ ಮೊಕದ್ದಮೆ ದಾಖಲಾಗಿದ್ದು, ಪ್ರಸ್ತುತ ಈ ಪ್ರಕರಣವು ಪೋಲಿಸ್ ಠಾಣೆ (ಗಾಂಧಿ ಚೌಕ) ದಲ್ಲಿ ತನಿಖೆ ಹಂತದಲ್ಲಿದೆ. ಆಡಳಿತ ಮಂಡಳಿ ಸದಸ್ಯರ ಸ್ಥಿರಾಸ್ತಿಯನ್ನು ಪ್ರಕರಣ 103 ರಡಿಯಲ್ಲಿ ಜಪ್ತಿ ಪೂರ್ವ ಆದೇಶ ಹೊರಡಿಸಲಾಗಿದೆ. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಪ್ರಕರಣ 69 ರಡಿಯಲ್ಲಿಅಧಿಬಾರ ಪ್ರಕರಣ ವಿಚಾರಣೆ ಹಂತದಲ್ಲಿದ್ದು, ದುರುಪಯೋಗವಾದ ಮೊತ್ತ ವಸೂಲಾತಿ ನಂತರ ಕಾನೂನಿನ ರೀತ್ಯಾ ಠೇವಣಿದಾರರಿಗೆ ಮರು ಪಾವತಿಸಲು ಕ್ರಮ ಕೈಗೊಳ್ಳಲಾಗುವುದು.

ಕಡತ ಸಂಖ್ಯೆ: ಸಿಒ 08 ಸಿಆರ್‌ಸಿ 2021

(ಎಸ್. ಟಿ. ಸೋಮಶೇಖರ್)
ಸಹಕಾರ ಸಚಿವರು.

ಕರ್ನಾಟಕ ವಿಧಾನ ಸಭೆ

ಮಾನ್ಯ ವಿಧಾನ ಸಭೆಯ ಸದಸ್ಯರು	: ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನಬಾಗೇವಾಡಿ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 1091
ಉತ್ತರಿಸಬೇಕಾದ ದಿನಾಂಕ	: 05.02.2021

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಈಶ್ವರ ಕೋ-ಆಪರೇಟಿವ್ ಕ್ರೆಡಿಟ್ ಸೊಸೈಟಿ ನಿ., ವಿಜಯಪುರ ಇದರಲ್ಲಿ ಎಷ್ಟು ಜನ ಗ್ರಾಹಕರು ಮುದ್ದತ್ತು ಠೇವಣಿ ಹಣ ಇಟ್ಟಿರುತ್ತಾರೆ;	ಈಶ್ವರ ಕ್ರೆಡಿಟ್ ಕೋ-ಆಪ್ ಸೊಸೈಟಿ ಲಿ., ವಿಜಯಪುರ ಇಲ್ಲಿ ದಿನಾಂಕ:31-03-2020ರ ಅಂತ್ಯಕ್ಕೆ 4212 ಖಾತೆದಾರರು ರೂ.22,70,59,581/- ಮೊತ್ತದ ಮುದ್ದತಿ ಠೇವಣಿ ಹಣ ಇಟ್ಟಿರುತ್ತಾರೆ.
ಆ)	ಇವರಲ್ಲಿ ಎಷ್ಟು ಜನ ಗ್ರಾಹಕರ ಮುದ್ದತ್ತು ಠೇವಣಿ ಅವಧಿ ಮುಕ್ತಾಯವಾಗಿರುತ್ತದೆ;	4212 ಠೇವಣಿದಾರರ ಮುದ್ದತು ಠೇವಣಿ ಅವಧಿ ಮುಕ್ತಾಯಗೊಂಡಿರುತ್ತದೆ.
ಇ)	ಮುದ್ದತ್ತು ಠೇವಣಿ ಅವಧಿ ಮುಕ್ತಾಯವಾಗಿರುವ ಗ್ರಾಹಕರಿಗೆ ಸೊಸೈಟಿಯಿಂದ ಠೇವಣಿ ಹಣ ಮರುಪಾವತಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು.
ಈ)	ಮುದ್ದತ್ತು ಮೀರಿದ ಠೇವಣಿ ಹಣ ಮರುಪಾವತಿಸದೇ ಇರುವುದಕ್ಕೆ ಕಾರಣಗಳೇನು;	ಸಂಘವು ಸಂಗ್ರಹಿಸಿದ ಠೇವಣಿ ಹಣವು ದುರುಪಯೋಗವಾಗಿದ್ದು, ಹಣ ವಸೂಲಾತಿಯಾಗದಿರುವ ಕಾರಣ ಮುದ್ದತು ಮೀರಿದ ಠೇವಣಿ ಹಣವನ್ನು ಮರುಪಾವತಿಸಲು ಸಾಧ್ಯವಾಗಿರುವುದಿಲ್ಲ.
ಉ)	ಗ್ರಾಹಕರ ಹಿತದೃಷ್ಟಿಯಿಂದ ಸರ್ಕಾರ ಮುದ್ದತ್ತು ಮೀರಿದ ಠೇವಣಿ ಹಣವನ್ನು ಠೇವಣಿದಾರರಿಗೆ ಮರುಪಾವತಿಸಲು ಕೈಕೊಳ್ಳುವ ಕ್ರಮಗಳೇನು?	ಸಂಘದಲ್ಲಿ ಹಣ ದುರುಪಯೋಗವಾಗಿರುವ ಆರೋಪಕ್ಕೆ ಸಂಬಂಧಪಟ್ಟಂತೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಪ್ರಕರಣ 64 ರಡಿಯಲ್ಲಿ ವಿಚಾರಣೆ ನಡೆಸಲಾಗಿದ್ದು, ವಿಚಾರಣೆಯಲ್ಲಿ ಹಣ ದುರುಪಯೋಗವಾಗಿರುವುದು ಸಾಬೀತಾಗಿದೆ. ಸಂಘದ 2017-18 ಸಾಲಿನ ಲೆಕ್ಕ ಪರಿಶೋಧನೆಯಲ್ಲಿಯೂ ಹಣದುರುಪಯೋಗ ಕಂಡುಬಂದಿರುತ್ತದೆ. ಸಂಘದ ಆಡಳಿತ ಮಂಡಳಿಯ ಸದಸ್ಯರ ವಿರುದ್ಧ ಪ್ರಕರಣ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 29-ಸಿ ರಡಿ ಕ್ರಮಕೈಗೊಂಡು, ಎಲ್ಲಾ ಆಡಳಿತ ಮಂಡಳಿ ಸದಸ್ಯರನ್ನು ಅನರ್ಹಗೊಳಿಸಲಾಗಿದ್ದು, ಸಂಘಕ್ಕೆ ವಿಶೇಷಾಧಿಕಾರಿ ನೇಮಿಸಲಾಗಿದೆ. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಪ್ರಕರಣ 68 ರಡಿಯಲ್ಲಿ ಸಂಘಕ್ಕೆ ನಿರ್ದೇಶನ ನೀಡಿ ಹಣ ದುರುಪಯೋಗ ಮಾಡಿರುವ

		ಅಧ್ಯಕ್ಷರು, ಕಾರ್ಯದರ್ಶಿ, ಆಡಳಿತ ಮಂಡಳಿ ಸದಸ್ಯರ ವಿರುದ್ಧ ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆ ದಾಖಲಿಸಲು ಹಾಗೂ ಹಣ ವಸೂಲಾತಿಗೆ ಕಾನೂನು ಕ್ರಮ ಜರುಗಿಸಲು ನಿರ್ದೇಶನ ನೀಡಲಾಗಿದೆ. ಇವರುಗಳ ವಿರುದ್ಧ ವಿಜಯಪುರ ಗಾಂಧಿಚೌಕ ಪೋಲಿಸ್ ಠಾಣೆಯಲ್ಲಿ ಪ್ರಥಮ ಮಾಹಿತಿ ವರದಿ(FIR) ಸಲ್ಲಿಕೆಯಾಗಿ, ಕ್ರಿಮಿನಲ್ ಮೊಕದ್ದಮೆ ದಾಖಲಾಗಿದ್ದು, ಪ್ರಸ್ತುತ ಈ ಪ್ರಕರಣವು ಪೋಲಿಸ್ ಠಾಣೆ (ಗಾಂಧಿ ಚೌಕ) ದಲ್ಲಿ ತನಿಖೆ ಹಂತದಲ್ಲಿದೆ. ಆಡಳಿತ ಮಂಡಳಿ ಸದಸ್ಯರ ಸ್ಥಿರಾಸ್ತಿಯನ್ನು ಪ್ರಕರಣ 103 ರಡಿಯಲ್ಲಿ ಜಪ್ತಿ ಪೂರ್ವ ಆದೇಶ ಹೊರಡಿಸಲಾಗಿದೆ. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಪ್ರಕರಣ 69 ರಡಿಯಲ್ಲಿಅಧಿಬಾರ ಪ್ರಕರಣ ವಿಚಾರಣೆ ಹಂತದಲ್ಲಿದ್ದು, ದುರುಪಯೋಗವಾದ ಮೊತ್ತ ವಸೂಲಾತಿ ನಂತರ ಕಾನೂನಿನ ರೀತ್ಯಾ ಠೇವಣಿದಾರರಿಗೆ ಮರು ಪಾವತಿಸಲು ಕ್ರಮ ಕೈಗೊಳ್ಳಲಾಗುವುದು.

ಕಡತ ಸಂಖ್ಯೆ: ಸಿಒ 08 ಸಿಆರ್‌ಸಿ 2021

(ಎಸ್. ಟಿ. ಸೋಮಶೇಖರ್)
ಸಹಕಾರ ಸಚಿವರು.

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಐ 33 ಐಎಪಿ(ಇ) 2021

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ 04.02.2021.

159
U/S
5/2/21

ಇವರಿಂದ:
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ,
ವಿಕಾಸಸೌಧ, ಬೆಂಗಳೂರು.

ಇವರಿಗೆ:
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ ಸಚಿವಾಲಯ,
ವಿಧಾನಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ತುಕಾರಾಮ್ ಈ. (ಸಂಡೂರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1096ಕ್ಕೆ ಉತ್ತರಿಸುವ ಬಗ್ಗೆ.

---*---

ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ತುಕಾರಾಮ್ ಈ. (ಸಂಡೂರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1096ಕ್ಕೆ ಉತ್ತರದ 25 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಅಗತ್ಯ ಕ್ರಮಕ್ಕಾಗಿ ತಮಗೆ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

ಎನ್. ಕುಮಾರ್

(ಎನ್. ಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ (ಕೈ.ಅ),
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

04/02/2021

ಕರ್ನಾಟಕ ವಿಧಾನಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1096
2. ಸದಸ್ಯರ ಹೆಸರು : ಶ್ರೀ ತುಕಾರಾಮ್ ಈ. (ಸಂಡೂರ್)
3. ಉತ್ತರಿಸುವ ದಿನಾಂಕ : 05.02.2021
4. ಉತ್ತರಿಸುವ ಸಚಿವರು : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಕುಡಿತಿನಿ ಪಟ್ಟಣ ಪಂಚಾಯ್ತಿ ವ್ಯಾಪ್ತಿಯಲ್ಲಿ ಕಾರ್ಖಾನೆಗಳನ್ನು ಪ್ರಾರಂಭಿಸಲು ಕೆ.ಐ.ಎ.ಡಿ.ಬಿ ವತಿಯಿಂದ ಖಾಸಗಿ ಸಂಸ್ಥೆಗಳಾದ ಆರ್ಸೆಲ್ಲಾರ್ ಮಿತ್ತಲ್, ಬ್ರಹ್ಮಿಣಿ ಸ್ಟೀಲ್ (ಉತ್ತಮ್ ಫಾಲ್ವಾ) ಇವರುಗಳಿಗೆ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಬಂದಿದೆ.

ಬಳ್ಳಾರಿ ಜಿಲ್ಲೆ, ಸಂಡೂರು ತಾಲ್ಲೂಕಿನಲ್ಲಿ ಮೆ॥ ಆರ್ಸೆಲ್ಲಾರ್ ಮಿತ್ತಲ್ ಇಂಡಿಯಾ ಲಿ. ಮತ್ತು ಮೆ॥ ಉತ್ತಮ್ ಗಾಲ್ವಾ ಫೆರೋಸ್ ಲಿ., ಕಂಪನಿಗಳಿಗೆ ಹಂಚಿಕೆ ಮಾಡಿರುವ ಜಮೀನಿನ ವಿವರಗಳು ಈ ಕೆಳಕಂಡಂತಿದೆ:-

<table>
<tr><th>ಕಂಪನಿಯ ಹೆಸರು</th><th>ವಿಸ್ತೀರ್ಣ (ಎಕರೆಗಳಲ್ಲಿ)</th></tr>
<tr><td>ಮೆ: ಆರ್ಸೆಲ್ಲಾರ್ ಮಿತ್ತಲ್ ಇಂಡಿಯಾ ಲಿ.</td><td>2659.75</td></tr>
<tr><td>ಮೆ: ಉತ್ತಮ್ ಗಾಲ್ವಾ ಫೆರೋಸ್ ಲಿ.</td><td>4877.81</td></tr>
</table>
</td></tr>
<tr><td>(ಆ)</td><td>ಹಾಗಿದ್ದಲ್ಲಿ ಸದರಿ ಕಂಪನಿಗಳು ಯಾವಾಗ ಕಾರ್ಖಾನೆಗಳನ್ನು ಪ್ರಾರಂಭಿಸಲಿವೆ?</td><td>ಮೆ: ಆರ್ಸೆಲ್ಲಾರ್ ಮಿತ್ತಲ್ ಇಂಡಿಯಾ ಲಿ., ಇವರು ದಿನಾಂಕ: 14.08.2018ರಂದು ಗುತ್ತಿಗೆ ಕರಾರು ಪತ್ರ ನೆರವೇರಿಸಿದ್ದು, ಸದರಿ ಕಂಪನಿಯು ಯೋಜನೆ ಅನುಷ್ಠಾನಗೊಳಿಸಲು ಯಾವುದೇ ಕ್ರಮ ಕೈಗೊಂಡಿರದ ಕಾರಣ ದಿನಾಂಕ: 27.11.2020ರಂದು ತಿಳುವಳಿಕೆ ನೋಟಿಸ್ ಜಾರಿ ಮಾಡಲಾಗಿದೆ.</td></tr>
</table>

		ಮೆ: ಉತ್ತಮ್ ಗಾಲ್ವಾ ಫೆರೋಸ್ ಲಿ., ಇವರು ದಿನಾಂಕ: 02.03.2017ರಂದು ಗುತ್ತಿಗೆ ಕರಾರು ಪತ್ರವನ್ನು ನೆರವೇರಿಸಿದ್ದು, ಸದರಿ ಕಂಪನಿಯು ಯೋಜನೆ ಅನುಷ್ಠಾನಗೊಳಿಸಲು ಯಾವುದೇ ಕ್ರಮ ಕೈಗೊಂಡಿರದ ಕಾರಣ ದಿನಾಂಕ: 27.11.2020ರಂದು ತಿಳುವಳಿಕೆ ನೋಟಿಸ್ ಜಾರಿ ಮಾಡಲಾಗಿದೆ.

(ಜಗದೀಶ ಶೆಟ್ಟರ)

ಸಂಖ್ಯೆ: ಸಿಐ 33 ಐಎಪಿ (ಇ) 2021

ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ:ಆನಾಸ 47 ಡಿಆರ್‌ಎ 2021 (ಇ-ಆಫೀಸ್)

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ, ನೆಲಮಹಡಿ
ಬೆಂಗಳೂರು ದಿನಾಂಕ:04.02.2021.

ಇವರಿಂದ,

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ
ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆ

ಇವರಿಗೆ,

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ
ವಿಧಾನಸೌಧ.

130
4/5
05/02/2021

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ರೇವಣ್ಣ ಹೆಚ್.ಡಿ. (ಹೊಳೇನರಸೀಪುರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1124ಗೆ ಉತ್ತರ ನೀಡುವ ಬಗ್ಗೆ.

ಉಲ್ಲೇಖ: ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ ಇವರ ಪತ್ರ ಸಂಖ್ಯೆ: ಪ್ರಶಾವಿಸ/15ನೇವಿಸ/9ಅ/ಪ್ರ.ಸಂ 1124/2021, ದಿನಾಂಕ:28.01.2021

******

ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ರೇವಣ್ಣ ಹೆಚ್.ಡಿ. (ಹೊಳೇನರಸೀಪುರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1124ಗೆ ಉತ್ತರವನ್ನು ಸಿದ್ಧಪಡಿಸಿ, ಅದರ 25 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಕ್ರಮಕ್ಕಾಗಿ ತಮಗೆ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ವಿಶ್ವಾಸಿ,

(ವಿ.ವೆಂಕಟೇಶ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಆಹಾರ, ನಾಗರಿಕ ಸರಬರಾಜು, ಗ್ರಾಹಕರ ವ್ಯವಹಾರಗಳ
ಮತ್ತು ಕಾನೂನು ಮಾಪನಶಾಸ್ತ್ರ ಇಲಾಖೆ.

ಪ್ರತಿ:

1. ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆಯ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
3. ಸರ್ಕಾರದ ಉಪ ಕಾರ್ಯದರ್ಶಿ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆಯ ಆಪ್ತ ಸಹಾಯಕ, ವಿಕಾಸಸೌಧ, ಬೆಂಗಳೂರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1124
ವಿಧಾನ ಸಭೆ ಸದಸ್ಯರ ಹೆಸರು	:	ಶ್ರೀ ರೇವಣ್ಣ ಹೆಚ್.ಡಿ. (ಹೊಳೇನರಸೀಪುರ)
ಉತ್ತರಿಸಬೇಕಾದ ದಿನಾಂಕ	:	05.02.2021
ಉತ್ತರಿಸುವ ಸಚಿವರು	:	ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ	ರಾಜ್ಯದಲ್ಲಿ ಆಹಾರ ಪಡಿತರ ಧಾನ್ಯಗಳನ್ನು POS ಮೂಲಕ ವಿತರಣೆ ಮಾಡುತ್ತಿರುವುದು ನಿಜವೇ; (ಸಂಪೂರ್ಣ ಮಾಹಿತಿ ನೀಡುವುದು)	ರಾಜ್ಯದಲ್ಲಿ ಒಟ್ಟು 19,972 ನ್ಯಾಯಬೆಲೆ ಅಂಗಡಿಗಳಿದ್ದು, ಅವರಲ್ಲಿ 19,870 ನ್ಯಾಯಬೆಲೆ ಅಂಗಡಿಗಳಲ್ಲಿ POS (ಪಾಯಿಂಟ್ ಆಫ್ ಸೇಲ್) ಮೂಲಕ ಪಡಿತರವನ್ನು ವಿತರಣೆ ಮಾಡಲಾಗುತ್ತಿದೆ. ಹಾಗೂ 102 ನ್ಯಾಯಬೆಲೆ ಅಂಗಡಿಗಳಲ್ಲಿ Non-POS ಮುಖಾಂತರ ಪಡಿತರವನ್ನು ವಿತರಣೆ ಮಾಡಲಾಗುತ್ತಿದ್ದು, ಸದರಿ 102 Non-POS ನ್ಯಾಯಬೆಲೆ ಅಂಗಡಿಗಳನ್ನು POS ನ್ಯಾಯಬೆಲೆ ಅಂಗಡಿಗಳನ್ನಾಗಿ ಪರಿವರ್ತಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
ಆ	ಪ್ರಸ್ತುತ ಸರ್ವರ್ ಸಮಸ್ಯೆಯಿಂದಾಗಿ ರೈತರು, ಕೂಲಿ ಕಾರ್ಮಿಕರು ವಾರಗಟ್ಟಲೆ ನ್ಯಾಯಬೆಲೆ ಅಂಗಡಿ ಹತ್ತಿರ ನಿಂತು ಪಡಿತರ ಧಾನ್ಯಗಳನ್ನು ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಮಾಹಿತಿ ನೀಡುವುದು)	ಬಂದಿದೆ.
ಇ	ಹಾಗಿದ್ದಲ್ಲಿ, ಸರ್ವರ್ ಸಮಸ್ಯೆ ಬಗೆಹರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಸರ್ವರ್ ಸಮಸ್ಯೆ ಬಗೆಹರಿಯದಿದ್ದಲ್ಲಿ ಈ ಹಿಂದೆ ಇದ್ದಂತೆ ರಸೀತಿ ಹಾಕಿ ಅಥವಾ ಸಹಿ ಪಡೆದು ಪಡಿತರ ಧಾನ್ಯಗಳನ್ನು ನಿಗದಿತ ಅವಧಿಯಲ್ಲಿ ಸಮರ್ಪಕವಾಗಿ ವಿತರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ? (ಸಂಪೂರ್ಣ ಮಾಹಿತಿ ನೀಡುವುದು)	ಆಹಾರ ಇಲಾಖೆಯು ಸರ್ವರ್‌ಗಳನ್ನು ಎನ್.ಐ.ಸಿ ಸಂಸ್ಥೆಯಲ್ಲಿ ನಿರ್ವಹಿಸಲಾಗುತ್ತಿದ್ದು, ಆಹಾರ ಇಲಾಖೆಯ ಸರ್ವರ್ ಹಾಗೂ ಪಡಿತರ ಚೀಟಿಯ ದತ್ತಾಂಶವನ್ನು ರಾಜ್ಯ ದತ್ತಾಂಶ (KSDC) ಕೇಂದ್ರಕ್ಕೆ ವರ್ಗಾಯಿಸಲಾಗುತ್ತಿದೆ. ಆಹಾರ ಇಲಾಖೆಯು ಹೊಂದಿರುವ ಸರ್ವರ್‌ಗಳ ಸಂಖ್ಯೆ ಹಾಗೂ ಸರ್ವರ್‌ಗಳ ಕ್ಷಮತೆಯನ್ನು ಹೆಚ್ಚಿಸಲು ಕ್ರಮವಹಿಸಲಾಗಿದೆ. ರಾಷ್ಟ್ರೀಯ ಆಹಾರ ಭದ್ರತೆ ಕಾಯ್ದೆಯನ್ವಯ ಪಡಿತರ ಚೀಟಿಯ ಫಲಾನುಭವಿಗಳಿಗೆ ಬಯೋಮೆಟ್ರಿಕ್ ಮುಖಾಂತರ ಆಹಾರಧಾನ್ಯ ವಿತರಿಸುವುದು ಕಡ್ಡಾಯವಾಗಿರುತ್ತದೆ.

ಆನಾಸ 47 ಡಿಆರ್‌ಎ 2021 (ಇ-ಆಫೀಸ್)

(ಉಮೇಶ್ ವಿ. ಕತ್ತಿ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಹಾಗೂ
ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಐ 37 ಐಎಪಿ(ಇ) 2021

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ 04.02.2021.

ಇವರಿಂದ:
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ,
ವಿಕಾಸಸೌಧ, ಬೆಂಗಳೂರು.

104
4/5
5/2/21

ಇವರಿಗೆ:
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ ಸಚಿವಾಲಯ,
ವಿಧಾನಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ನಿಸರ್ಗ ನಾರಾಯಣಸ್ವಾಮಿ ಎಲ್.ಎನ್. (ದೇವನಹಳ್ಳಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1128ಕ್ಕೆ ಉತ್ತರಿಸುವ ಬಗ್ಗೆ.

---*---

ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ನಿಸರ್ಗ ನಾರಾಯಣಸ್ವಾಮಿ ಎಲ್.ಎನ್. (ದೇವನಹಳ್ಳಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1128ಕ್ಕೆ ಉತ್ತರದ 25 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಅಗತ್ಯ ಕ್ರಮಕ್ಕಾಗಿ ತಮಗೆ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

ಎನ್. ಕುಮಾರ್

(ಎನ್. ಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ (ಕೈ.ಅ),
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

04/02/2021

ಕರ್ನಾಟಕ ವಿಧಾನಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1128
2. ಸದಸ್ಯರ ಹೆಸರು : ಶ್ರೀ ನಿಸರ್ಗ ನಾರಾಯಣಸ್ವಾಮಿ ಎಲ್.ಎನ್. (ದೇವನಹಳ್ಳಿ)
3. ಉತ್ತರಿಸುವ ದಿನಾಂಕ : 05.02.2021
4. ಉತ್ತರಿಸುವ ಸಚಿವರು : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಕಳೆದ 03 ವರ್ಷಗಳಲ್ಲಿ ರಾಜ್ಯದಲ್ಲಿ ಕೆ.ಐ.ಎ.ಡಿ.ಬಿ. ವತಿಯಿಂದ ಕೈಗಾರಿಕೆ ಸ್ಥಾಪನೆಗಾಗಿ ಸ್ವಾಧೀನಪಡಿಸಿಕೊಂಡ ಭೂಮಿ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)</td><td>ಕಳೆದ 03 ವರ್ಷಗಳಲ್ಲಿ ರಾಜ್ಯದಲ್ಲಿ ಕೆ.ಐ.ಎ.ಡಿ.ಬಿ. ವತಿಯಿಂದ ಭೂಸ್ವಾಧೀನಪಡಿಸಿದ ವಿಸ್ತೀರ್ಣದ ವಿವರ ಈ ಕೆಳಕಂಡಂತಿದೆ :-

<table>
<tr><td>ಕೈಗಾರಿಕಾ ಪ್ರದೇಶ</td><td>5047-20 ಎಕರೆ</td></tr>
<tr><td>ಏಕಘಟಕ ಸಂಕೀರ್ಣ</td><td>3594-11 ಎಕರೆ</td></tr>
<tr><td>ಒಟ್ಟು</td><td>8641-31 ಎಕರೆ</td></tr>
</table>

ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1ರಲ್ಲಿ ಒದಗಿಸಿದೆ.</td></tr>
<tr><td>(ಆ)</td><td>ಸ್ವಾಧೀನ ಪಡಿಸಿಕೊಂಡ ಜಮೀನಿಗೆ ಪೂರ್ಣ ಪರಿಹಾರ ಹಣ ರೈತರಿಗೆ ನೀಡಲಾಗಿದೆಯೇ; ಇಲ್ಲವಾದಲ್ಲಿ, ಹಣ ನೀಡದಿರಲು ಇರುವ ತೊಡಕುಗಳೇನು; (ಜಿಲ್ಲಾವಾರು ಫಲಾನುಭವಿವಾರು ಪೂರ್ಣ ಮಾಹಿತಿ ನೀಡುವುದು)</td><td>ಸ್ವಾಧೀನಪಡಿಸಿಕೊಂಡಿರುವ ಜಮೀನುಗಳ ಪೈಕಿ ಭೂಪರಿಹಾರ ದರ ನಿಗದಿಪಡಿಸಲಾಗಿರುವ ಜಮೀನಿನ ಅಧಿಸೂಚಿತ ಖಾತೆದಾರರು ಮತ್ತು ಹಿತಾಸಕ್ತಿದಾರರಿಗೆ ನಿಯಮಾನುಸಾರ ಭೂಪರಿಹಾರ ಪಾವತಿಸುವ ಕಾರ್ಯ ಪ್ರಗತಿಯಲ್ಲಿದೆ.

ಜಮೀನಿನ ಹಕ್ಕಿನ ಕುರಿತಂತೆ ವಿವಾದಗಳಿರುವ ಪ್ರಕರಣಗಳಲ್ಲಿ ಅವಾರ್ಡ್ ರಚಿಸಿ, ಪರಿಹಾರ ಧನವನ್ನು ನ್ಯಾಯಾಲಯದಲ್ಲಿ ಠೇವಣಿ ಇಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-2ರಲ್ಲಿ ಒದಗಿಸಿದೆ.</td></tr>
</table>

<table>
<tr>
<td>(ಇ)</td>
<td>ಭೂಸ್ವಾಧೀನಕ್ಕೆ ಅಧಿಸೂಚನೆ ಹೊರಡಿಸಿದ ನಂತರ ರದ್ದು ಕೋರಿ ನ್ಯಾಯಾಲಯಕ್ಕೆ ಹೋಗಿರುವ ಪ್ರಕರಣಗಳೆಷ್ಟು: (ಜಿಲ್ಲಾವಾರು ಫಲಾನುಭವಿಗಳ ವಿವರ ನೀಡುವುದು)</td>
<td>ಈ ಭೂಸ್ವಾಧೀನ ಪ್ರಕ್ರಿಯೆಗೆ ಸಂಬಂಧಿಸಿದಂತೆ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ದಾಖಲಾಗಿರುವ ನ್ಯಾಯಾಲಯ ಪ್ರಕರಣಗಳ ಜಿಲ್ಲಾವಾರು ವಿವರ ಕೆಳಕಂಡಂತಿದೆ :-

<table>
<tr><th>ಕ್ರ. ಸಂ.</th><th>ಜಿಲ್ಲೆ</th><th>ಒಟ್ಟು ಪ್ರಕರಣಗಳ ಸಂಖ್ಯೆ</th></tr>
<tr><td>1.</td><td>ಬೆಂಗಳೂರು ಗ್ರಾಮಾಂತರ</td><td>10</td></tr>
<tr><td>2.</td><td>ರಾಮನಗರ</td><td>7</td></tr>
<tr><td>3.</td><td>ಕೋಲಾರ</td><td>12</td></tr>
<tr><td>4.</td><td>ಚಿಕ್ಕಬಳ್ಳಾಪುರ</td><td>2</td></tr>
<tr><td>5.</td><td>ತುಮಕೂರು</td><td>2</td></tr>
<tr><td>6.</td><td>ಬೆಳಗಾವಿ</td><td>1</td></tr>
<tr><td>7.</td><td>ಮೈಸೂರು</td><td>9</td></tr>
<tr><td>8.</td><td>ಮಂಗಳೂರು</td><td>5</td></tr>
<tr><td>9.</td><td>ಕಲಬುರ್ಗಿ</td><td>3</td></tr>
<tr><td colspan="2">ಒಟ್ಟು</td><td>51</td></tr>
</table></td>
</tr>
<tr>
<td>(ಈ)</td>
<td>ಸ್ವಾಧೀನ ಪಡಿಸಿಕೊಂಡ ನಂತರ ಅನ್ಯ ಕಾರಣಗಳಗಾಗಿ ಸ್ವಾಧೀನ ಪ್ರಕ್ರಿಯೆಗಳಿಂದ ಕೈಬಿಟ್ಟ ಪ್ರಕರಣಗಳೆಷ್ಟು? (ಜಿಲ್ಲಾವಾರು ಪೂರ್ಣ ಮಾಹಿತಿ ನೀಡುವುದು)</td>
<td>ಕಳೆದ 3 ವರ್ಷಗಳಲ್ಲಿ ಸ್ವಾಧೀನಪಡಿಸಿಕೊಂಡಿರುವ ಯಾವುದೇ ಜಮೀನನ್ನು ಸ್ವಾಧೀನ ಪ್ರಕ್ರಿಯೆಯಿಂದ ಹೊರತುಪಡಿಸಿರುವುದಿಲ್ಲ.</td>
</tr>
</table>

(ಜಗದೀಶ ಶೆಟ್ಟರ)

ಸಂಖ್ಯೆ: ಸಿಐ 37 ಐಎಪಿ (ಇ) 2021

ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

ಅನುಬಂಧ - 1

ಕಳೆದ 3 ವರ್ಷಗಳ ಅವಧಿಯಲ್ಲಿ ಕೈಗಾರಿಕಾ ಪ್ರದೇಶ ಮತ್ತು ಏಕಘಟಕ ಸಂಕೀರ್ಣಗಳಿಗಾಗಿ ಸ್ವಾಧೀನಪಡಿಸಿಕೊಂಡಿರುವ ಜಮೀನುಗಳ ಜಿಲ್ಲಾವಾರು ವಿವರ.

ಕ್ರ.ಸಂ.	ಜಿಲ್ಲೆ ಹೆಸರು	ಕೈಗಾರಿಕಾ ಪ್ರದೇಶ ಎ-ಗು	ಏಕಘಟಕ ಸಂಕೀರ್ಣ ಎ-ಗು	ಒಟ್ಟು ವಿಸ್ತೀರ್ಣ ಎ-ಗು
1.	ಬೆಂಗಳೂರು ನಗರ	30–38	233–29	264–27
2.	ಬೆಂಗಳೂರು ಗ್ರಾಮಾಂತರ	2090–21	56–05	2146–26
3.	ರಾಮನಗರ	912–12	–	912–12
4.	ಚಿಕ್ಕಬಳ್ಳಾಪುರ	414–25	–	414–25
5.	ಕೋಲಾರ	335–16	–	335–16
6.	ತುಮಕೂರು	155–22	49–30	205–12
7.	ದಾವಣಗೆರೆ	56–27	–	56–27
8.	ಬಳ್ಳಾರಿ	–	213–00	213–00
9.	ಚಿತ್ರದುರ್ಗ	–	41–18	41–18
10.	ಮೈಸೂರು	281–31	50–23	332–14
11.	ಮಂಡ್ಯ	14–35	2–11	17–06
12.	ಚಾಮರಾಜನಗರ	–	–	–
13.	ಹಾಸನ	–	216–39	216–39
14.	ದಕ್ಷಿಣ ಕನ್ನಡ	9–25	962–00	971–25
15.	ಚಿಕ್ಕಮಗಳೂರು	236–38	–	236–38
16.	ಶಿವಮೊಗ್ಗ	–	–	–
17	ಉಡುಪಿ	–	–	–
18	ಕೊಡಗು	–	–	–
19	ಧಾರವಾಡ	4–00	–	4–00
20	ಹಾವೇರಿ	–	–	–
21	ಕೊಪ್ಪಳ	270–01	698–10	968–11
22	ಬೆಳಗಾವಿ	173–28	14–21	188–09
23	ಬಾಗಲಕೋಟೆ	0–09	19–03	19–12
24	ವಿಜಯಪುರ	8–30	–	8–30
25	ಉತ್ತರ ಕನ್ನಡ	–	–	–
26	ಗದಗ	–	–	–
27	ಕಲಬುರಗಿ	1–04	7–04	8–08
28	ಯಾದಗಿರಿ	–	1029–18	1029–18
29	ರಾಯಚೂರು	7–28	–	7–28
30	ಬೀದರ್	–	–	–
	ಒಟ್ಟು	**5047–20**	**3594–11**	**8641–31**

ವಿಶೇಷ ಜಿಲ್ಲಾಧಿಕಾರಿ
Special Deputy Commissioner
Karnataka Industrial Areas Development Board
No. 49, 4th & 5th Floor, 'East Wing'
Bangalore-560001

ಕಳೆದ 3 ವರ್ಷಗಳ ಅವಧಿಯಲ್ಲಿ ಕೈಗಾರಿಕಾ ಪ್ರದೇಶ ಮತ್ತು ಏಕಘಟಕ ಸಂಕೀರ್ಣಗಳಿಗಾಗಿ ಸ್ವಾಧೀನಪಡಿಸಿಕೊಂಡಿರುವ ಜಮೀನುಗಳ ಪೈಕಿ ಪರಿಹಾರ ಪಾವತಿಸಿರುವ ಜಮೀನುಗಳ ಜಿಲ್ಲಾವಾರು ವಿವರ.

ಕ್ರಸಂ.	ಜಿಲ್ಲೆ ಹೆಸರು	ಪರಿಹಾರ ಪಾವತಿಸಿರುವ ಒಟ್ಟು ವಿಸ್ತೀರ್ಣ (ಎ–ಗು)
1.	ಬೆಂಗಳೂರು ನಗರ	211–39
2.	ಬೆಂಗಳೂರು ಗ್ರಾಮಾಂತರ	897–20
3.	ರಾಮನಗರ	–
4.	ಚಿಕ್ಕಬಳ್ಳಾಪುರ	117–07
5.	ಕೋಲಾರ	88–12
6.	ತುಮಕೂರು	72–33
7.	ದಾವಣಗೆರೆ	30–32
8.	ಬಳ್ಳಾರಿ	155–00
9.	ಚಿತ್ರದುರ್ಗ	22–35
10.	ಮೈಸೂರು	170–06
11.	ಮಂಡ್ಯ	5–24
12.	ಚಾಮರಾಜನಗರ	–
13.	ಹಾಸನ	–
14.	ದಕ್ಷಿಣ ಕನ್ನಡ	325–35
15.	ಚಿಕ್ಕಮಗಳೂರು	82–15
16.	ಶಿವಮೊಗ್ಗ	–
17	ಉಡುಪಿ	–
18	ಕೊಡಗು	–
19	ಧಾರವಾಡ	–
20	ಹಾವೇರಿ	
21	ಕೊಪ್ಪಳ	402–15
22	ಬೆಳಗಾವಿ	37–09
23	ಬಾಗಲಕೋಟೆ	19–03
24	ವಿಜಯಪುರ	8–30
25	ಉತ್ತರ ಕನ್ನಡ	–
26	ಗದಗ	–
27	ಕಲಬುರಗಿ	7–04
28	ಯಾದಗಿರಿ	294–21
29	ರಾಯಚೂರು	–
30	ಬೀದರ್	–
	ಒಟ್ಟು	**2949–20**

ವಿಶೇಷ ಜಿಲ್ಲಾಧಿಕಾರಿ

ಕರ್ನಾಟಕ ಸರ್ಕಾರ

ಸಂಖ್ಯೆ:ಆನಾಸ 43 ಡಿಆರ್‌ಎ 2021 (ಇ-ಆಫೀಸ್)

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ, ನೆಲಮಹಡಿ
ಬೆಂಗಳೂರು ದಿನಾಂಕ:04.02.2021.

ಇವರಿಂದ,

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ
ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆ

ಇವರಿಗೆ,

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ
ವಿಧಾನಸೌಧ.

1444
05/02/2021

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀಮತಿ ಸೌಮ್ಯ ರೆಡ್ಡಿ (ಜಯನಗರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1062ಗೆ ಉತ್ತರ ನೀಡುವ ಬಗ್ಗೆ.

ಉಲ್ಲೇಖ: ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ ಇವರ ಪತ್ರ ಸಂಖ್ಯೆ: ಪ್ರಶಾವಿಸ/15ನೇವಿಸ/9ಅ/ಪ್ರ.ಸಂ 1062/2021, ದಿನಾಂಕ:28.01.2021

******

ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀಮತಿ ಸೌಮ್ಯ ರೆಡ್ಡಿ (ಜಯನಗರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1062ಗೆ ಉತ್ತರವನ್ನು ಸಿದ್ಧಪಡಿಸಿ, ಅದರ 25 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಕ್ರಮಕ್ಕಾಗಿ ತಮಗೆ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ವಿಶ್ವಾಸಿ,

(ಪಿ.ವೆಂಕಟೇಶ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಆಹಾರ, ನಾಗರಿಕ ಸರಬರಾಜು, ಗ್ರಾಹಕರ ವ್ಯವಹಾರಗಳ
ಮತ್ತು ಕಾನೂನು ಮಾಪನಶಾಸ್ತ್ರ ಇಲಾಖೆ.

ಪ್ರತಿ:

1. ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆಯ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
3. ಸರ್ಕಾರದ ಉಪ ಕಾರ್ಯದರ್ಶಿ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆಯ ಆಪ್ತ ಸಹಾಯಕ, ವಿಕಾಸಸೌಧ, ಬೆಂಗಳೂರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1062

ವಿಧಾನ ಸಭೆ ಸದಸ್ಯರ ಹೆಸರು : ಶ್ರೀಮತಿ ಸೌಮ್ಯ ರೆಡ್ಡಿ (ಜಯನಗರ)

ಉತ್ತರಿಸಬೇಕಾದ ದಿನಾಂಕ : 05.02.2021

ಉತ್ತರಿಸುವ ಸಚಿವರು : ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ	ರಾಜ್ಯದಲ್ಲಿ ಹೊಸ ಪಡಿತರ ಚೀಟಿಯನ್ನು ಪಡೆಯಲಾಗಿರುವುದು ಹಾಗೂ ಬೆಂಗಳೂರು ಒನ್ ಕೇಂದ್ರಗಳು ಸಹ ಆನ್‌ಲೈನ್ ಸೇವೆಯನ್ನು ನಿಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಸೇವೆಯನ್ನು ಯಾವಾಗ ಪ್ರಾರಂಭಿಸಲಾಗುವುದು;	ಕೋವಿಡ್-19 ಕೊರೊನಾ ವೈರಾಣು ಪ್ರಸರಣವನ್ನು ತಡೆಗಟ್ಟುವ ಹಿನ್ನೆಲೆಯಲ್ಲಿ ಆದ್ಯತಾ (ಬಿ.ಪಿ.ಎಲ್) ಪಡಿತರ ಚೀಟಿಯ ಅರ್ಜಿ ಸ್ವೀಕಾರವನ್ನು ತಾತ್ಕಾಲಿಕವಾಗಿ ತಡೆಹಿಡಿಯಲಾಗಿದೆ. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ ಆದ್ಯತೇತರ(ಎ.ಪಿ.ಎಲ್) ಪಡಿತರ ಚೀಟಿಯನ್ನು ಪಡೆದುಕೊಳ್ಳಲು ಅವಕಾಶ ಕಲ್ಪಿಸಲಾಗಿರುತ್ತದೆ.
ಆ	ಸಾರ್ವಜನಿಕರಿಗೆ ಹೊಸ ಪಡಿತರ ಚೀಟಿ ಪಡೆಯುವ ಸಂಬಂಧ ಅರ್ಜಿಯನ್ನು ಸಲ್ಲಿಸಲು ಯಾವಾಗ ಅವಕಾಶ ಕಲ್ಪಿಸಲಾಗುತ್ತದೆ (ವಿವರ ನೀಡುವುದು)?	ಪಡಿತರ ಚೀಟಿಯನ್ನು ಫಲಾನುಭವಿಗಳಿಗೆ ನೀಡುವ ಮುನ್ನ ಕುಟುಂಬದ ಎಲ್ಲಾ ಸದಸ್ಯರ ಬಯೋಮೆಟ್ರಿಕ್ ಪಡೆಯುವುದು ಕಡ್ಡಾಯವಾಗಿರುತ್ತದೆ. ಆದ್ಯತಾ (ಪಿ.ಹೆಚ್.ಹೆಚ್) ಪಡಿತರ ಚೀಟಿಯನ್ನು ವಿತರಿಸುವ ಮುನ್ನ ಅರ್ಜಿದಾರರ ಅರ್ಹತೆಯ ಬಗ್ಗೆ ಸ್ಥಳ ತನಿಖೆಯನ್ನು ಸಿಬ್ಬಂದಿ ಮುಖಾಂತರ ನಡೆಸುವುದು ಕಡ್ಡಾಯವಾಗಿರುತ್ತದೆ. ಕೋವಿಡ್-19 ಕೊರೊನಾ ವೈರಾಣು ಪ್ರಸರಣವನ್ನು ತಡೆಗಟ್ಟುವ ಹಿನ್ನೆಲೆಯಲ್ಲಿ ಆದ್ಯತಾ (ಪಿ.ಹೆಚ್.ಹೆಚ್) ಪಡಿತರ ಚೀಟಿಯನ್ನು ಕೋರಿ ಅರ್ಜಿ ಸಲ್ಲಿಸುವುದನ್ನು ತಾತ್ಕಾಲಿಕವಾಗಿ ತಡೆಹಿಡಿಯಲಾಗಿದೆ.

ಆನಾಸ 43 ಡಿಆರ್‌ಎ 2021 (ಇ-ಆಫೀಸ್)

(ಉಮೇಶ್.ವಿ. ಕತ್ತಿ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಹಾಗೂ
ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕರ್ನಾಟಕ ಸರ್ಕಾರ

ಸಂಖ್ಯೆ:ಆನಾಸ 46 ಡಿಆರ್‌ಎ 2021 (ಇ-ಆಫೀಸ್)

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ, ನೆಲಮಹಡಿ
ಬೆಂಗಳೂರು ದಿನಾಂಕ:04.02.2021.

124
4/5
05-02-2021

ಇವರಿಂದ,

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ
ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆ

ಇವರಿಗೆ,

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ
ವಿಧಾನಸೌಧ.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ರವೀಂದ್ರ ಶ್ರೀಕಂಠಯ್ಯ (ಶ್ರೀ ರಂಗಪಟ್ಟಣ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1084 ಗೆ ಉತ್ತರ ನೀಡುವ ಬಗ್ಗೆ.

ಉಲ್ಲೇಖ: ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ ಇವರ ಪತ್ರ ಸಂಖ್ಯೆ: ಪ್ರಶಾವಿಸ/15ನೇವಿಸ/9ಅ/ಪ್ರ.ಸಂ 1084/2021, ದಿನಾಂಕ:27.01.2021

******

ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ರವೀಂದ್ರ ಶ್ರೀಕಂಠಯ್ಯ (ಶ್ರೀ ರಂಗಪಟ್ಟಣ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1084 ಗೆ ಉತ್ತರವನ್ನು ಸಿದ್ಧಪಡಿಸಿ, ಅದರ 25 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಕ್ರಮಕ್ಕಾಗಿ ತಮಗೆ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ವಿಶ್ವಾಸಿ,

(ವಿ.ವೆಂಕಟೇಶ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಆಹಾರ, ನಾಗರಿಕ ಸರಬರಾಜು, ಗ್ರಾಹಕರ ವ್ಯವಹಾರಗಳ
ಮತ್ತು ಕಾನೂನು ಮಾಪನಶಾಸ್ತ್ರ ಇಲಾಖೆ.

ಪ್ರತಿ:

1. ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆಯ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
3. ಸರ್ಕಾರದ ಉಪ ಕಾರ್ಯದರ್ಶಿ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆಯ ಆಪ್ತ ಸಹಾಯಕ, ವಿಕಾಸಸೌಧ, ಬೆಂಗಳೂರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1084

ವಿಧಾನ ಸಭೆ ಸದಸ್ಯರ ಹೆಸರು : ಶ್ರೀ ರವೀಂದ್ರ ಶ್ರೀಕಂಠಯ್ಯ (ಶ್ರೀರಂಗಪಟ್ಟಣ)

ಉತ್ತರಿಸಬೇಕಾದ ದಿನಾಂಕ : 05.02.2021

ಉತ್ತರಿಸುವ ಸಚಿವರು : ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ	ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ಆಹಾರ ಧಾನ್ಯಗಳನ್ನು ಸರಬರಾಜು ಮಾಡಲು ರೈತರು ಮತ್ತು ಸಾರ್ವಜನಿಕರಿಗೆ ಸರಿಯಾಗಿ ಸಾರಿಗೆ ವ್ಯವಸ್ಥೆ ಇಲ್ಲದ ಕಾರಣ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಇಲ್ಲ. ಸಾರ್ವಜನಿಕ ವಿತರಣಾ ಪದ್ಧತಿಯಡಿ ಟೆಂಡರ್ ಅನುಮೋದಿತ ಚಿಲ್ಲರೆ ಸಾಗಾಣಿಕೆದಾರರ ಮೂಲಕ ನ್ಯಾಯಬೆಲೆ ಅಂಗಡಿಗಳಿಗೆ ಆಹಾರಧಾನ್ಯ ಸರಬರಾಜು ಮಾಡಲಾಗುತ್ತಿದೆ. ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ಪ್ರತಿ ಮಾಹೆ ಸರ್ಕಾರ ನಿಗದಿಪಡಿಸಿದ ಪ್ರಮಾಣದಂತೆ ಪಡಿತರ ಚೀಟಿದಾರರು ಪಡಿತರ ಆಹಾರಧಾನ್ಯ ಪಡೆಯುತ್ತಿರುತ್ತಾರೆ.
ಆ	ಬಂದಿದ್ದಲ್ಲಿ, ಹೋಬಳಿವಾರು ಮತ್ತು ಹಳ್ಳಿಗಳಿಗೆ ಸರ್ಕಾರದಿಂದಲೇ ಆಹಾರ ಧಾನ್ಯಗಳನ್ನು ಮೊಬೈಲ್ ವಾಹನ ಮೂಲಕ ವಿತರಣೆ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ (ಮಾಹಿತಿ ಒದಗಿಸುವುದು)?	ಮೊಬೈಲ್ ವಾಹನದ ಮೂಲಕ ಪಡಿತರ ಆಹಾರಧಾನ್ಯವನ್ನು ವಿತರಣೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಆನಾಸ 46 ಡಿಆರ್ಎ 2021 (ಇ-ಆಫೀಸ್)

(ಉಮೇಶ ವಿ. ಕತ್ತಿ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಹಾಗೂ
ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಐ 41 ಐಎಪಿ(ಇ) 2021

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ 04.02.2021.

155
US
05/2/21

ಇವರಿಂದ:
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ,
ವಿಕಾಸಸೌಧ, ಬೆಂಗಳೂರು.

ಇವರಿಗೆ:
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ ಸಚಿವಾಲಯ,
ವಿಧಾನಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆಯ ಸದಸ್ಯರಾದ ಡಾ|| ಶ್ರೀನಿವಾಸಮೂರ್ತಿ ಕೆ. (ನೆಲಮಂಗಲ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1198ಕ್ಕೆ ಉತ್ತರಿಸುವ ಬಗ್ಗೆ.

---*---

ಮಾನ್ಯ ವಿಧಾನ ಸಭೆಯ ಸದಸ್ಯರಾದ ಡಾ|| ಶ್ರೀನಿವಾಸಮೂರ್ತಿ ಕೆ. (ನೆಲಮಂಗಲ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1198ಕ್ಕೆ ಉತ್ತರದ 25 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಅಗತ್ಯ ಕ್ರಮಕ್ಕಾಗಿ ತಮಗೆ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

ಎನ್. ಕುಮಾರ್

(ಎನ್. ಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ (ಕೈ.ಅ),
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

04/02/2021

ಕರ್ನಾಟಕ ವಿಧಾನಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1198
2. ಸದಸ್ಯರ ಹೆಸರು : ಡಾ॥ ಶ್ರೀನಿವಾಸಮೂರ್ತಿ ಕೆ. (ನೆಲಮಂಗಲ)
3. ಉತ್ತರಿಸುವ ದಿನಾಂಕ : 05.02.2021
4. ಉತ್ತರಿಸುವ ಸಚಿವರು : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	ನೆಲಮಂಗಲ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಸೋಂಪುರ ಕೈಗಾರಿಕ ಪ್ರದೇಶದಲ್ಲಿ ಬಿ.ಪಿ.ಎಲ್. ಕಂಪನಿಗೆ ಮಂಜೂರು ಮಾಡಿರುವ ಜಮೀನಿನ ವಿಸ್ತೀರ್ಣವೆಷ್ಟು, ಕಂಪನಿಯು ಸದರಿ ಜಮೀನಿನಲ್ಲಿ ಉಪಯೋಗ ಮಾಡಿಕೊಂಡಿರುವ ಜಮೀನಿನ ವಿಸ್ತೀರ್ಣವೆಷ್ಟು; (ದಾಖಲೆಗಳ ಸಮೇತ ಸಂಪೂರ್ಣ ಮಾಹಿತಿ ನೀಡುವುದು)	ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ ನೆಲಮಂಗಲ ವಿಧಾನಸಭಾ ಕ್ಷೇತ್ರದ ದಾಬಸ್‌ಪೇಟೆ 1ನೇ ಹಂತದ ಕೈಗಾರಿಕಾ ಪ್ರದೇಶದ ನಿವೇಶನ ಸಂ: 1 ಮತ್ತು 2 ರಲ್ಲಿನ ಒಟ್ಟು 149 ಎಕರೆ 5.5 ಗುಂಟೆ ಜಮೀನನ್ನು ಮೆ॥ ಬಿ.ಪಿ.ಎಲ್. ಲಿ. ಇವರಿಗೆ ಹಂಚಿಕೆ ಮಾಡಲಾಗಿದೆ. ಕಂಪನಿಯವರು ಹಂಚಿಕೆ ಪಡೆದ ಜಮೀನಿನ ಶೇಕಡಾ 5.12ರಷ್ಟು ಪ್ರದೇಶದಲ್ಲಿ ಕಟ್ಟಡವನ್ನು ನಿರ್ಮಿಸಲಾಗಿದೆ.
(ಆ)	ಬಿಪಿಎಲ್ ಕಂಪನಿಯವರು ನಿರ್ಮಾಣ ಮಾಡಿರುವ ಕಟ್ಟಡದ ವಿಸ್ತೀರ್ಣವೆಷ್ಟು; ಕಂಪನಿಯವರು ಮಾರಾಟ ಮಾಡಿರುವ ಜಮೀನಿನ ಪೈಕಿ ವಿಸ್ತೀರ್ಣದ ಜಾಗವೆಷ್ಟು; (ವಿವರ ನೀಡುವುದು)	ಭೂಸ್ವಾಧೀನಗೊಂಡ ಹಾಗೂ ಬಿ.ಪಿ.ಎಲ್.ಗೆ ಹಂಚಿಕೆಯಾಗಿರುವ ಎಲ್ಲಾ ಜಮೀನುಗಳಿಗೆ ದಿನಾಂಕ: 28.11.2006ರಂದು ಶುದ್ಧ ಕ್ರಯಪತ್ರ ಮಾಡಲಾಗಿದೆ ಹಾಗೂ ಶೇಕಡಾ 5.12ರಷ್ಟು ಕಟ್ಟಡವನ್ನು ನಿರ್ಮಿಸಲಾಗಿದೆ. ತದನಂತರದಲ್ಲಿ ಮೆ॥ ಬಿ.ಪಿ.ಎಲ್. ಲಿ.ರವರು ಈ ಕೆಳಕಂಡ ಸಂಸ್ಥೆಗಳಿಗೆ ಜಮೀನನ್ನು ಮಾರಾಟ ಮಾಡಿರುತ್ತಾರೆ ಹಾಗೂ ಸದರಿ ಘಟಕಗಳು ಅನುಷ್ಠಾನಗೊಂಡಿರುತ್ತವೆ:-
(ಇ)	ಬಿಪಿಎಲ್ ಕಂಪನಿಯು ಪ್ರಸ್ತುತ ಜಾಗದಲ್ಲಿ ಕಾರ್ಯನಿರ್ವಹಿಸುತ್ತಿದೆಯೇ; ಇಲ್ಲವಾದಲ್ಲಿ ಸದರಿ ಜಾಗದಲ್ಲಿ ಬೇರೆ ಯಾವ ಯಾವ ಸಂಸ್ಥೆಯನ್ನು ಸ್ಥಾಪಿಸಲಾಗಿದೆ; (ಸಂಸ್ಥೆಯ ಹೆಸರು ಸಮೇತ ವಿವರ ನೀಡುವುದು)	
(ಈ)	ಬಿಪಿಎಲ್ ಕಂಪನಿಯಿಂದ ಯಾವ ಸಂಸ್ಥೆಗೆ ಜಮೀನನ್ನು ಪರಭಾರೆ ಮಾಡಲಾಗಿದೆ; ಎಷ್ಟು ಮೊತ್ತಕ್ಕೆ ಪರಭಾರೆ ಮಾಡಲಾಗಿದೆ; (ಸಂಪೂರ್ಣ ವಿವರ ನೀಡುವುದು)	

Sl. No	Company Name	Extent (A-G)
1.	M/s. Maruthi Suzuki India Ltd.	33-14
2.	M/s. Maruthi Suzuki India Ltd. (purchased through M/s. Pegasus Financial Institution)	87-13.10
3.	M/s. Jindal Aluminium Ltd.	25-05.05
4.	BOC India Ltd / LIne India Ltd.	3-12.90
	Total	**149-05.05**

(ಉ)	ಬಿಪಿಎಲ್ ಸಂಸ್ಥೆಯ ವಿರುದ್ಧ ಲೋಕಾಯುಕ್ತದಿಂದ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗಿದೆಯೆ; ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು)	ಮೆ॥ ಬಿ.ಪಿ.ಎಲ್. ಲಿ. ಕಂಪನಿಯವರು ಹಂಚಿಕೆ ಪಡೆದ 149 ಎಕರೆ 5.5 ಗುಂಟೆ ಜಮೀನಿನಲ್ಲಿ ಶೇಕಡಾ 5.12ರಷ್ಟು ಕಟ್ಟಡವನ್ನು ಮಾತ್ರ ನಿರ್ಮಿಸಿ, ದಿನಾಂಕ: 28.11.2006ರಂದು ಶುದ್ಧ ಕ್ರಯಪತ್ರವನ್ನು ಪಡೆದುಕೊಂಡು ಕೈಗಾರಿಕೆಯನ್ನು ಸ್ಥಾಪಿಸುವ ಬದಲು ಬೇರೆ ಕಂಪನಿಗಳಿಗೆ ಸದರಿ ಜಮೀನನ್ನು ಮಾರಾಟ ಮಾಡಿರುವ ಕಾರಣ, ಪ್ರಕರಣದ ಕುರಿತು ಸಮಗ್ರ ತನಿಖೆಯನ್ನು ಕೈಗೊಳ್ಳಲು ಆದೇಶ ಸಂಖ್ಯೆ: ಸಿಐ 417 ಎಸ್‌ಪಿಕ್ಯೂ 2013, ದಿನಾಂಕ: 07.11.2014ರಲ್ಲಿ ಈ ಪ್ರಕರಣವನ್ನು ಮಾನ್ಯ ಲೋಕಾಯುಕ್ತರಿಗೆ ವಹಿಸಲಾಗಿದೆ. (ಆದೇಶದ ಪ್ರತಿಯನ್ನು ಅನುಬಂಧ-1ರಲ್ಲಿ ಒದಗಿಸಿದೆ.) ಈ ಪ್ರಕರಣದ ವಿಚಾರಣೆಯು ಯಾವ ಹಂತದಲ್ಲಿದೆ ಎಂಬ ಬಗ್ಗೆ ಮಾಹಿತಿ ಒದಗಿಸುವಂತೆ ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ ಇವರಿಗೆ ಬರೆದ ದಿನಾಂಕ: 11.01.2017ರ ಪತ್ರದಲ್ಲಿ ಕೋರಿದ್ದು, ಸದರಿ ಪ್ರಕರಣದಲ್ಲಿ ದಾಖಲಾತಿಗಳನ್ನು ಸಂಗ್ರಹಿಸುತ್ತಿದ್ದು, ಅಂತಿಮ ವರದಿ ತಯಾರಿಕೆಗಾಗಿ ಬಾಕಿ ಇರುತ್ತದೆ ಎಂದು ನಿಬಂಧಕರು, ಕರ್ನಾಟಕ ಲೋಕಾಯುಕ್ತ ಇವರು ದಿನಾಂಕ: 09.03.2017ರ ಪತ್ರದಲ್ಲಿ ವರದಿ ಮಾಡಿರುತ್ತಾರೆ. (ಪತ್ರಗಳ ಪ್ರತಿಯನ್ನು ಅನುಬಂಧ-2 ಮತ್ತು 3ರಲ್ಲಿ ಒದಗಿಸಿದೆ.) ಈ ಪ್ರಕರಣದ ವಿಚಾರಣೆಯು ಯಾವ ಹಂತದಲ್ಲಿದೆ ಎಂಬ ಬಗ್ಗೆ ಮತ್ತೊಮ್ಮೆ ನಿಬಂಧಕರು, ಕರ್ನಾಟಕ ಲೋಕಾಯುಕ್ತ ಇವರಿಗೆ ಬರೆದ ದಿನಾಂಕ: 07.02.2020ರ ಪತ್ರದಲ್ಲಿ ಕೋರಲಾಗಿದೆ. ಈ ಕುರಿತು ಮಾಹಿತಿ / ವರದಿ ಬಂದಿರುವುದಿಲ್ಲ. (ಪತ್ರದ ಪ್ರತಿಯನ್ನು ಅನುಬಂಧ-4 ರಲ್ಲಿ ಒದಗಿಸಿದೆ.)

(ಜಗದೀಶ ಶೆಟ್ಟರ)

ಸಂಖ್ಯೆ: ಸಿಐ 41 ಐಎಪಿ (ಇ) 2021

ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

ಅನುಬಂಧ-1

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಮೆ: ಬಿ.ಪಿ.ಎಲ್. ಲಿ. ಸಂಸ್ಥೆಗೆ ಹಂಚಿಕೆ ಮಾಡಲಾಗಿದ್ದ ಒಟ್ಟು 149 ಎಕರೆ 5½ ಗುಂಟೆ ಜಮೀನಿಗೆ ಶುದ್ಧ ಕ್ರಯಪತ್ರವನ್ನು ಮಾಡಿಕೊಟ್ಟಿರುವ ಪ್ರಕರಣದ ಸಮಗ್ರ ತನಿಖೆಗಾಗಿ ಮಾನ್ಯ ಲೋಕಾಯುಕ್ತರವರಿಗೆ ವಹಿಸುವ ಕುರಿತು.

* * * * *

ಪ್ರಸ್ತಾವನೆ :

ಮೆ: ಬಿ.ಪಿ.ಎಲ್. ಲಿ. ಸಂಸ್ಥೆಗೆ ಕಲರ್ ಟೆಲಿವಿಜನ್ ಪಿಕ್ಚರ್ ಟ್ಯೂಬ್ಸ್ ತಯಾರಿಕಾ ಘಟಕ ಸ್ಥಾಪಿಸಲು ದಾಬಸ್‌ಪೇಟೆ ಕೈಗಾರಿಕಾ ಪ್ರದೇಶದ ನಿವೇಶನ ಸಂಖ್ಯೆ: 1 ಮತ್ತು 2-ಪಿ ರಲ್ಲಿ ಎಕರೆಯೊಂದಕ್ಕೆ ₹3.50 ಲಕ್ಷಗಳ ದರದಲ್ಲಿ ಹಂಚಿಕೆ ಮಾಡಿ, ದಿನಾಂಕ: 23.05.1995ರ ಸ್ವಾಧೀನ ಪತ್ರದ ಮೂಲಕ ಒಟ್ಟು 149 ಎಕರೆ 5½ ಗುಂಟೆ (ಏಕ ಘಟಕ ಸಂಕೀರ್ಣ) ಜಮೀನು ಕಬ್ಜೆಗೆ ನೀಡಿ, ದಿನಾಂಕ: 12.04.1996ರಂದು ಗುತ್ತಿಗೆ ಕರಾರು ಪತ್ರವನ್ನು ಮಾಡಿಕೊಡಲಾಗಿದೆ.

ಮೆ: ಬಿ.ಪಿ.ಎಲ್. ಲಿ.ರವರು ದಿನಾಂಕ: 04.07.2005ರಂದು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ಮನವಿಯನ್ನು ಸಲ್ಲಿಸಿ ಪ್ರಸ್ತಾವಿತ ಜಮೀನಿಗೆ ಶುದ್ಧ ಕ್ರಯ ಪತ್ರವನ್ನು ಮಾಡಿಕೊಡುವಂತೆ ಕೋರಿರುತ್ತಾರೆ.

ಮಂಡಳಿಯ ಅಭಿವೃದ್ಧಿ ಅಧಿಕಾರಿಯು ಸ್ಥಳ ಪರಿಶೀಲನೆ ನಡೆಸಿ, ಮೆ: ಬಿ.ಪಿ.ಎಲ್. ಲಿ.ರವರು ಹಂಚಿಕೆ ಪಡೆದಿದ್ದ ಒಟ್ಟು ಜಮೀನಿನ ಪೈಕಿ ಶೇಕಡಾ 5.12ರಷ್ಟು ಜಮೀನನ್ನು ಮಾತ್ರ ಬಳಸಿಕೊಂಡು ಕೈಗಾರಿಕೆಯನ್ನು ನಡೆಸುತ್ತಿರುವರೆಂದು ವರದಿ ಸಲ್ಲಿಸಿದ್ದು, ಗುತ್ತಿಗೆ ಕರಾರು ಪತ್ರದ ಪಿ(2)(1)ರ ಅಡಿಯಲ್ಲಿನ ಷರತ್ತು ಪ್ರಕಾರ ಹಂಚಿಕೆ ಮಾಡಲ್ಪಟ್ಟ ಪ್ರದೇಶದಲ್ಲಿ ಶೇಕಡಾ 50ರಷ್ಟು ವಿಸ್ತೀರ್ಣವನ್ನು ಬಳಸಿಕೊಂಡಿರುವುದಿಲ್ಲವೆಂದು ಅದರಲ್ಲಿ ಉಲ್ಲೇಖಿಸಿದ್ದ ಮೇರೆಗೆ ಶುದ್ಧ ಕ್ರಯಪತ್ರವನ್ನು ಮಾಡಿಕೊಡಲು ಮಂಡಳಿಯು ನಿರಾಕರಿಸಿರುತ್ತದೆ. ಈ ಸಂಬಂಧ ದಿನಾಂಕ: 30.11.2005ರಂದು ಮಂಡಳಿಯು ಕಂಪನಿಗೆ ನೋಟೀಸ್ ಜಾರಿ ಮಾಡಿರುತ್ತದೆ.

ಪ್ರಸ್ತಾವಿತ 149 ಎಕರೆ 5½ ಗುಂಟೆ ಜಮೀನನ್ನು ಹಂಚಿಕೆ ಪಡೆದ ಮೇಲೆ ತಮ್ಮ ಸಂಸ್ಥೆಯು ಅನುಭವಿಸಿದ ತೊಡಕುಗಳು ಹಾಗೂ ನ್ಯಾಯಾಲಯಗಳಲ್ಲಿನ ವ್ಯಾಜ್ಯಗಳಿಂದಾಗಿ ತಮ್ಮ ಯೋಜನೆಯನ್ನು ಅನುಷ್ಠಾನಗೊಳಿಸಲು ಸಾಧ್ಯವಾಗಿರುವುದಿಲ್ಲವೆಂದು ಉಲ್ಲೇಖಿಸುತ್ತಾ, ಶುದ್ಧ ಕ್ರಯ ಪತ್ರವನ್ನು ಮಾಡಿಕೊಡಲು ಮಂಡಳಿಗೆ ಸೂಕ್ತ ನಿರ್ದೇಶನ ನೀಡುವಂತೆ ಮೆ. ಬಿ.ಪಿ.ಎಲ್. ಲಿ.ರವರು ಅಂದಿನ

ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರಿಗೆ ಸಲ್ಲಿಸಿದ್ದ ದಿನಾಂಕ: 14.09.2006ರ ಮನವಿಯಲ್ಲಿ ಕೋರಿರುತ್ತಾರೆ.

ಈ ಪ್ರಕರಣ ಕುರಿತು ಅಂದಿನ ಮಾನ್ಯ ಬೃಹತ್ ಮತ್ತು ಕೈಗಾರಿಕಾ ಸಚಿವರಿಗೆ ಮಂಡಳಿಯು ದಿನಾಂಕ: 21.10.2006ರಂದು ವಿವರವಾದ ಟಿಪ್ಪಣಿಯನ್ನು ಸಲ್ಲಿಸಿ, ಈ ಪ್ರಕರಣದಲ್ಲಿ ಕ್ರಯಪತ್ರವನ್ನು ಮಾಡಿಕೊಡಲು ಸಾಧ್ಯವಿರುವುದಿಲ್ಲ ಎಂದು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಆಕ್ಷೇಪಣೆ ವ್ಯಕ್ತಪಡಿಸಿರುತ್ತದೆ.

ಮಾನ್ಯ ಉಚ್ಚ ನ್ಯಾಯಾಲಯ ಹಾಗೂ ಮಾನ್ಯ ಸರ್ವೋಚ್ಚ ನ್ಯಾಯಾಲಯಗಳ ತೀರ್ಪು ಅಂತಿಮ ಮತ್ತು ಕಟ್ಟುಬದ್ದು ಎಂದು ಪರಿಗಣಿಸಿ, ಮೆ: ಬಿ.ಪಿ.ಎಲ್. ಕಂಪನಿಯು ರಾಜ್ಯಕ್ಕೆ ನೀಡಿರುವ ಸೇವೆ ಹಾಗೂ ಕೊಡುಗೆಯನ್ನು ಗಣನೆಗೆ ತೆಗೆದುಕೊಂಡು, ಸದರಿ ಕಂಪನಿಗೆ ಶುದ್ಧ ಕ್ರಯಪತ್ರ ನೀಡಲು ಅಂದಿನ ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಮಂಡಳಿಗೆ ನಿರ್ದೇಶನ ನೀಡಿರುತ್ತಾರೆ. ಅಂತೆಯೇ ಮಂಡಳಿಯು ಮಾನ್ಯ ಸಚಿವರ ಆದೇಶದನುಸಾರ ದಿನಾಂಕ: 28.11.2006ರಂದು ಶುದ್ಧ ಕ್ರಯಪತ್ರ ಮಾಡಿಕೊಟ್ಟಿರುತ್ತದೆ.

ಹೀಗೆ ಮಂಡಳಿಯು ಶುದ್ಧ ಕ್ರಯಪತ್ರವನ್ನು ಮಾಡಿಕೊಟ್ಟ ನಂತರ ಮೆ: ಬಿ.ಪಿ.ಎಲ್. ಲಿ. ಸಂಸ್ಥೆಯು ಸದರಿ ಜಮೀನನ್ನು ಮೆ: ಜಿಂದಾಲ್ ಅಲ್ಯೂಮಿನಿಯಮ್ ಲಿ., ಮೆ: ಬಿ.ಪಿ.ಎಲ್. (ಗ್ರೋಥ್) ಕನ್‌ಸಾರಿಟಿಯಮ್ ಹಾಗೂ ಮೆ: ಮಾರುತಿ ಸುಜುಕಿ ಕಂಪನಿಗಳಿಗೆ ಮಾರಾಟ ಮಾಡಿರುತ್ತದೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಧಾನ ಪರಿಷತ್ತಿನಲ್ಲಿ ವಿಸ್ತೃತ ಚರ್ಚೆಯಾಗಿ ಹೆಚ್ಚಿನ ತನಿಖೆಗಾಗಿ ಲೋಕಾಯುಕ್ತಕ್ಕೆ ವಹಿಸಲು ಕ್ರಮ ತೆಗೆದುಕೊಳ್ಳಲಾಗುವುದೆಂದು ಭರವಸೆ ನೀಡಲಾಗಿರುತ್ತದೆ.

ಮೇಲಿನ ಹಿನ್ನೆಲೆಯಲ್ಲಿ ಈ ಪ್ರಕರಣದಲ್ಲಿನ ವ್ಯವಹಾರವನ್ನು ಕೂಲಂಕಷವಾಗಿ ಪುನರ್ ಪರಿಶೀಲನೆಗೆ ಒಳಪಡಿಸಲು ಸರ್ಕಾರವು ಬಯಸಿದೆ. ಅಂತೆಯೇ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ಸಿಐ 417 ಎಸ್‌ಪಿಕ್ಯೂ 2013,
ಬೆಂಗಳೂರು, ದಿನಾಂಕ: 07.11.2014

ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕು, ಸೋಂಪುರ ಹೋಬಳಿ, ಎಡೇಹಳ್ಳಿ ಗ್ರಾಮದ ಬಳಿಯ ದಾಬಸ್‌ಪೇಟೆ ಕೈಗಾರಿಕಾ ಪ್ರದೇಶದ ನಿವೇಶನ ಸಂಖ್ಯೆ: 1 ಮತ್ತು 2ಪಿ (ಭಾಗ)ರಲ್ಲಿನ 149 ಎಕರೆ 5.5 ಗುಂಟೆ ವಿಸ್ತೀರ್ಣದ ನಿವೇಶನವನ್ನು ಮೆ: ಬಿ.ಪಿ.ಎಲ್. ಲಿ. ಕಂಪನಿಗೆ ಹಂಚಿಕೆ ಮಾಡಿದ್ದು, ಸದರಿ ಕಂಪನಿಯು ಹಂಚಿಕೆ ಮಾಡಲ್ಪಟ್ಟಿದ್ದ ವಿಸ್ತೀರ್ಣದ ನಿವೇಶನದ ಪೈಕಿ ಶೇಕಡಾ

5.12ರಷ್ಟನ್ನು ಮಾತ್ರವೇ ಬಳಸಿಕೊಂಡಿದ್ದು, ಶುದ್ಧ ಕ್ರಯಪತ್ರವನ್ನು ಮಾಡಿಕೊಡಲು ಸಾಧ್ಯವಿಲ್ಲದಿರುವ ಬಗ್ಗೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ತೀವ್ರ ಆಕ್ಷೇಪಣೆಯನ್ನು ವ್ಯಕ್ತಪಡಿಸಿದ್ದರೂ ಸಹ ಅಂದಿನ ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರಾದ ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ರವರು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಕಡತ ಸಂಖ್ಯೆ: ಐಎಡಿಬಿ/ 13125 (II)/ 2006-07ರಲ್ಲಿ ದಿನಾಂಕ: 04.11.2006ರಂದು ಮಾಡಿರುವ ಆದೇಶದ ಮೇರೆಗೆ ದಿನಾಂಕ: 28.11.2006ರಂದು ಶುದ್ಧ ಕ್ರಯಪತ್ರವನ್ನು ಮಾಡಿಕೊಡಲಾಗಿರುತ್ತದೆ. ಸದರಿ ವಿಸ್ತೀರ್ಣದಲ್ಲಿ ತಮ್ಮ ಯೋಜನೆಯನ್ನು ಅನುಷ್ಠಾನಗೊಳಿಸಿ, ಕೈಗಾರಿಕೆಯನ್ನು ಸ್ಥಾಪಿಸುವ ಬದಲು ಮೆ: ಬಿ.ಪಿ.ಎಲ್. ಲಿ.ರವರು ಬೇರೆ ಕಂಪನಿಗಳಿಗೆ ಸದರಿ ಜಮೀನನ್ನು ಮಾರಾಟ ಮಾಡಿರುತ್ತಾರೆ.

ಈ ಪ್ರಕರಣದಲ್ಲಿನ ಇಡೀ ವ್ಯವಹಾರವು ಸಂಶಯಾಸ್ಪದವಾಗಿದ್ದು, ಸಮಗ್ರವಾದ ತನಿಖೆಯ ಅಗತ್ಯತೆಯನ್ನು ಸರ್ಕಾರವು ಮನಗಂಡಿರುತ್ತದೆ. ಅಂತೆಯೇ ಈ ಪ್ರಕರಣವನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 7ರ ಉಪ ಕಲಂ (2-A)ರನ್ವಯ ಸಮಗ್ರ ತನಿಖೆಗಾಗಿ ಮಾನ್ಯ ಲೋಕಾಯುಕ್ತರಿಗೆ ವಹಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎ.ಬಿ. ರಾಮಕೃಷ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ (ಕೈಅ),
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಇವರಿಗೆ,

ಸಂಕಲನಕಾರರು, ಕರ್ನಾಟಕ **ವಿಶೇಷ** ರಾಜ್ಯಪತ್ರ, ಬೆಂಗಳೂರು - ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಿ, ಪ್ರಕಟಿಸಿದ 50 ಪ್ರತಿಗಳನ್ನು ಸರ್ಕಾರದ ಅಧೀನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಕೈಗಾರಿಕಾಭಿವೃದ್ಧಿ ಶಾಖೆ ಇವರಿಗೆ ಒದಗಿಸಲು ಕೋರಿದೆ.

ಪ್ರತಿ

1. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು.
2. ಮಾನ್ಯ ಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬಹುಮಹಡಿಗಳ ಕಟ್ಟಡ, ಕೆ.ಆರ್. ವೃತ್ತ, ಬೆಂಗಳೂರು.
3. ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
4. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಮತ್ತು ಕಾರ್ಯ ನಿರ್ವಾಹಕ ಸದಸ್ಯರು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, } ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ
6. ಸರ್ಕಾರದ ಅಪರ ಕಾರ್ಯದರ್ಶಿಯವರ ಆಪ್ತ ಸಹಾಯಕರು, } ವಿಕಾಸಸೌಧ, ಬೆಂಗಳೂರು
7. ವಾರದ ಗೆಜೆಟ್ - 4 ಪ್ರತಿಗಳು
8. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

ಅನುಬಂಧ-2

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಐ 417 ಎಸ್‌ಪಿಕ್ಯೂ 2013

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ 11.01.2017.

ಇವರಿಂದ:
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ,
ವಿಕಾಸಸೌಧ, ಬೆಂಗಳೂರು.

ಇವರಿಗೆ:
ರಿಜಿಸ್ಟ್ರಾರ್,
ಕರ್ನಾಟಕ ಲೋಕಾಯುಕ್ತ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು - 560 001.

ಮಾನ್ಯರೆ,

ವಿಷಯ: ದಾಬಸ್‌ಪೇಟೆ ಕೈಗಾರಿಕಾ ಪ್ರದೇಶದಲ್ಲಿ ಮೆ: ಬಿ.ಪಿ.ಎಲ್ ಲಿಮಿಟೆಡ್‌ಗೆ ಹಂಚಿಕೆ ಮಾಡಲಾಗಿದ್ದ 149 ಎಕರೆ 5.5 ಗುಂಟೆ ಪ್ರದೇಶದ ಕುರಿತು.

ಉಲ್ಲೇಖ: 1) ಸರ್ಕಾರದ ಆದೇಶ ಸಂಖ್ಯೆ: ಸಿಐ 417 ಎಸ್‌ಪಿಕ್ಯೂ 2013, ದಿನಾಂಕ: 07.11.2014.
2) ಸಮಸಂಖ್ಯೆಯ ಸರ್ಕಾರದ ಪತ್ರ ದಿನಾಂಕ 20.11.2014.
3) ಟಿಪ್ಪಣಿ ಸಂಖ್ಯೆ: ಮುಮಂಆಕಾ/2259/2016-17, ದಿನಾಂಕ 30.11.2016.

---*---

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ನೆಲಮಂಗಲ ತಾಲ್ಲೂಕು, ಸೋಂಪುರ ಹೋಬಳಿ, ಎಡೇಹಳ್ಳಿ ಗ್ರಾಮದ ಬಳಿಯ ದಾಬಸ್‌ಪೇಟೆ ಕೈಗಾರಿಕಾ ಪ್ರದೇಶದಲ್ಲಿ ಭೂಸ್ವಾಧೀನಪಡಿಸಿಕೊಂಡಿದ್ದ 276-22 ಎಕರೆ ಜಮೀನಿನ ಪೈಕಿ ಮೆ: ಬಿ.ಪಿ.ಎಲ್ ಲಿಮಿಟೆಡ್ ಸಂಸ್ಥೆಗೆ ಹಂಚಿಕೆ ಮಾಡಲಾಗಿದ್ದ 149-5½ ಎಕರೆ ಜಮೀನಿಗೆ ಶುದ್ಧ ಕ್ರಯಪತ್ರವನ್ನು ಮಾಡಿಕೊಟ್ಟಿರುವ ಪ್ರಕರಣದಲ್ಲಿನ ಇಡೀ ವ್ಯವಹಾರವು ಸಂಶಯಾಸ್ಪದವಾಗಿದೆ ಎಂದು ಸರ್ಕಾರವು ಮನಗಂಡಿದ್ದು, ಉಲ್ಲೇಖ (1)ರ ಆದೇಶದನ್ವಯ ಈ ಪ್ರಕರಣವನ್ನು ಸಮಗ್ರ ತನಿಖೆಗಾಗಿ ಮಾನ್ಯ ಲೋಕಾಯುಕ್ತರಿಗೆ ವಹಿಸಿ ಆದೇಶಿಸಲಾಗಿದೆ. ಈ ಪ್ರಕರಣದ ತನಿಖೆಗಾಗಿ ಸಂಬಂಧಪಟ್ಟ ಕಡತಗಳ ದೃಢೀಕೃತ ದಾಖಲೆಗಳನ್ನು ಉಲ್ಲೇಖ (2)ರ ಸರ್ಕಾರದ ಪತ್ರದಲ್ಲಿ ಮಾನ್ಯ ಲೋಕಾಯುಕ್ತರಿಗೆ ಸಲ್ಲಿಸಲಾಗಿದೆ.

...2)

ಹೊರಡಿಸಿದೆ
ದಿನಾಂಕ 13/1/17

O/C
ಮುದ್ರಾಂಕ ನಕಲು ಕೊಟ್ಟಿದೆ.

